ಸಂಪುಟ: 06 ಸಂಚಿಕೆ: 198 ಪುಟಗಳು: 08 ಶನಿವಾರ 03 ಅಕ್ಟೋಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 + 91 8035621249 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಯಾವುದೇ ಕಷ್ಟ ಬಂದರು ತುಟಿಯಲ್ಲಿ ಕೊಂಚ ನಗುವಿರಲಿ.. ಯಾವುದೇ ಸಮಯದಲ್ಲಿ ಸೋತರು ಅಲ್ಲಿ ಬೇಸರದ ಬದಲು ಚಿಕ್ಕ ನಗುವಿರಲಿ.. ಯಾಕೆಂದರೆ, ನಮ್ಮನ್ನು ಯಾರು ನಗಿಸುವುದಿಲ್ಲ. ನಮ್ಮ ಕಾಳಜಿ ನಾವೇ ಮಾಡಿಕೊಳ್ಳೋಣ.

## ಕಾವೇರಿ ನೀರು ಹರಿವು 2,000 ಕ್ಯೂಸೆಕ್‌ಗೆ ಇಳಿಸಲು CWMAಗೆ ಕರ್ನಾಟಕ ಮನವಿ: ಸಚಿವ ಚಲುವರಾಯಸ್ವಾಮಿ

• ಉದಯವಾಹಿನಿ, ಬೆಂಗಳೂರು

ಕಾವೇರಿ ಜಲಾನಯನ ಪ್ರದೇಶದಲ್ಲಿ ತಲೆದೋರಿರುವ ತೀವ್ರ ಬರ ಪರಿಸ್ಥಿತಿ ಮತ್ತು ಜಲಾಶಯಗಳಲ್ಲಿ ನೀರಿನ ಅಭಾವದ ಹಿನ್ನೆಲೆಯಲ್ಲಿ, ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರವು ನಡೆದ 58ನೇ ಸಭೆಯಲ್ಲಿ ನೀಡಿದ ಆದೇಶವನ್ನು ಮರುಪರಿಶೀಲಿಸುವಂತೆ ಕೋರಿ ಕರ್ನಾಟಕ ಸರ್ಕಾರ ಇಂದು ಪ್ರಾಧಿಕಾರಕ್ಕೆ ಅಧಿಕೃತ ಮನವಿ ಸಲ್ಲಿಸಿದೆ ಎಂದು ಜಲ ಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಸಭೆಯಲ್ಲಿ ಮುಂದಿನ 15 ದಿನಗಳ ಕಾಲ ತಮಿಳುನಾಡಿಗೆ ಬಿಳಿಗುಂಡ್ಲುವಿನಲ್ಲಿ ದಿನಕ್ಕೆ 4,000 ಕ್ಯೂಸೆಕ್ ನೀರು ಹರಿಸಲು ಪ್ರಾಧಿಕಾರ ನಿರ್ದೇಶನ ನೀಡಿತ್ತು. ಕರ್ನಾಟಕದಲ್ಲಿ ನೈರುತ್ಯ ಮಾನ್ಸೂನ್ ಸಂಪೂರ್ಣ ಮುಕ್ತಾಯಗೊಂಡಿದ್ದು, ಕೃಷ್ಣರಾಜಸಾಗರ, ಹೇಮಾವತಿ, ಹಾರಂಗಿ ಮತ್ತು ಕಬಿನಿ ಜಲಾಶಯಗಳಿಗೆ ಒಳಹರಿವು ತೀವ್ರವಾಗಿ ಕ್ಷೀಣಿಸಿದೆ.

ಕಾವೇರಿ ಕಣಿವೆಯ ಸುಮಾರು 47 ತಾಲ್ಲೂಕುಗಳನ್ನು ಈಗಾಗಲೇ ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದ್ದು, ಇಡೀ ಕಣಿವೆ ಪ್ರದೇಶ ತೀವ್ರ ಬರಗಾಲಕ್ಕೆ ಸಿಲುಕಿದೆ. ಆದಾಗ್ಯೂ ಪ್ರಸಕ್ತ ಜಲ ವರ್ಷದಲ್ಲಿ ಪ್ರಾಧಿಕಾರದ ಎಲ್ಲಾ ನಿರ್ದೇಶನಗಳನ್ನು ಕರ್ನಾಟಕ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದು, ಜೂನ್ 1ರಿಂದ ಸೆಪ್ಟೆಂಬರ್ 30ರವರೆಗೆ ಬಿಳಿಗುಂಡ್ಲುವಿನಲ್ಲಿ 44.21 ಟಿಎಂಸಿ ನೀರು ದಾಖಲಾಗಿದೆ. ಮತ್ತೊಂದೆಡೆ, ತಮಿಳುನಾಡಿಗೆ ಅನುಕೂಲಕರವಾದ ಈಶಾನ್ಯ ಮಾನ್ಸೂನ್ ಸಾಮಾನ್ಯ ಅಥವಾ ಉತ್ತಮವಾಗಿರಲಿದ್ದು, ಅಲ್ಲಿ ಒಳಹರಿವು ಹೆಚ್ಚುವ ಸಾಧ್ಯತೆಯಿದೆ ಎಂದಿದ್ದಾರೆ. ಈ ಎಲ್ಲಾ ವಾಸ್ತವಾಂಶಗಳ ಆಧಾರದ ಮೇಲೆ, ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಿಂದ ಗಣನೀಯ ಪ್ರಮಾಣದ ನೀರನ್ನು ಬಿಡುಗಡೆ ಮಾಡಲು ಸಾಧ್ಯವೇ ಇಲ್ಲದ ಇಕ್ಕಟ್ಟಿನಲ್ಲಿ ರಾಜ್ಯವಿದೆ. ಪ್ರಾಧಿಕಾರವು ತನ್ನ ಹಿಂದಿನ ನಿರ್ಧಾರವನ್ನು ಮರುಪರಿಶೀಲಿಸಿ, ಬಿಳಿಗುಂಡ್ಲುವಿನಲ್ಲಿ ಹರಿಸಬೇಕಾದ ನೀರಿನ ಪ್ರಮಾಣವನ್ನು ದಿನಕ್ಕೆ 2,000 ಕ್ಯೂಸೆಕ್‌ಗೆ ಇಳಿಸುವ ಮೂಲಕ ರಾಜ್ಯದ ಸಂಕಷ್ಟಕ್ಕೆ ಸ್ಪಂದಿಸಬೇಕೆಂದು ಪ್ರಾಧಿಕಾರಕ್ಕೆ ವಿನಂತಿಸಲಾಗಿದೆ ಎಂದು ಜಲ ಸಂಪನ್ಮೂಲ ಸಚಿವರು ವಿವರಿಸಿದ್ದಾರೆ.



ರಾಷ್ಟ್ರಪಿತ ಮಹಾತ್ಮ ಗಾಂಧಿಯವರ 157ನೇ ಜನ್ಮದಿನದ ನಿಮಿತ್ತ ದೇಶದ ನಾಗರಿಕರ ಪರವಾಗಿ ನಾನು ಅವರಿಗೆ ಗೌರವಪೂರ್ವಕ ನಮನಗಳನ್ನು ಸಲ್ಲಿಸುವೆ. ಗಾಂಧಿಯವರ ಜೀವನ ಮತ್ತು ಆದರ್ಶಗಳಿಗೆ ಜಗತ್ತಿನಾದ್ಯಂತ ಅಪಾರ ಗೌರವವಿದೆ. ವಿಶ್ವದ ಅನೇಕ ಭಾಗಗಳಲ್ಲಿ ಯುದ್ಧ ಮತ್ತು ಸಂಘರ್ಷದ ವಾತಾವರಣವಿದ್ದು, ಇದು ಎಲ್ಲಾ ರಾಷ್ಟ್ರಗಳ ಮೇಲೂ ಪರಿಣಾಮ ಬೀರುತ್ತಿದೆ. ಇಂತಹ ಕಠಿಣ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರ ಶಾಂತಿ, ಸತ್ಯ ಮತ್ತು ಅಹಿಂಸೆಯ ಸಂದೇಶಗಳು ಇಡೀ ಜಗತ್ತಿಗೆ ಎಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿವೆ. 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತ ನಿರ್ಮಿಸುವ ರಾಷ್ಟ್ರೀಯ ಗುರಿಯತ್ತ ಭಾರತ ಮುನ್ನಡೆಯುತ್ತಿದ್ದು, ಅಭಿವೃದ್ಧಿಯ ಪ್ರಯೋಜನಗಳಿಂದ ಯಾವುದೇ ನಾಗರಿಕರು ವಂಚಿತರಾಗದಂತೆ ಸಹಾನುಭೂತಿ ಮತ್ತು ಒಳಗೊಳ್ಳುವಿಕೆಯ ಮೌಲ್ಯಗಳಿಗೆ ಆದ್ಯತೆ ನೀಡಲಾಗುತ್ತಿದೆ. ಈ ದೃಷ್ಟಿಕೋನವು ಸರ್ವೋದಯ ಆದರ್ಶವನ್ನು ಪ್ರತಿಬಿಂಬಿಸುತ್ತದೆ. ಈ ಶುಭ ಸಂದರ್ಭದಲ್ಲಿ, ನಮ್ಮ ನೈತಿಕ ನಡವಳಿಕೆ ಮತ್ತು ಸಕ್ರಿಯ ಭಾಗವಹಿಸುವಿಕೆಯ ಮೂಲಕ ಸಬಲ, ಅಭಿವೃದ್ಧಿಶೀಲ ಮತ್ತು ಆತ್ಮನಿರ್ಭರ ಭಾರತವನ್ನು ನಿರ್ಮಿಸುವ ನಮ್ಮ ಬದ್ಧತೆಯನ್ನು ನಾವೆಲ್ಲರೂ ಪುನರುಚ್ಚರಿಸೋಣ ಎಂದು ಅವರು ತಿಳಿಸಿದರು.

# ಗಾಂಧಿ, ಶಾಸ್ತ್ರಿಗೆ ಮುರ್ಮು ನಮೋ ನಮನ



1 ಯುಪಿಎಸ್‌ಸಿಯ 100 ವರ್ಷಗಳ ಪಯಣ ಒಂದು ಸಂಭ್ರಮಾಚರಣೆ ಕಾರ್ಯಕ್ರಮ

2 ಯುಪಿಎಸ್‌ಸಿ ಮೇಲಿನ ನಂಬಿಕೆ ಮಾತ್ರ ದೃಢವಾಗಿ ಉಳಿದಿದೆ ಎಂದ ಪ್ರಧಾನಿ ನರೇಂದ್ರ ಮೋದಿ

3 ಆಯೋಗದ 100 ಐತಿಹಾಸಿಕ ನಿರ್ಧಾರಗಳನ್ನು ಒಳಗೊಂಡ ಪುಸ್ತಕ, ಶತಮಾನೋತ್ಸವ ಸ್ಮರಣಾರ್ಥ ನಾಣ್ಯ ಬಿಡುಗಡೆ

**ಜೈ ಜವಾನ್ ಜೈ ಕಿಸಾನ್**

• ಉದಯವಾಹಿನಿ, ನವದೆಹಲಿ

ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಅಂಗವಾಗಿ ಗೌರವ ನಮನ ಸಲ್ಲಿಸಿದರು. ನವದೆಹಲಿಯ ರಾಜಘಾಟ್‌ಗೆ ತೆರಳಿದ ಪ್ರಧಾನಿ ನರೇಂದ್ರ ಮೋದಿ ಅವರು ಮಹಾತ್ಮ ಗಾಂಧೀಜಿ ಅವರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು. ಗಾಂಧೀಜಿ ಪ್ರತಿಪಾದಿಸಿದ ಸತ್ಯ, ಅಹಿಂಸೆ, ಸರಳತೆ ಮತ್ತು ಸ್ವಚ್ಛತೆಯ ಮೌಲ್ಯಗಳನ್ನು ಸ್ಮರಿಸಿದ ಅವರು, ದೇಶದ ಜನರು ಗಾಂಧೀಜಿ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಕೂಡ ಗಾಂಧೀಜಿ ಅವರ ಸ್ಮಾರಕಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ವಹಿಸಿದ ಐತಿಹಾಸಿಕ ಪಾತ್ರ ಹಾಗೂ ಸಮಾಜದಲ್ಲಿ ಶಾಂತಿ, ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಬಲಪಡಿಸಲು ಅವರು ನೀಡಿದ ಕೊಡುಗೆಯನ್ನು ಸ್ಮರಿಸಲಾಯಿತು. ಇದೇ ಸಂದರ್ಭದಲ್ಲಿ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿಯನ್ನೂ ದೇಶಾದ್ಯಂತ ಆಚರಿಸಲಾಯಿತು. ವಿಜಯ್ ಘಾಟ್‌ನಲ್ಲಿರುವ ಶಾಸ್ತ್ರಿ ಅವರ ಸ್ಮಾರಕಕ್ಕೆ ತೆರಳಿದ ಪ್ರಧಾನಿ ಮೋದಿ ಪುಷ್ಪನಮನ ಸಲ್ಲಿಸಿದರು. ಮಹಾತ್ಮ ಗಾಂಧೀಜಿ ಅವರ 157ನೇ ಜನ್ಮದಿನದ ಅಂಗವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಶುಕ್ರವಾರ ನವದೆಹಲಿ ರಾಜಘಾಟ್‌ಗೆ ತೆರಳಿ ಗೌರವ ನಮನ ಸಲ್ಲಿಸಿದರು. ದೇಶಾದ್ಯಂತ ಗಾಂಧಿ ಜಯಂತಿಯನ್ನು ಆಚರಿಸಲಾಗುತ್ತಿದ್ದು, ಶಾಂತಿ, ಅಹಿಂಸೆ ಹಾಗೂ ಸ್ವಚ್ಛತೆಯ ಕುರಿತಾದ ಗಾಂಧೀಜಿಯವರ ಸಂದೇಶವನ್ನು ಸ್ಮರಿಸಲಾಗುತ್ತಿದೆ. ರಾಜಘಾಟ್‌ಗೆ ಆಗಮಿಸಿದ ಪ್ರಧಾನಿ ಮೋದಿ, ಗಾಂಧೀಜಿಯವರ ಸಮಾಧಿಯಲ್ಲಿ ನಡೆದ ಸರ್ವಧರ್ಮ ಪ್ರಾರ್ಥನೆಯಲ್ಲಿ ಭಾಗವಹಿಸಿ ನಮನ ಸಲ್ಲಿಸಿದರು.

ಇದೇ ವೇಳೆ, ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನದ ಅಂಗವಾಗಿ ಪ್ರಧಾನಿ ಮೋದಿ ದೆಹಲಿಯ ವಿಜಯ್ ಘಾಟ್‌ಗೆ ತೆರಳಿ ಗೌರವ ಸಲ್ಲಿಸಿದರು. ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಕೂಡ ರಾಜಘಾಟ್‌ನಲ್ಲಿ ನಡೆದ ಸರ್ವಧರ್ಮ ಪ್ರಾರ್ಥನೆಯಲ್ಲಿ ಭಾಗವಹಿಸಿ ಮಹಾತ್ಮ ಗಾಂಧೀಜಿಗೆ ನಮನ ಸಲ್ಲಿಸಿದರು. ಬಳಿಕ ವಿಜಯ್ ಘಾಟ್‌ನಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರಿಗೆ ಗೌರವ ಸಲ್ಲಿಸಿದರು. ದೆಹಲಿ ಲೆಫ್ಟಿನೆಂಟ್ ಗವರ್ನರ್ ತರಣ್‌ಜಿತ್ ಸಿಂಗ್ ಸಂಧು, ಕೇಂದ್ರ ಸಚಿವ ಮನೋಹರ್ ಲಾಲ್ ಖಟ್ಟರ್, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹಾಗೂ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಸೇರಿದಂತೆ ಹಲವು ಗಣ್ಯರು ರಾಜಘಾಟ್‌ನಲ್ಲಿ ಮಹಾತ್ಮ ಗಾಂಧೀಜಿಗೆ ಪುಷ್ಪ ನಮನ ಸಲ್ಲಿಸಿದರು. ರಾಜಸ್ಥಾನದ ಜೈಪುರದಲ್ಲಿ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಅವರು ರಾಜಸ್ಥಾನ ಸಚಿವಾಲಯದಲ್ಲಿ ಮಹಾತ್ಮ ಗಾಂಧೀಜಿಗೆ ಪುಷ್ಪ ನಮನ ಸಲ್ಲಿಸಿದರು. ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನದ ಅಂಗವಾಗಿಯೂ ಅವರು ಗೌರವ ಸಲ್ಲಿಸಿದರು.

ಹರಿಯಾಣದ ಗುರುಗ್ರಾಮದಲ್ಲಿ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರು ಸ್ವಚ್ಛ ಭಾರತ ಅಭಿಯಾನದಲ್ಲಿ ಪಾಲ್ಗೊಂಡು, ನಗರವನ್ನು ಸ್ವಚ್ಛವಾಗಿಡುವಂತೆ ಜನರಿಗೆ ಮನವಿ ಮಾಡಿದರು.

ಆಂಧ್ರಪ್ರದೇಶದ ವಿಜಯವಾಡದಲ್ಲಿ ಗಾಂಧಿ ಜಯಂತಿ ಅಂಗವಾಗಿ ಸ್ವಚ್ಛತಾ ಹಿ ಸೇವಾ ಕಾರ್ಯಕ್ರಮದ ಭಾಗವಾಗಿ 'ಸ್ವಚ್ಛಾಥಾನ್ 2026' ಕಾರ್ಯಕ್ರಮ ಆಯೋಜಿಸಲಾಗಿತ್ತು.

ಗಾಂಧಿ ಜಯಂತಿಯ ಮುನ್ನಾದಿನ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಹಾತ್ಮ ಗಾಂಧೀಜಿಗೆ ಗೌರವ ಸಲ್ಲಿಸಿ, ಜಗತ್ತಿನ ಹಲವು ಭಾಗಗಳಲ್ಲಿ ಸಂಘರ್ಷಗಳು ಮುಂದುವರಿದಿರುವ ಹಿನ್ನೆಲೆಯಲ್ಲಿ ಅವರ ಶಾಂತಿ ಮತ್ತು ಅಹಿಂಸೆಯ ಸಂದೇಶಕ್ಕೆ ಹೆಚ್ಚಿನ ಪ್ರಸ್ತುತತೆ ಇದೆ ಎಂದು ಹೇಳಿದರು. ಗಾಂಧಿ ಜಯಂತಿಯಾಗಿ ಆಚರಿಸಲಾಗುತ್ತಿರುವ ಮಹಾತ್ಮ ಗಾಂಧೀಜಿಯವರ 157ನೇ ಜನ್ಮದಿನದಂದು ದೇಶದ ನಾಗರಿಕರ ಪರವಾಗಿ ರಾಷ್ಟ್ರಪಿತನಿಗೆ ಗೌರವಪೂರ್ವಕ ನಮನ ಸಲ್ಲಿಸುತ್ತೇನೆ ಎಂದು ರಾಷ್ಟ್ರಪತಿ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ. ಜಾಗತಿಕ ಸಮುದಾಯದಲ್ಲಿ ಗಾಂಧೀಜಿಯವರ ಜೀವನ ಮತ್ತು ಆದರ್ಶಗಳಿಗೆ ವ್ಯಾಪಕ ಗೌರವವಿದೆ.

**ಅಹಿಂಸಾ ದಿನವಾಗಿ ಘೋಷಣೆ**

ಗಾಂಧಿ ಜಯಂತಿಯಿಂದ ಅ.31ರಂದು ನಡೆಯಲಿರುವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದವರೆಗೆ ಸುಮಾರು 30 ದಿನಗಳ ಕಾಲ ದೇಶಾದ್ಯಂತ ಎಲ್ಲರೂ ಸ್ವಚ್ಛ ಭಾರತ ಅಭಿಯಾನವನ್ನು ಕೈಗೊಳ್ಳಬೇಕು. ದೇಶದ ಪ್ರತಿಯೊಬ್ಬರೂ ಇದರಲ್ಲಿ ಭಾಗಿಯಾಗುವಂತೆ ಮನವಿ ಮಾಡಲಾಗಿದೆ ಎಂದು ಹೇಳಿದರು. ಮಹಾತ್ಮ ಗಾಂಧೀಜಿ ಎಂದೇ ಪ್ರಸಿದ್ಧರಾದ ಮೋಹನದಾಸ್ ಕರಮಚಂದ್ ಗಾಂಧೀಜಿ ಅವರು 1869ರ ಅಕ್ಟೋಬರ್ 2ರಂದು ಗುಜರಾತ್‌ನ ಪೋರಬಂದರ್‌ನಲ್ಲಿ ಜನಿಸಿದರು. ಅವರ ಜನ್ಮದಿನವನ್ನು ಪ್ರತಿವರ್ಷ ಗಾಂಧಿ ಜಯಂತಿಯಾಗಿ ಆಚರಿಸಲಾಗುತ್ತದೆ. ಗಾಂಧೀಜಿಯವರ ಅಹಿಂಸೆಯ ತತ್ವ ಮತ್ತು ಸಂದೇಶವನ್ನು ಜಾಗತಿಕವಾಗಿ ಹರಡುವ ಉದ್ದೇಶದಿಂದ ವಿಶ್ವಸಂಸ್ಥೆ ಅಕ್ಟೋಬರ್ 2ನ್ನು ಅಂತಾರಾಷ್ಟ್ರೀಯ ಅಹಿಂಸಾ ದಿನವಾಗಿ ಘೋಷಿಸಿದೆ.

**ಚಿಗುರೊಡೆದ ಭಾರತದ ಕನಸುಗಳು**

ಸ್ವಾತಂತ್ರ್ಯ ಪೂರ್ವ 1926ರ ಸಮಯದಲ್ಲಿ ಯುಪಿಎಸ್‌ಸಿಗೆ ಅಡಿಪಾಯ ಹಾಕಿದಾಗ ಅಂದಿನ ಆದ್ಯತೆಗಳು ಭಿನ್ನವಾಗಿದ್ದವು. ಸ್ವಾತಂತ್ರ್ಯದ ಬಳಿಕ ಸ್ವತಂತ್ರ ಭಾರತದ ಹೊಸ ಕನಸುಗಳು ಮೊಳಕೆಯೊಡೆದವು. ಕಳೆದ 10 ದಶಕಗಳ ಅವಧಿಯಲ್ಲಿ ಯುಪಿಎಸ್‌ಸಿ ತನ್ನ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿದೆ.

## ಸಿಎಂ ವಿರುದ್ಧ ಎಫ್‌ಐಆರ್ ದಾಖಲಿಸಲು ಪೊಲೀಸ್ ಆಯುಕ್ತರಿಗೆ ಬಿಜೆಪಿ ಆಗ್ರಹ

• ಉದಯವಾಹಿನಿ, ಬೆಂಗಳೂರು

ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಆವರಣದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರು ಹಾಗೂ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿರುವುದರ ವಿರುದ್ಧ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಸಂಬಂಧ ರಾಜ್ಯ ಬಿಜೆಪಿ ಘಟಕವು ಇಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರಿಗೆ ಅಧಿಕೃತ ದೂರು ಸಲ್ಲಿಸಿದ್ದು, ಹೈಕೋರ್ಟ್ ಆದೇಶ ಉಲ್ಲಂಘನೆ ಆರೋಪದಡಿ ಪ್ರಕರಣ ದಾಖಲಿಸಿ, ಸಿಎಂ ಹಾಗೂ ಸಚಿವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದೆ.

ಎಸ್‌ಐಆರ್ ಪ್ರಕ್ರಿಯೆ ವಿರೋಧಿಸಿ ಅ.1ರಂದು ಸಿಎಂ ಮತ್ತು ಅವರ ಸಂಪುಟದ ಸಹೋದ್ಯೋಗಿಗಳು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಆವರಣದಲ್ಲಿ ಧರಣಿ ನಡೆಸಿರುವುದು ಅತ್ಯಂತ ಗಂಭೀರ ವಿಚಾರವಾಗಿದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ, ಫ್ರೀಡಂ ಪಾರ್ಕ್ ಹೊರತಾಗಿ ನಗರದ ಇತರ ಭಾಗಗಳಲ್ಲಿ ಧರಣಿ ಅಥವಾ ಪ್ರತಿಭಟನೆ ನಡೆಸುವುದನ್ನು ನಿಷೇಧಿಸಿ ಹೈಕೋರ್ಟ್ ಆದೇಶಿಸಿದೆ. ಈ ಆದೇಶವನ್ನು ಮೀರಿ, ಯಾವುದೇ ಪೂರ್ವಾನುಮತಿಯಿಲ್ಲದೆ ಚುನಾವಣಾ ಕಚೇರಿಯಂತಹ ಸಂವಿಧಾನಾತ್ಮಕ ಸಂಸ್ಥೆಯ ಆವರಣದಲ್ಲಿ ಪ್ರತಿಭಟನೆ ನಡೆಸಿರುವುದು ನ್ಯಾಯಾಲಯದ ಆದೇಶದ ನೇರ ಉಲ್ಲಂಘನೆಯಾಗಿದೆ ಎಂದು ಬಿಜೆಪಿ ನಾಯಕರು ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಚುನಾವಣಾ ಆಯೋಗ ಯಾವುದೇ ರಾಜಕೀಯ ಪಕ್ಷ ಅಥವಾ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಯಲ್ಲ, ಬದಲಿಗೆ ಸ್ವತಂತ್ರ ಹಾಗೂ ಸಂವಿಧಾನಾತ್ಮಕ ಸಂಸ್ಥೆಯಾಗಿದೆ.

## ದಸರಾಗೆ ರಾಜಮಾತೆ ಪ್ರಮೋದಾದೇವಿ ಒಡೆಯರ್ ಆಹ್ವಾನಿಸಿದ ಜಿಲ್ಲಾಡಳಿತ

• ಉದಯವಾಹಿನಿ, ಬೆಂಗಳೂರು

ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ನೇತೃತ್ವದಲ್ಲಿ ಮೈಸೂರು ಜಿಲ್ಲಾಡಳಿತ ಅರಮನೆಗೆ ಭೇಟಿ ನೀಡಿ ಸಂಪ್ರದಾಯದಂತೆ ಮಹಾರಾಣಿ ಪ್ರಮೋದಾದೇವಿ ಒಡೆಯರ್ ಅವರಿಗೆ ದಸರಾ ಮಹೋತ್ಸವಕ್ಕೆ ಅಧಿಕೃತವಾಗಿ ಆಹ್ವಾನ ನೀಡಲಾಯಿತು. ಆಹ್ವಾನ ನೀಡಿದ ಬಳಿಕ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ, ಸರ್ಕಾರದಿಂದ ಅಧಿಕೃತವಾಗಿ ಮೈಸೂರು ರಾಜಮನೆತನಕ್ಕೆ ದಸರಾ ಹಬ್ಬಕ್ಕೆ ಆಹ್ವಾನ ನೀಡುವುದು ಸಂಪ್ರದಾಯ. ಪ್ರತಿ ಬಾರಿಯೂ ಕೂಡ ಜಿಲ್ಲಾ ಉಸ್ತುವಾರಿ ಸಚಿವರು ಮಹಾರಾಣಿಯವರಿಗೆ ಆಹ್ವಾನ ನೀಡುತ್ತಾರೆ.

ಈ ಬಾರಿ ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿರುವುದರಿಂದ ಮಹಾರಾಣಿ ಪ್ರಮೋದಾದೇವಿ ಒಡೆಯರ್ ಅವರನ್ನು ಭೇಟಿಯಾಗಿ ಆಹ್ವಾನ ಕೊಟ್ಟಿದ್ದೇನೆ. ಪ್ರಮೋದಾದೇವಿ ಒಡೆಯರ್ ಅವರು ದಸರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಯಾವುದೇ ಸಲಹೆ ನೀಡಿಲ್ಲ, ಪ್ರತಿ ಬಾರಿಯಂತೆ ಈ ಬಾರಿಯೂ ಸಹ ದಸರಾ ಮಹೋತ್ಸವ ಸುಗಮವಾಗಿ ನಡೆಯಲು ಸರ್ಕಾರಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ ಎಂದು ಹೇಳಿದರು. ಕಳೆದ ಬಾರಿ ಅಂಬಾರಿ ಕಟ್ಟುವ ವೇಳೆಯಲ್ಲಿ ಸ್ಥಳದಲ್ಲಿ ಹೆಚ್ಚಿನ ಜನಸಂದಣಿ ಇರುತ್ತಿದ್ದ ಕಾರಣ ಅಂಬಾರಿ ಕಟ್ಟಲು ಹೆಚ್ಚಿನ ಸಮಯ ಹಿಡಿಯುತ್ತಿತ್ತು. ಆದ್ದರಿಂದ ಈ ಬಾರಿ ಹೆಚ್ಚಿನ ಜನಸಂದಣಿ ಉಂಟಾಗದಂತೆ, ಅಂಬಾರಿ ಕಟ್ಟುವ ಸ್ಥಳದಲ್ಲಿ ಕಡಿಮೆ ಪಾಸ್‌ಗಳನ್ನು ನೀಡಿ ಜನದಟ್ಟಣೆ ಉಂಟಾಗದಂತೆ ನೋಡಿಕೊಳ್ಳಿ ಎಂದು ಮಹಾರಾಣಿಯವರು ಕೇಳಿದ್ದಾರೆ ಎಂದು ತಿಳಿಸಿದರು. ಆಹ್ವಾನ ನೀಡುವ ವೇಳೆಯಲ್ಲಿ ಕಂಬಳದ ಕುರಿತು ಯಾವುದೇ ವಿಚಾರ ಪ್ರಸ್ತಾಪವಾಗಲಿಲ್ಲ.

## ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರಕ್ಕೆ ಕೂಡಿಬಂದ ಮುಹೂರ್ತ

• ಉದಯವಾಹಿನಿ, ಬೆಂಗಳೂರು

ಸುದೀರ್ಘ ಕಾಯುವಿಕೆಯ ಬಳಿಕ ಕೊನೆಗೂ ರೈಲ್ವೇ ಪ್ರಯಾಣಿಕರಿಗೆ ಶೀಘ್ರವೇ ಶುಭಸುದ್ದಿ ಸಿಗುವ ನಿರೀಕ್ಷೆಯಿದ್ದು, ಎಸ್‌ಎಂವಿಟಿ ಬೆಂಗಳೂರು ಮುಂಬೈ ಸಿಎಸ್‌ಎಂಟಿ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರ ಇದೇ ತಿಂಗಳ ಕೊನೆಯಲ್ಲಿ ಆರಂಭವಾಗಲಿದೆ ಎಂಬ ಮಾಹಿತಿ ಸಿಕ್ಕಿದೆ. ಈ ಬಗ್ಗೆ ಶೀಘ್ರದಲ್ಲೇ ರೈಲ್ವೆ ಮಂಡಳಿ ಅಧಿಸೂಚನೆ ಹೊರಡಿಸುವ ಸಾಧ್ಯತೆ ಇದ್ದು, ದೇಶದ ಎರಡನೇ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರ ಆರಂಭವಾದರೆ ಭಾರತದ ಟೆಕ್ ರಾಜಧಾನಿ ಬೆಂಗಳೂರು ಮತ್ತು ಆರ್ಥಿಕ ರಾಜಧಾನಿ ಮುಂಬೈ ನಡುವಿನ ರೈಲು ಪ್ರಯಾಣದ ಅವಧಿ ಗಣನೀಯವಾಗಿ ಕಡಿಮೆಯಾಗಲಿದೆ.

ಈ ಪ್ರಮುಖ ರೈಲು ವಾರದಲ್ಲಿ ಆರು ದಿನ ಎರಡೂ ಮಾರ್ಗಗಳಲ್ಲಿ ಸಂಚರಿಸಲಿದ್ದು, 16 ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ಪ್ರಯಾಣ ಪೂರ್ಣಗೊಳಿಸಲಿದೆ. ಎರಡು ನಗರಗಳ ನಡುವೆ ಪ್ರತಿದಿನ ನೇರವಾಗಿ ಸಂಚರಿಸುವ ಏಕೈಕ ರೈಲು ಉದ್ಯಾನ್ ಎಕ್ಸ್‌ಪ್ರೆಸ್ ಆಗಿದ್ದು, ಇದರ ಪ್ರಯಾಣ ಅವಧಿ ಸರಾಸರಿ 24 ಗಂಟೆಯಾಗಿದೆ.

## ಕರ್ನಾಟಕ ಸೇರಿದಂತೆ 20 ರಾಜ್ಯಗಳ ಮತದಾರರಿಗೆ ಬಿಗ್ ನ್ಯೂಸ್

• ಉದಯವಾಹಿನಿ, ಬೆಂಗಳೂರು

ಎಸ್‌ಐಆರ್ ಪೂರ್ಣಗೊಂಡಿರುವ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ, ವಿವಿಧ ಕಾರಣಗಳಿಂದ ಮತದಾರರ ಪಟ್ಟಿಯಿಂದ ಕೈಬಿಡಲ್ಪಟ್ಟ ಅರ್ಹ ಮತದಾರರು ಮತ್ತು ಹೊಸ ಯುವ ಮತದಾರರ ನೋಂದಣಿಗಾಗಿ ವಿಶೇಷ ನೋಂದಣಿ ಅಭಿಯಾನ' ಕೈಗೊಳ್ಳುವಂತೆ ಕೇಂದ್ರ ಚುನಾವಣಾ ಆಯೋಗವು ನಿರ್ದೇಶನ ನೀಡಿದೆ. ಈ ಸಂಬಂಧ ಸೆಪ್ಟೆಂಬರ್ 29 ರಂದು ಎಲ್ಲಾ ರಾಜ್ಯಗಳ ಮುಖ್ಯ ಚುನಾವಣಾಧಿಕಾರಿಗಳಿಗೆ ಲಿಖಿತ ಸೂಚನೆ ನೀಡಿದ್ದ ಆಯೋಗವು, ಗುರುವಾರ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಈ ನಿರ್ದೇಶನವನ್ನು ಪುನರುಚ್ಚರಿಸಿದೆ. ನಿರಂತರ ನವೀಕರಣ ಪ್ರಕ್ರಿಯೆಯಡಿಯಲ್ಲಿ ಅರ್ಹರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲು ಜಿಲ್ಲಾ ಚುನಾವಣಾಧಿಕಾರಿಗಳು ಮತ್ತು ಮತದಾರರ ನೋಂದಣಾಧಿಕಾರಿಗಳಿಗೆ ಸೂಚಿಸಲಾಗಿದೆ.

## ಧರ್ಮ ಮತ್ತು ರಾಷ್ಟ್ರವನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ

• ಉದಯವಾಹಿನಿ, ನವದೆಹಲಿ

ಭಾರತದಲ್ಲಿ ಧರ್ಮ ಮತ್ತು ರಾಷ್ಟ್ರವನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ. ಮುಂಬೈನಲ್ಲಿ ನಡೆದ ಅಖಿಲ ಭಾರತ ವಿಹಾರ ಸೇವಾ ಸಮೂಹದ 14ನೇ ಸಮ್ಮೇಳನದಲ್ಲಿ ಮಾತನಾಡಿದ ಅವರು, ರಾಷ್ಟ್ರದ ಉದ್ದೇಶ ಧರ್ಮಕ್ಕೆ ಸಂಬಂಧಿಸಿದ್ದು, ಧರ್ಮವು ರಾಷ್ಟ್ರವನ್ನು ಬಲಪಡಿಸುತ್ತದೆ. ಎರಡೂ ಪರಸ್ಪರ ಅವಲಂಬಿತವಾಗಿವೆ ಎಂದು ಹೇಳಿದರು. ಜಗತ್ತು ಹಲವು ವೈರುಧ್ಯಗಳು ಮತ್ತು ಸವಾಲುಗಳನ್ನು ಎದುರಿಸುತ್ತಿದೆ. ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಕುಟುಂಬ ಜೀವನ, ಧಾರ್ಮಿಕ ನಂಬಿಕೆ ಮತ್ತು ಸಂಘರ್ಷದ ನಡುವೆ ಸಮತೋಲನ ಸಾಧಿಸುವುದು ಸವಾಲಾಗಿದೆ ಎಂದು ಭಾಗವತ್ ಹೇಳಿದರು. ಈ ಸಮಸ್ಯೆಗಳಿಗೆ ಒಂದು ಬದಿಯನ್ನು ಆಯ್ಕೆ ಮಾಡಿಕೊಂಡು ಮತ್ತೊಂದು ಬದಿಯನ್ನು ತ್ಯಜಿಸುವ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ. ಸಮತೋಲನದ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತದ ಜ್ಞಾನ ಮತ್ತು ಆಧ್ಯಾತ್ಮಿಕ ಪರಂಪರೆಗೆ ಇಂತಹ ಜಾಗತಿಕ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಪಾತ್ರವಿದೆ ಎಂದು ಭಾಗವತ್ ಹೇಳಿದರು. ಭಾರತವು ಇತಿಹಾಸದಲ್ಲಿ ಇತರ ದೇಶಗಳನ್ನು ವಶಪಡಿಸಿಕೊಳ್ಳದೆ, ಜನರನ್ನು ಮತಾಂತರಗೊಳಿಸದೆ ತನ್ನ ಜ್ಞಾನವನ್ನು ಜಗತ್ತಿನೊಂದಿಗೆ ಹಂಚಿಕೊಂಡಿದೆ. ಜಗತ್ತು ಭಾರತದಿಂದ ಮಾರ್ಗದರ್ಶನವನ್ನು ನಿರೀಕ್ಷಿಸುತ್ತಿದೆ ಎಂದು ಅವರು ಹೇಳಿದರು.

## ಹಿಂದುಳಿದ ವರ್ಗಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪನೆಗೆ ಜೆ ಎಂಜೀರಪ್ಪ ಒತ್ತಾಯ

• ಉದಯವಾಹಿನಿ, ಬೆಂಗಳೂರು

**ವರದಿ ಉಮೇಶ್ ಬಾಣಾವರ**



ಓಬಿಸಿ ಫೆಡರೇಶನ್ ಆಫ್ ಇಂಡಿಯಾ ವತಿಯಿಂದ ಒಬಿಸಿ ಕಲ್ಯಾಣಕ್ಕಾಗಿ ಪ್ರತ್ಯೇಕ ಕೇಂದ್ರ ಸಚಿವಾಲಯವನ್ನು ರಚಿಸಬೇಕು. ಒಬಿಸಿ ಜನಸಂಖ್ಯೆಗೆ ಅನುಗುಣವಾಗಿ ವಿಧಾನಸಭೆಗಳು ಮತ್ತು ಲೋಕಸಭೆಯಲ್ಲಿ ಮೀಸಲಾತಿ ಜಾರಿಗೊಳಿಸಬೇಕು ರಾಷ್ಟ್ರೀಯ ಜಾತಿ ಜನಗಣತಿ ನಮೂನೆಗಳಲ್ಲಿ ಓಬಿಸಿ ಅಂಕಣವನ್ನು ಸೇರಿಸಬೇಕು ಸೇರಿದಂತೆ ಇನ್ನೂ ಹಲವಾರು ಪ್ರಮುಖ ಬೇಡಿಕೆಗಳನ್ನು ಈಡೇರಿಕೆಗಾಗಿ ಶೀಘ್ರದಲ್ಲಿಯೇ ಕನ್ಯಾಕುಮಾರಿಯಿಂದ ದೆಹಲಿಯವರೆಗೆ ರಾಷ್ಟ್ರೀಯ ಒಬಿಸಿ ಏಕತಾ ಆಂದೋಲನ ಮತ್ತು ಹಕ್ಕುಗಳ ಯಾತ್ರೆ ನಂತರ ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ರ್‍ಯಾಲಿಯನ್ನು ನಡೆಸಲಾಗುವುದು ನಂತರ ನವಂಬರ್‌ನಲ್ಲಿ ನಡೆಯಲಿರುವ ಸಂಸತ್ ಅಧಿವೇಶನದ ವೇಳೆ ಜಂತರ್ ಮಂತರ್‌ನಲ್ಲಿ ಬೃಹತ್ ಪ್ರತಿಭಟನ ಪ್ರದರ್ಶನವನ್ನು ಸಹ ಹಮ್ಮಿಕೊಳ್ಳಲಾಗುವುದೆಂದು ಒಬಿಸಿ ಫೆಡರೇಶನ್ ಆಫ್ ಇಂಡಿಯಾದ ರಾಷ್ಟ್ರೀಯ ಅಧ್ಯಕ್ಷರಾದ ಜೆ ಎಂ ಜೀರಪ್ಪ ತಿಳಿಸಿದರು .

ಇತ್ತೀಚಿಗೆ ಮಾಧ್ಯಮದೊಂದಿಗೆ ಮಾತನಾಡಿದ ಅವರು ಓಬಿಸಿ ಫೆಡರೇಶನ್ ಆಫ್ ಇಂಡಿಯಾದ ವತಿಯಿಂದ ಪ್ರಮುಖ ಬೇಡಿಕೆಗಳು ಏನೆಂದರೆ ಕೇಂದ್ರ ಸರ್ಕಾರದಲ್ಲಿ ಪ್ರತ್ಯೇಕವಾಗಿ ಹಿಂದುಳಿದ ವರ್ಗಗಳ ಓಬಿಸಿ ಇಲಾಖಾ ಸಚಿವಾಲಯ ಸ್ಥಾಪನೆ ರಾಜಕೀಯ ಮೀಸಲಾತಿಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಸುಮಾರು ದೇಶದಲ್ಲಿ ಶೇಕಡ 56 ರಷ್ಟು ಇರುವ ಒಬಿಸಿ ಸಮುದಾಯಕ್ಕೆ ಕೇಂದ್ರ ಸರ್ಕಾರವು ಎಲ್ಲಾ ರಾಜ್ಯಗಳಲ್ಲಿ ಶಾಸಕಾಂಗ ಮತ್ತು ಸಂಸತ್ತಿನ ಚುನಾವಣೆಯಲ್ಲಿಯೂ ಸಹ ಒಬಿಸಿ ರಾಜಕೀಯ ಮೀಸಲಾತಿ ತಕ್ಷಣ ಜಾರಿ ಮಾಡಬೇಕು.

ಸುಪ್ರೀಂಕೋರ್ಟ್ ಸೇರಿದಂತೆ ಅನೇಕ ನ್ಯಾಯಾಲಯಗಳಲ್ಲಿ ಒಬಿಸಿ ಸಂಬಂಧಿಸಿದ ವ್ಯಾಜ್ಯಗಳಿಗೆ ನ್ಯಾಯ ಸಿಗುತ್ತಿಲ್ಲ ಏಕೆಂದರೆ ಸಮಗ್ರವಾದ ಅಧಿಕೃತ ದತ್ತಾಂಶಗಳ ಕೊರತೆಯಿಂದ ಓಬಿಸಿ ಸಮುದಾಯಗಳ ನ್ಯಾಯಯುತ ಹೋರಾಟಗಳು ತಾರ್ಕಿಕ ಅಂತ್ಯ ತಲುಪುತ್ತಿಲ್ಲ 1931ರ ನಂತರ ದೇಶದಲ್ಲಿ ನಿಯಮಿತವಾಗಿ ಜನಗಣತಿಯನ್ನು ಮಾತ್ರ ನಡೆಸಲಾಗುತ್ತಿದೆ ಒಮ್ಮೆಯೂ ಜಾತಿ ಜನಗಣತಿ ನಡೆಯದೇ ಇರುವುದು ಈ ದತ್ತಾಂಶಗಳ ಕೊರತೆಗೆ ಕಾರಣವಾಗಿದೆ ಇದನ್ನು ಸರಿಪಡಿಸಬೇಕು ಕೇಂದ್ರ ಸರ್ಕಾರ ಇಡೀ ದೇಶದಲ್ಲಿ ಜಾತಿ ಜನಗಣತಿ ನಡೆಸಲು ಮುಂದಾಗಿದೆ ಆದರೆ ಮಾಹಿತಿ ಸಂಗ್ರಹದ ವಿಷಯದಲ್ಲಿ ನಿರ್ಲಕ್ಷದ ದೂರುಗಳು ಕೇಳಿ ಬರುತ್ತಿವೆ ಈ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ನಿಗ ವಹಿಸಬೇಕೆಂದರು. ಕರ್ನಾಟಕ ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಸಚಿವಾಲಯಕ್ಕೆ ಜನಸಂಖ್ಯೆ ಗನುಗುಣವಾಗಿ ಬಜೆಟ್ ನಲ್ಲಿ ಅನುದಾನವನ್ನು ಮೀಸಲಿಡುವುದು ಹಾಗೂ ಈ ವರ್ಗಕ್ಕೆ ಸಾಮಾಜಿಕ ನ್ಯಾಯ ದೊರಕಿಸುವುದು

ಜಾತಿ ಜನಗಣತಿ ಮಾಡಿದ ಮೊದಲು ರಾಜ್ಯವಾಗಿ ಕರ್ನಾಟಕ ಎಂದು ನಿಲ್ಲಬೇಕಿತ್ತು ಆದರೆ 2013ರಲ್ಲಿ ಆರಂಭವಾದರೂ ರಾಜಕೀಯ ನಿರ್ಲಕ್ಷದಿಂದ ಜಾತಿ ಜನಗಣತಿ ಇನ್ನೂ ಪೂರ್ಣಗೊಂಡಿಲ್ಲ ಈ ವಿಳಂಬ ನ್ಯಾಯದಿಂದ ಒಬಿಸಿ ಸಮುದಾಯಗಳು ಬೇಸತ್ತಿವೆ ನ್ಯಾಯಾಲಯದ ತಕರಾರುಗಳು ಸಮರ್ಪಕವಾಗಿ ನಿಭಾಯಿಸಿ ಕರ್ನಾಟಕ ಸರ್ಕಾರ ನ್ಯಾಯಮೂರ್ತಿ ಮಧುಸೂದನ್ ನಾಯಕ್ ವರದಿಯನ್ನು ಜಾರಿ ಮಾಡಬೇಕು.

ಕರ್ನಾಟಕ ರಾಜ್ಯ ಸರ್ಕಾರವು ಈ ಹಿಂದೆ ಅನೇಕ ಒಬಿಸಿ ಸಮುದಾಯಗಳಿಗೆ ನಿಗಮಗಳನ್ನು ಘೋಷಿಸಲಾಗಿತ್ತು ಈ ನಿಗಮಗಳು ಹಣಕಾಸಿನ ನೆರವಿಲ್ಲದೆ ಸ್ವರಗಿವೆ ಈ ಎಲ್ಲಾ ನಿಗಮಗಳಿಗೆ ತಲಾ 100 ಕೋಟಿ ಎಷ್ಟು ಅನುದಾನ ಬಿಡುಗಡೆ ಮಾಡಬೇಕು . ಓಬಿಸಿ ಸಮುದಾಯಗಳಲ್ಲೂ ಕೆಲವೇ ಸಮುದಾಯಗಳು ಹೆಚ್ಚಿನ ಅವಕಾಶ ಪಡೆಯುತ್ತಿವೆ ಸಣ್ಣ ಜಾತಿಗಳು ಕಾಯಕ ಸಮುದಾಯಗಳು ನಿರ್ಲಕ್ಷಕ್ಕೆ ಒಳಗಾಗಿವೆ. ಈ ಬಗ್ಗೆ ತುರ್ತು ಗಮನವಹಿಸಿ ವಿಶೇಷ ಯೋಜನೆ ರೂಪಿಸಬೇಕು . ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಯನ್ನು ಒಬಿಸಿ ಸಮುದಾಯಗಳಿಗೆ ಐದು ಪ್ರವರ್ಗಗಳಲ್ಲಿ ನೀಡಲಾಗುತ್ತಿದೆ ಆದರೆ ರಾಜಕೀಯ ಮೀಸಲಾತಿಯನ್ನು ಹಿಂದುಳಿದ ವರ್ಗ ಆ ಮತ್ತು ಹಿಂದುಳಿದ ವರ್ಗಗಳಲ್ಲಿ ನೀಡುತ್ತಿದೆ ಇದು ಅವೈಜ್ಞಾನಿಕವಾಗಿದೆ ಸಂವಿಧಾನ ವಿರೋಧಿಯಾಗಿದೆ ಈ ಬಗ್ಗೆ ನ್ಯಾಯಮೂರ್ತಿ ಭಕ್ತ ವತ್ಸಲ ಆಯೋಗ ಕೊಟ್ಟಿರುವ ವರದಿಯನ್ನು ಜಾರಿಗೆ ಮಾಡಬೇಕು ಸ್ಥಳೀಯ ಸಂಸ್ಥೆಗಳಲ್ಲಿ ಇರುವ ಓಬಿಸಿ ಮೀಸಲಾತಿ ಎಲ್ಲರಿಗೂ ಸಿಗುವಂತೆ ಮಾಡಬೇಕು .



ಜಾಗತೀಕರಣ ಮತ್ತು ತಂತ್ರಜ್ಞಾನದ ಒಡತದಿಂದ ಕಸುಬು ಕೌಶಲ್ಯಗಳು ತತ್ತರಿಸಿ ಹೋಗಿವೆ ಇದರಿಂದಾಗಿ ಒಬಿಸಿ ಸಮುದಾಯಗಳು ಮೂಲ ಹಳ್ಳಿಗಳನ್ನು ಬಿಟ್ಟು ನಗರಗಳಲ್ಲಿ ಅತಂತ್ರ ಜೀವನದಲ್ಲಿ ಕಳೆದುಹೋಗುತ್ತಿದ್ದಾರೆ ಮೂಲ ಕಸುಬುದಾರರಿಗೆ ವೃತ್ತಿ ಮುಂದುವರಿಸಲು ಪ್ರತೀ ತಿಂಗಳು ಕನಿಷ್ಠ 5000 ಸಹಾಯಧನ ನೀಡಬೇಕು ಸರ್ಕಾರಗಳು ರೈತರಿಗೆ ಮಹಿಳೆಯರಿಗೆ ಪ್ರತಿ ತಿಂಗಳು ಸಹಾಯಧನವನ್ನು ಅವರ ಖಾತೆಗೆ ಜಮಾ ಮಾಡುತ್ತಿವೆ ಆದರೆ ದೇಶದ ಬೆನ್ನೆಲುಬಾಗಿರುವ ಕುಶಲಕರ್ಮಿಗಳು ಕಾಯಕ ಸಮುದಾಯಗಳು ಇವರನ್ನು ನಿರ್ಲಕ್ಷಿಸುವುದು ಸರಿಯಲ್ಲ ಎಂಬುದು ಕೇಂದ್ರ ರಾಜ್ಯ ಸರ್ಕಾರಗಳು ಅರ್ಥಮಾಡಿಕೊಳ್ಳಬೇಕು. ಓಬಿಸಿ ಸಮುದಾಯಗಳ ವಿದ್ಯಾರ್ಥಿಗಳಿಗೆ ಸ್ಕಾಲರ್ಶಿಪ್ ವಿತರಣೆಯಲ್ಲಿಯೂ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ ಉನ್ನತ ಶಿಕ್ಷಣ ಪಡೆಯಲು ಅಗತ್ಯವಾಗಿರುವ ಸ್ಕಾಲರ್ಶಿಪ್ ಯೋಜನೆಗೆ ಆದ್ಯತೆ ಕೊಡಬೇಕು. ಅಕಾಡೆಮಿಗಳು ಉಪಕುಲಪತಿಗಳು ಸೇರಿದಂತೆ ಎಲ್ಲಾ ರೀತಿಯ ನಾಮಕರಣದ ಸಂದರ್ಭದಲ್ಲಿ ಓಬಿಸಿ ಸಮುದಾಯಗಳ ಪ್ರಾತಿನಿಧ್ಯ ದ್ವಿಗುಣಗೊಳಿಸಬೇಕು ಏಕೆಂದರೆ ನೂರಾರು ಒಬಿಸಿ ಸಮುದಾಯಗಳು ರಾಜಕೀಯ ಪ್ರಾತಿನಿಧ್ಯವಿಲ್ಲದೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ ಈ ಬಗ್ಗೆ ತುರ್ತು ಗಮನ ಅಗತ್ಯವಾಗಿದೆ . ಕುಲಕಸುಬುಗಳಿಗೆ ಆಧುನಿಕತೆ ಮತ್ತು ತಂತ್ರಜ್ಞಾನದ ಅಳವಡಿಕೆ ಅಗತ್ಯವಾಗಿದೆ ಈ ಬಗ್ಗೆ ಸಮರ್ಪಕವಾದ ತರಬೇತಿ ವ್ಯವಸ್ಥೆಯನ್ನು ತುರ್ತುರೂಪಿಸಬೇಕು.

ರಾಜ್ಯ ಸರ್ಕಾರಗಳು ಒಬಿಸಿ ಸಮುದಾಯಗಳ ಕೌಶಲ್ಯ ಕೇಂದ್ರಿತವಾದ ಆಧುನಿಕ ಸೌಲಭ್ಯಗಳೊಂದಿಗೆ ಹೊಸ ವಿಶ್ವವಿದ್ಯಾಲಯವನ್ನು ರೂಪಿಸಬೇಕು. ಇಷ್ಟು ಬೇಡಿಕೆಗಳನ್ನು ಈಡೇರಿಕೆಗಾಗಿ ಓಬಿಸಿ ಫೆಡರೇಶನ್ ಆಫ್ ಇಂಡಿಯಾ ವತಿಯಿಂದ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಮೇಲೆ ಒತ್ತಡ ತರಲಾಗುವುದೆಂದು ಓಬಿಸಿ ಫೆಡರೇಶನ್ ಆಫ್ ಇಂಡಿಯಾದ ರಾಷ್ಟ್ರೀಯ ಅಧ್ಯಕ್ಷರಾದ

ಜೆ ಎಂಜಿರಪ್ಪ ತಿಳಿಸಿದ್ದಾರೆ. ಓಬಿಸಿ ಫೆಡರೇಷನ್ ಆಫ್ ಇಂಡಿಯಾದ ರಾಷ್ಟ್ರೀಯ ಸಂಚಾಲಕ ಶಿವಪ್ಪ ಲಮಾಣಿ ಉಪಸ್ಥಿತರಿದ್ದರು.

### ಬಂಜಾರ ಗುರುಪೀಠ ಚಿತ್ರದುರ್ಗ ಶ್ರೀ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ. ಪ್ರತಿಕ್ರಿಯೆ

ಸಾಮಾಜಿಕ ನ್ಯಾಯ ರಾಜಕೀಯ ಪ್ರಾತಿನಿಧ್ಯ ಸರ್ವರಿಗೂ ಸಮಪಾಲು ಸಮ ಬಾಳು ಎಂಬ ಉದ್ದೇಶದಿಂದ ಕೂಡಲೇ ರಾಷ್ಟ್ರೀಯ ಓಬಿಸಿ ಏಕತಾ ಆಂದೋಲನವನ್ನು ನಡೆಸುತ್ತಿದ್ದು ಹಲವಾರು ರಾಜ್ಯಗಳಿಂದಲೂ ಸಹ ಉತ್ತಮ ಪ್ರತಿಕ್ರಿಯೆ ಬರುತ್ತಿದ್ದು ರಾಷ್ಟ್ರಮಟ್ಟದಲ್ಲಿ ಹಿಂದುಳಿದ ವರ್ಗಕ್ಕೆ ಶಕ್ತಿ ನೀಡುವಂತಹ ಈ ಸಂಘಟನೆಯಿಂದ ಹೋರಾಟ ನಡೆಸಲಾಗುವುದು ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೂಡಲೇ ಈ ನಮ್ಮ ಮನವಿಗಳ ಬಗ್ಗೆ ಗಮನಹರಿಸಬೇಕಿದೆ ಎಂದು ಶ್ರೀ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಪ್ರತಿಕ್ರಿಯಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 15,028/Gram 24ct ₹ 13,773 /Gram 22ct ಬೆಳ್ಳಿ: ₹235.00/

## KSBC ಅಧ್ಯಕ್ಷರಾಗಿ ಹಿರಿಯ ವಕೀಲ ಆರ್.ರಾಜಣ್ಣ, ಉಪಾಧ್ಯಕ್ಷರಾಗಿ ಶಿವಮೂರ್ತಿ ಆಯ್ಕೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ವಕೀಲರ ಪರಿಷತ್ ನೂತನ ಅಧ್ಯಕ್ಷರಾಗಿ ಹೈಕೋರ್ಟ್‌ನ ಹಿರಿಯ ವಕೀಲ ಆರ್.ರಾಜಣ್ಣ, ಉಪಾಧ್ಯಕ್ಷರಾಗಿ ಶಿವಮೂರ್ತಿ ಮತ್ತು ಭಾರತೀಯ ವಕೀಲರ ಪರಿಷತ್ ಸದಸ್ಯರನ್ನಾಗಿ ಸಿ.ಎಂ.ಧನಂಜಯ ಅವರು ಚುನಾಯಿತರಾಗಿದ್ದಾರೆ.

ನೂತನ ಪದಾಧಿಕಾರಿಗಳ ಹುದ್ದೆಗೆ ನಡೆದ ಚುನಾವಣೆಯಲ್ಲಿ ರಾಜಣ್ಣ 15 ಮತಗಳನ್ನು ಪಡೆದು ತಮ್ಮ ಸಮೀಪ ಸ್ಪರ್ಧಿ ಎನ್.ದೇವರಾಜ್ ಅವರನ್ನು ಆರು ಮತಗಳಿಂದ ಸೋಲಿಸಿದರು. ಉಪಾಧ್ಯಕ್ಷ ಹುದ್ದೆಗೆ ನಡೆದ ಚುನಾವಣೆಯಲ್ಲಿ ಶಿವಮೂರ್ತಿ ಅವರು ಗರಿಷ್ಠ 17 ಮತ ಪಡೆಯುವ ಮೂಲಕ ತಮ್ಮ ಸಮೀಪ ಸ್ಪರ್ಧಿ ಶೈಲಜಾ ಅವರನ್ನು ಆರು ಮತಗಳಿಂದ ಪರಾಭವಗೊಳಿಸಿದರು. ಭಾರತೀಯ ವಕೀಲರ ಪರಿಷತ್ (ಬಿಸಿಐ) ಸದಸ್ಯತ್ವಕ್ಕೆ ನಡೆದ ಚುನಾವಣೆಯಲ್ಲಿ ಸಿ.ಎಂ.ಧನಂಜಯ 15 ಮತಗಳನ್ನು ಪಡೆದು ಆಯ್ಕೆಯಾದರು. ಚುನಾವಣೆಯಲ್ಲಿ 23 ಚುನಾಯಿತ ಸದಸ್ಯರು, ಹೈಕೋರ್ಟ್‌ನಿಂದ ನೇಮಕವಾಗಿರುವ ಇಬ್ಬರು ಮಹಿಳಾ ಸಹ ಸದಸ್ಯರು ಹಾಗೂ ಪದನಿಮಿತ್ತ ಸದಸ್ಯ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಸೇರಿದಂತೆ ಒಟ್ಟು 26 ಸದಸ್ಯರು ಮತದಾನದಲ್ಲಿ ಪಾಲ್ಗೊಂಡಿದ್ದರು. ಕೆಎಸ್‌ಬಿಸಿಗೆ 2026ರ ಮಾರ್ಚ್ 15ರ ಒಳಗೆ ಚುನಾವಣೆ ನಡೆಸುವಂತೆ ಸುಪ್ರೀಂಕೋರ್ಟ್ ನಿರ್ದೇಶಿಸಿದ್ದ ಹಿನ್ನೆಲೆಯಲ್ಲಿ ಮಾರ್ಚ್ 11ರಂದು 23 ಸದಸ್ಯರ ಆಯ್ಕೆಗೆ ಚುನಾವಣೆ ನಡೆದಿತ್ತು.

ಈ ಬಾರಿ ಶೇ 30ರಷ್ಟು ಮಹಿಳೆಯರಿಗೆ ಆದ್ಯತೆ ನೀಡಿ ಏಳು ಸ್ಥಾನಗಳಿಗೆ ಮಹಿಳಾ ಮೀಸಲು ಕಲ್ಪಿಸಲಾಗಿತ್ತು.

## ಪಶು ವೈದ್ಯಾಧಿಕಾರಿಗಳ ನೇಮಕಾತಿ ಹಗರಣ: ಕೆಪಿಎಸ್‌ಸಿ ಕಚೇರಿಗೆ ಜ್ಞಾನೇಂದ್ರ, ಕನ್ನಾಳೆ ಕರೆತಂದು ಸ್ಥಳ ಮಹಜರು

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪಶು ವೈದ್ಯಾಧಿಕಾರಿಗಳ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಬಸವರಾಜ್ ಕನ್ನಾಳೆ ಮತ್ತು ಜ್ಞಾನೇಂದ್ರ ಕುಮಾರ್‌ರನ್ನು ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಕೆಪಿಎಸ್‌ಸಿ ಕಚೇರಿ ಹಾಗೂ ಇತರ ಸ್ಥಳಗಳಿಗೆ ಕರೆದೊಯ್ದು ಸ್ಥಳ ಮಹಜರು ನಡೆಸಿದ್ದಾರೆ. ಆರೋಪಿಗಳಾದ ಬಸವರಾಜ್ ಕನ್ನಾಳೆ ಮತ್ತು ಜ್ಞಾನೇಂದ್ರ ಕುಮಾರ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದ ಇಡಿ ಅಧಿಕಾರಿಗಳು ಇಬ್ಬರನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದು, ಕೆಪಿಎಸ್‌ಸಿ ಕಚೇರಿ ಹಾಗೂ ಇತರ ಸ್ಥಳಗಳಿಗೆ ಕರೆದೊಯ್ದು ಸ್ಥಳ ಮಹಜರು ನಡೆಸಿದ್ದಾರೆ.ಸ್ಥಳ ಮಹಜರಿನ


ಉದಯವಾಹಿನಿ ಚಿತ್ರ

ಸಂಪೂರ್ಣ ಪ್ರಕ್ರಿಯೆಯನ್ನು ವಿಡಿಯೋ ಮಾಡಿಕೊಳ್ಳಲಾಗಿದೆ. ಪರೀಕ್ಷೆಯಲ್ಲಿ ಅಕ್ರಮ ನಡೆದ ಸಂದರ್ಭದಲ್ಲಿ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಕೆಪಿಎಸ್‌ಸಿಯ ಪರೀಕ್ಷಾ ನಿಯಂತ್ರಕರಾಗಿದ್ದರು. ಜ್ಞಾನೇಂದ್ರ ಕುಮಾರ್ ಪರೀಕ್ಷೆ ನಡೆಯುವ ಒಂದು ದಿನ ಮುಂಚಿತವಾಗಿ ಪ್ರಶ್ನೆ ಪತ್ರಿಕೆಯನ್ನು ಮಧ್ಯವರ್ತಿ ಬಸವರಾಜ್ ಕನ್ನಾಳೆಗೆ ತಲುಪಿಸಿದ್ದರು. ಬಳಿಕ ಕನ್ನಾಳೆ ನಗರದ ಹೊರ ವಲಯದಲ್ಲಿರುವ ರೆಸಾರ್ಟ್ ಹಾಗೂ ಇತರ ಸ್ಥಳಗಳಿಗೆ ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆ ನೀಡಿ ಉತ್ತರಗಳನ್ನು ಕಂಠಪಾಠ ಮಾಡಿಸಿದ್ದ.

ಇ.ಡಿ ಅಧಿಕಾರಿಗಳು ಪ್ರಶ್ನೆ ಪತ್ರಿಕೆ ಇದ್ದಲಾಗಿದ್ದ ಕೆಪಿಎಸ್‌ಸಿ ಕಚೇರಿಯಲ್ಲಿರುವ ಸ್ಟ್ರಾಂಗ್ ರೂಂಗೆ ಹಾಗೂ ರೆಸಾರ್ಟ್‌ಗಳಿಗೆ ಕರೆದೊಯ್ದು ಸ್ಥಳ ಮಹಜರು ನಡೆಸಿದ್ದಾರೆ. ಈ ಹಗರಣದಲ್ಲಿ ಕೋಟ್ಯಂತರ ರೂಪಾಯಿ ಅಕ್ರಮ ಹಣ ವರ್ಗಾವಣೆಯಾಗಿರುವ ಆರೋಪದ ಹಿನ್ನೆಲೆಯಲ್ಲಿ (ಮನಿ ಲ್ಯಾಂಡ್ರಿಂಗ್) ತನಿಖೆ ಕೈಗೆತ್ತಿಕೊಂಡಿರುವ ಇ.ಡಿ ಅಧಿಕಾರಿಗಳು ಆರೋಪಿಗಳನ್ನು ಸೇರಿದ ಸ್ಥಳಗಳ ಮೇಲೆ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿದ್ದರು.

## ವರದಾ -ಬೆಡ್ತಿ ನದಿ ಜೋಡಣೆ ಚರ್ಚಿಸಲು ಸಭೆ ಕರೆಯಿರಿ: ಸಿಎಂಗೆ ಬಸವರಾಜ ಬೊಮ್ಮಾಯಿ ಪತ್ರ

• ಉದಯವಾಹಿನಿ, ಬೆಂಗಳೂರು

ವರದಾ ಬೆಡ್ತಿ ನದಿ ಜೋಡಣೆಯ ಡಿಪಿಆರ್ ತ್ವರಿತಗತಿಯಲ್ಲಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡಬೇಕು. ಈ ವಿಷಯದ ಕುರಿತು ಸುದೀರ್ಘವಾಗಿ ಚರ್ಚಿಸಬೇಕೆಂದು ಸಂಸದ ಬಸವರಾಜ ಬೊಮ್ಮಾಯಿ ಸಿಎಂ ಡಿ.ಕೆ ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ. ನದಿ ಜೋಡಣೆಯ ಡಿಪಿಆರ್ ತ್ವರಿತಗತಿಯಲ್ಲಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡಬೇಕು ಮತ್ತು ಈ ವಿಷಯದ ಕುರಿತು ಸುದೀರ್ಘವಾಗಿ ಚರ್ಚಿಸಬೇಕು. ಹಾವೇರಿ ಜಿಲ್ಲೆಯ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಇತರ ಪ್ರಮುಖ ಹೋರಾಟಗಾರರ ಒಂದು ಸಭೆಯನ್ನು ಬೆಂಗಳೂರಿನಲ್ಲಿ ನಡೆಸಿ. ನಮ್ಮ ಭಾಗದ ಜನರ ಸಂಕಷ್ಟವನ್ನು ನಿವಾರಣೆ ಮಾಡಲು ಸ್ಪಷ್ಟವಾದ ನಿರ್ಣಯಗಳನ್ನು ಮಾಡಬೇಕೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿಗೆ ಸಂಸದ ಬಸವರಾಜ ಬೊಮ್ಮಾಯಿ ಮನವಿ ಮಾಡಿದ್ದಾರೆ.

ಈ ಕುರಿತು ಪತ್ರ ಬರೆದಿರುವ ಅವರು, ರಾಜ್ಯದಲ್ಲಿ ಈಗ ತೀವ್ರವಾದಂತಹ ಬರಗಾಲದ ಬರೆ ಅನುಭವಿಸುತ್ತಿದ್ದೇವೆ. ಇದರಿಂದ ರಾಜ್ಯದ ಜನ ಸಾಮಾನ್ಯರ ಬದುಕು ಅತ್ಯಂತ ಕಷ್ಟಕರವಾಗಿದೆ. ಬರುವ ದಿನಗಳಲ್ಲಿ ಕುಡಿಯುವ ನೀರು ದನಕರುಗಳಿಗೆ ನೀರು ಮತ್ತು ಮೇವು ಕೂಡ ಸಿಗದಂತಹ ಭೀಕರವಾದ ಪರಿಸ್ಥಿತಿ ಎದುರಿಸಬೇಕಾಗಿದೆ. ಮಳೆಯನ್ನೇ ನಂಬಿಕೊಂಡಿರುವ ರೈತರು ಅಪಾರ ಕಷ್ಟ ನಷ್ಟ ನಿರಂತರ ಅನುಭವಿಸುತ್ತಿದ್ದಾರೆ.

# 50 ಲಕ್ಷ ಮತದಾರರನ್ನು ಕೈಬಿಡುವ ಷಡ್ಯಂತ್ರದ ಆರೋಪ ಸಾಬೀತುಪಡಿಸಿ

### ಇಲ್ಲವಾದರೆ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಬೇಕು: ಬಿ.ವೈ.ವಿಜಯೇಂದ್ರ

• ಉದಯವಾಹಿನಿ, ಬೆಂಗಳೂರು

50 ಲಕ್ಷ ಮತದಾರರನ್ನು ಕೈಬಿಡುವ ಷಡ್ಯಂತ್ರದ ಆರೋಪ ಮಾಡಿರುವ ಸಿಎಂ ಅದನ್ನು ಸಾಬೀತುಪಡಿಸಲಿ. ಇಲ್ಲವಾದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸವಾಲು ಹಾಕಿದ್ದಾರೆ.

**1** ಮತದಾರರ ಪಟ್ಟಿಯಿಂದ ತೆಗೆದುಹಾಕಲು ಬಿಜೆಪಿ ಷಡ್ಯಂತ್ರ

**2** ದಾಖಲೆಗಳ ಸಮೇತ ಸಾಬೀತುಪಡಿಸಬೇಕು.

**3** ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು

ಬೆಂಗಳೂರಲ್ಲಿ ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆ ಹಾಗೂ ಅರ್ಜಿಗಳ ವಿಚಾರದಲ್ಲಿ ಬಿಜೆಪಿ ವಿರುದ್ಧ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾಡಿರುವ ಆರೋಪಗಳು ಅತ್ಯಂತ ಗಂಭೀರವಾಗಿವೆ. ಅಹಿಂದ ವರ್ಗದ ಮತದಾರರು, ದಲಿತರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರ ಮತಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲು ಬಿಜೆಪಿ ಷಡ್ಯಂತ್ರ ರೂಪಿಸಿದೆ ಎಂದು ಮುಖ್ಯಮಂತ್ರಿಗಳು ಆರೋಪಿಸಿದ್ದಾರೆ. ಇಂತಹ ಗಂಭೀರ ಆರೋಪವನ್ನು ಮುಖ್ಯಮಂತ್ರಿಗಳೇ ಮಾಡಿರುವುದರಿಂದ, ಅದನ್ನು ದಾಖಲೆಗಳ ಸಮೇತ ಸಾಬೀತುಪಡಿಸಬೇಕು.

ಇಲ್ಲವಾದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸವಾಲು ಹಾಕಿದ್ದಾರೆ. ಮುಖ್ಯಮಂತ್ರಿಗಳು ಬಿಜೆಪಿ ವಿರುದ್ಧ 50 ಲಕ್ಷದಷ್ಟು ಮತದಾರರ ಹೆಸರುಗಳನ್ನು ತೆಗೆದುಹಾಕುವ ಸಂಚು ನಡೆದಿದೆ ಎಂದು ಆರೋಪಿಸಿದ್ದಾರೆ. ಆದರೆ, ಈ ಆರೋಪಕ್ಕೆ ಪೂರಕವಾದ ಯಾವುದೇ ನಿಖರ ದಾಖಲೆ ಅಥವಾ ಸಾಕ್ಷ್ಯವನ್ನು ಅವರು ಸಾರ್ವಜನಿಕವಾಗಿ ಮುಂದಿಟ್ಟಿಲ್ಲ ಎಂದರು.

ಬಿಜೆಪಿ ಮಾತ್ರ ಬಳಸಬಹುದಾದ ಯಾವುದೇ ವಿಶೇಷ ಸಾಧನವಲ್ಲ. ಚುನಾವಣಾ ಆಯೋಗದ ನಿಯಮಗಳ ಪ್ರಕಾರ ಮತದಾರರ ಪಟ್ಟಿಯಲ್ಲಿರುವ


ಉದಯವಾಹಿನಿ ಚಿತ್ರ

ಅನರ್ಹ, ಮೃತ, ಸ್ಥಳಾಂತರಗೊಂಡ ಅಥವಾ ದ್ವಂದ್ವ ನೋಂದಣಿಯಂತಹ ಪ್ರಕರಣಗಳ ಕುರಿತು ಆಕ್ಷೇಪಣೆ ಸಲ್ಲಿಸಲು ನೀಡಿರುವ ಅವಕಾಶವಾಗಿದೆ. ಆದ್ದರಿಂದ, ಮತದಾರರ ಪಟ್ಟಿಯನ್ನು ಶುದ್ಧೀಕರಿಸುವ ಉದ್ದೇಶದಿಂದ ಬಿಜೆಪಿ ಸೇರಿದಂತೆ ಯಾವುದೇ ರಾಜಕೀಯ ಪಕ್ಷ ಅಥವಾ ಅರ್ಹ ವ್ಯಕ್ತಿ ಸಲ್ಲಿಸಿದರೆ, ಅಂತಿಮ ತೀರ್ಮಾನ ಕೈಗೊಳ್ಳುವುದು ಚುನಾವಣಾ ಅಧಿಕಾರಿಗಳ ಕರ್ತವ್ಯ. ಸಲ್ಲಿಸಿದ ತಕ್ಷಣ ಯಾರ ಹೆಸರನ್ನೂ ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗುವುದಿಲ್ಲ. ಆದ್ದರಿಂದ ಸಲ್ಲಿಸುವ ಹಕ್ಕನ್ನೇ ಅಕ್ರಮ ಎಂದು ಬಿಂಬಿಸುವುದು ಸರಿಯಲ್ಲ ಎಂದರು.

ಮುಖ್ಯಮಂತ್ರಿಗಳು ಬಿಜೆಪಿ 50 ಲಕ್ಷ ಮತದಾರರ ಹೆಸರುಗಳನ್ನು ತೆಗೆದುಹಾಕಲು ಸಂಚು ರೂಪಿಸಿದೆ ಎಂದು ಹೇಳುತ್ತಿದ್ದಾರೆ. ಆದರೆ, ನಮಗೆ ಲಭ್ಯವಿರುವ ಮಾಹಿತಿಯ ಪ್ರಕಾರ ರಾಜ್ಯಾದ್ಯಂತ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಮುಖ್ಯಮಂತ್ರಿಗಳು ಆರೋಪಿಸುತ್ತಿರುವ ಪ್ರಮಾಣಕ್ಕೆ ಹೋಲಿಸಿದರೆ ಬಹಳ ಕಡಿಮೆ. ಅದರಲ್ಲೂ ಅರ್ಜಿಗಳನ್ನು ಬಿಜೆಪಿ ಕಾರ್ಯಕರ್ತರು ಮಾತ್ರ ಸಲ್ಲಿಸಿಲ್ಲ. ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು,ಹಾಗೂ ಸಾರ್ವಜನಿಕರೂ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ಇತ್ತೀಚಿನ ವರದಿಗಳಲ್ಲಿಯೂ ಅರ್ಜಿಗಳ ಸಂಖ್ಯೆಯ ಬಗ್ಗೆ ವಿವಿಧ ಅಂಕಿಅಂಶಗಳು ಉಲ್ಲೇಖವಾಗಿವೆ. ಆದ್ದರಿಂದ ಅಂತಿಮ ಅಧಿಕೃತ ಅಂಕಿಅಂಶವನ್ನು ಚುನಾವಣಾ ಆಯೋಗವೇ ಸ್ಪಷ್ಟಪಡಿಸಬೇಕು ಎಂದು ತಿಳಿಸಿದ್ದಾರೆ. ಹೀಗಿರುವಾಗ 50 ಲಕ್ಷ ಮತದಾರರನ್ನು ತೆಗೆದುಹಾಕಲು ಬಿಜೆಪಿ ಸಂಚು ರೂಪಿಸಿದೆ ಎನ್ನುವುದಕ್ಕೆ ಮುಖ್ಯಮಂತ್ರಿ ಬಳಿ ಇರುವ ದಾಖಲೆಗಳೇನು? ಅದನ್ನು ಅವರು ರಾಜ್ಯದ ಜನರ ಮುಂದೆ ಇಡಬೇಕು.

ಮತದಾರರ ಹೆಸರು ಸೇರ್ಪಡೆ, ತೆಗೆದುಹಾಕುವುದು ಅಥವಾ ಆಕ್ಷೇಪಣೆಗಳ ಕುರಿತು ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರ ಚುನಾವಣಾ ವ್ಯವಸ್ಥೆಯಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳದ್ದು.

ಬಿಜೆಪಿಯ ಕೈಯಲ್ಲಿ ಮತದಾರರ ಹೆಸರನ್ನು ನೇರವಾಗಿ ಅಳಿಸುವ ಯಾವುದೇ ಅಧಿಕಾರವಿಲ್ಲ. ಸಲ್ಲಿಸಿದರೆ ಮಾತ್ರ ಹೆಸರು ಅಳಿದುಹೋಗುವುದಿಲ್ಲ. ಪರಿಶೀಲನೆ, ಆಕ್ಷೇಪಣೆ, ವಿಚಾರಣೆ ಸೇರಿದಂತೆ ಚುನಾವಣಾ ಆಯೋಗದ ನಿಗದಿತ ಪ್ರಕ್ರಿಯೆಯ ನಂತರವೇ ನಿರ್ಧಾರವಾಗುತ್ತದೆ ಎಂದು ತಿಳಿಸಿದ್ದಾರೆ.

### ಮತದಾರರ ಏರಿಕೆ ಬಗ್ಗೆ ಪರಿಶೀಲನೆ ಅಗತ್ಯ

**ಮೈಸೂರು ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಎರಡು ಚುನಾವಣೆಗಳ ಅವಧಿಯಲ್ಲಿ ಸುಮಾರು 1.30 ಲಕ್ಷ ಮತದಾರರ ಸಂಖ್ಯೆ ಹೆಚ್ಚಾಗಿದೆ ಎಂಬ ವಿಚಾರವನ್ನು ನಾವು ಮುಂದಿಟ್ಟಿದ್ದೇವೆ. ಎಸ್‌ಐಆರ್ ಪ್ರಕ್ರಿಯೆಯ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಮತದಾರರ ಪಟ್ಟಿಗೆ ಹೆಸರು ಸೇರಿಸಲು ಬಂದ ಕೆಲವರ ಕುರಿತು ಸ್ಥಳೀಯವಾಗಿ ಪ್ರಶ್ನೆಗಳು ಎದುರಾಗಿವೆ ಎಂಬ ಮಾಹಿತಿಯೂ ನಮ್ಮ ಗಮನಕ್ಕೆ ಬಂದಿದೆ.**

**ಮುಖ್ಯಮಂತ್ರಿಗಳು ಬಿಜೆಪಿ ವಿರುದ್ಧ ಆರೋಪ ಮಾಡುವ ಮೊದಲು, ಕಾಂಗ್ರೆಸ್ ಪಕ್ಷದ ಸ್ಥಳೀಯ ಕಾರ್ಯಕರ್ತರು ಮತ್ತು ಪ್ರತಿನಿಧಿಗಳ ವಿರುದ್ಧ ಬಂದಿರುವ ಮತದಾರರ ಪಟ್ಟಿ ಸಂಬಂಧಿತ ದೂರುಗಳ ಬಗ್ಗೆಯೂ ಸ್ಪಷ್ಟನೆ ನೀಡಬೇಕು.**

## ರೇಣುಕಾಸ್ವಾಮಿ ಹತ್ಯೆ ಕೇಸ್: ಕೋರ್ಟ್‌ನಲ್ಲಿ ಡಿ-ಗ್ಯಾಂಗ್ ರಹಸ್ಯ ಬಯಲು ಮಾಡಿದ ಮಾಫಿ ಸಾಕ್ಷಿ,


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಾಫಿ ಸಾಕ್ಷಿಯಾಗಿ ಬದಲಾಗಿರುವ ಪ್ರಕರಣದ 14ನೇ ಆರೋಪಿ ಪ್ರದೋಷ್ ರಾವ್ ನ್ಯಾಯಾಲಯದ ಮುಂದೆ ನೀಡುತ್ತಿರುವ ತಪ್ಪೊಪ್ಪಿಗೆ ಹೇಳಿಕೆಗಳು ಡಿಗ್ಯಾಂಗ್‌ಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಅದರಂತೆ, ಬೆಂಗಳೂರಿನ 59ನೇ ಸೆಷನ್ಸ್ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ, ರೇಣುಕಾಸ್ವಾಮಿ ಕೊಲೆ ಮುಚ್ಚಿಹಾಕಿ ಬೇರೆ ವ್ಯಕ್ತಿಗಳು ತಾವೇ ಕೊಲೆ ಮಾಡಿದ್ದೇವೆ ಎಂದು ಪೊಲೀಸರಿಗೆ ಶರಣಾಗುವಂತೆ ಮಾಡಲು ನಟ ದರ್ಶನ್ ಹಣದ ಆಮಿಷ ಒಡ್ಡಿದ್ದರು ಎಂದು ಪ್ರದೋಷ್ ಹೇಳಿಕೆ ನೀಡಿದ್ದಾನೆ. ಪಟ್ಟಣಗೆರೆ ಶೆಡ್‌ನಲ್ಲಿ ಚಿತ್ರದುರ್ಗದ ರೇಣುಕಾಸ್ವಾಮಿ ಮೇಲೆ ತೀವ್ರ ಹಲ್ಲೆ ನಡೆದ ಬಳಿಕ, ಆತ ಸಾವನ್ನಪ್ಪಿದ್ದಾನೆ ಎಂಬ ವಿಚಾರವನ್ನು ಆರ್‌ಆರ್ ನಗರದಲ್ಲಿದ್ದ ದರ್ಶನ್ ನಿವಾಸಕ್ಕೆ ತೆರಳಿ ತಿಳಿಸಿದಾಗ ದರ್ಶನ್ ತೀವ್ರ ಆತಂಕಕ್ಕೆ ಒಳಗಾಗಿದ್ದರು. ನಾನು ರಿವಾಲ್ವರ್‌ನಿಂದ ಶೂಟ್ ಮಾಡಿಕೊಂಡು ಸಾಯುತ್ತೇನೆ ಎಂದು ದರ್ಶನ್ ಗಾಬರಿಗೊಂಡಿದ್ದರು ಎಂದು ವಿವರಿಸಿದ ಪ್ರದೋಷ್, ಕೊಲೆ ಆರೋಪವನ್ನು ತಮ್ಮ ತಲೆಗೆ ಹಾಕಿಕೊಂಡು ಪೊಲೀಸರಿಗೆ ಶರಣಾಗಲು ಹುಡುಗರಿಗೆ ಹಣ ನೀಡಲು ನಟ ದರ್ಶನ್ ಒಪ್ಪಿಕೊಂಡಿದ್ದರು ಎಂದು ತಿಳಿಸಿದ್ದಾನೆ. ಅದರಂತೆ, ಪಟ್ಟಣಗೆರೆ ಶೆಡ್‌ನಿಂದ ದರ್ಶನ್ ಮನೆಗೆ ಬಂದ ನಂತರ, ಆರೋಪಿ ವಿನಯ್ ಪೊಲೀಸರಿಗೆ ಶರಣಾಗಲು ಇಬ್ಬರನ್ನು ಒಪ್ಪಿಸಿರುವುದಾಗಿ ತಿಳಿಸಿದ್ದನು. ಅದಕ್ಕಾಗಿ ತಲಾ 5 ಲಕ್ಷ ರೂಪಾಯಿಯಂತೆ ಒಟ್ಟು 10 ಲಕ್ಷ ರೂಪಾಯಿಯನ್ನು ದರ್ಶನ್ ಖುದ್ದಾಗಿ ಬ್ಯಾಗ್‌ನಲ್ಲಿ ತಂದುಕೊಟ್ಟಿದ್ದರು. ಜೊತೆಗೆ ಚಿತ್ರದುರ್ಗದಿಂದ ರೇಣುಕಸ್ವಾಮಿಯನ್ನು ಕರೆತಂದಿದ್ದ ರಾಘವೇಂದ್ರನಿಗೂ 5 ಲಕ್ಷ ರೂಪಾಯಿ ನೀಡಲಾಗಿತ್ತು ಎಂದು ಮಾಫಿ ಸಾಕ್ಷಿ ಪ್ರದೋಷ್ ನ್ಯಾಯಾಲಯಕ್ಕೆ ತಿಳಿಸಿದ್ದಾನೆ.

## ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಮತ್ತೆ ಭದ್ರತಾ ಲೋಪ

• ಉದಯವಾಹಿನಿ, ಬೆಂಗಳೂರು

ರಾಜಧಾನಿಯ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಮತ್ತೊಮ್ಮೆ ಭಾರಿ ಭದ್ರತಾ ಲೋಪ ಬೆಳಕಿಗೆ ಬಂದಿದೆ. ಜೈಲು ಅಧಿಕಾರಿಗಳು ನಡೆಸಿದ ಜಂಟಿ ಅನಿರೀಕ್ಷಿತ ತಪಾಸಣೆಯ ವೇಳೆ ಕೈದಿಗಳ ಬಳಿ ಇದ್ದ ಒಂದು ಕೀಪ್ಯಾಡ್ ಮೊಬೈಲ್ ಫೋನ್, ಮೂರು ಸಿಮ್ ಕಾರ್ಡ್‌ಗಳು ಹಾಗೂ ರೂ. 8,500 ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದೆ.ಈ ಸಂಬಂಧ ಜೈಲು ಅಧೀಕ್ಷಕ ಬಿ.ಎಂ. ಕೋಟ್ರೇಶ್ ಅವರು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ದೂರುಗಳನ್ನು ದಾಖಲಿಸಿದ್ದಾರೆ.ಎಫ್‌ಐಆರ್ ಪ್ರಕಾರ, ಸೆಪ್ಟೆಂಬರ್ 29ರ ಮಧ್ಯಾಹ್ನ ಇಬ್ಬರು ವಾರ್ಡರ್‌ಗಳು ಸಿ ಬ್ಯಾರಕ್‌ನ ಕೊಠಡಿ ಸಂಖ್ಯೆ 4ರಲ್ಲಿ ದಿಢೀರ್ ತಪಾಸಣೆ ನಡೆಸಲಾಗಿದ್ದು, ಈ ವೇಳೆ ಅಪರಾಧಿ ಕೈದಿ ಮಲತೇಶ್ ಬಳಿಯಲ್ಲಿ ಸಿಮ್ ಕಾರ್ಡ್ ಇಲ್ಲದ ಬಿಳಿ ಬಣ್ಣದ ಕೀಪ್ಯಾಡ್ ಮೊಬೈಲ್ ಫೋನ್ ಪತ್ತೆಯಾಗಿದೆ. ತಪಾಸಣೆ ನಡೆಸಿದಾಗ ಅಪರಾಧಿ ಕೈದಿ ಮೊಹಮ್ಮದ್ ನವಾಜ್ ಅವರ ಹಾಸಿಗೆಯ ಮೇಲಿದ್ದ ಟೋಪಿಯೊಳಗೆ ಮೂರು ಸಿಮ್ ಕಾರ್ಡ್‌ಗಳನ್ನು ಬಚ್ಚಿಟ್ಟಿರುವುದು ಪತ್ತೆಯಾಗಿದೆ

## ದಯಾನಂದನಗರ, ಬಂಡಿರೆಡ್ಡಿವೃತ್ತ ವಾರ್ಡ್ ನಲ್ಲಿ ಗಾಂಧಿ ಜಯಂತಿಯ ಅಂಗವಾಗಿ ಸ್ವಚ್ಛ ಭಾರತ ಅಭಿಯಾನ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

**ರಾಜಾಜಿನಗರ ವಿಧಾನಸಭಾ ಕ್ಷೇತ್ರ:** ದಯಾನಂದನಗರ, ಬಂಡಿರೆಡ್ಡಿ ವೃತ್ತ ವಾರ್ಡ್ ನಲ್ಲಿ ಮಹಾತ್ಮ ಗಾಂಧೀಜೀ ರವರ ಹುಟ್ಟುಹಬ್ಬ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಜೀ ಅವರ ಹುಟ್ಟುಹಬ್ಬದ ಅಂಗವಾಗಿ, ಪಕ್ಷದ ಸೂಚನೆಯಂತೆ ಒಂದು ತಿಂಗಳ ಕಾಲ ನಡೆಯುತ್ತಿರುವ ಸೇವಾ ಸಂಕಲ್ಪ ಅಭಿಯಾನದ ಭಾಗವಾಗಿ ಸ್ವಚ್ಛ ಭಾರತ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು. ಶಾಸಕರಾದ ಎಸ್. ಸುರೇಶ್ ಕುಮಾರ್ ಸರ್ ಅವರ ಮಾರ್ಗದರ್ಶನದಲ್ಲಿ, ಮಾಜಿ ಪಾಲಿಕೆ ಸದಸ್ಯ ಶ್ರೀ ಎಂ. ಮುನಿರಾಜು ಅವರ ಮುಂದಾಳತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಂಡಲದ ಅಧ್ಯಕ್ಷರಾದ ಸುದರ್ಶನ್, ಮಂಡಲದ ಕಾರ್ಯದರ್ಶಿಗಳಾದ ಸಂಜಯ್ ಕುಮಾರ್ ಎಂ. ಎಸ್., ವಾರ್ಡ್ ಅಧ್ಯಕ್ಷರುಗಳು, ಪ್ರಧಾನ ಕಾರ್ಯದರ್ಶಿಗಳು, ಎಲ್ಲ ಪದಾಧಿಕಾರಿಗಳು, ಮಹಿಳಾ ಮೋರ್ಚಾ ಹಾಗೂ ಯುವ ಮೋರ್ಚಾ ಕಾರ್ಯಕರ್ತರು, ಪೌರಕಾರ್ಮಿಕರು ಮತ್ತು ಎನ್‌ಸಿಸಿ ವಿದ್ಯಾರ್ಥಿಗಳು ಪಾಲ್ಗೊಂಡರು. ಗಾಂಧೀಜೀ ಮತ್ತು ನರೇಂದ್ರ ಮೋದಿರವರು ಸ್ವಚ್ಛ ಭಾರತ ಸಂಕಲ್ಪವನ್ನು ಈಡೇರಿಸಲು ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

## 177 ತಾಲ್ಲೂಕುಗಳು ಬರಪೀಡಿತ; 46,324.5 ಕೋಟಿ ಬೆಳೆ ನಷ್ಟ ಅಂದಾಜು

• ಉದಯವಾಹಿನಿ, ಬೆಂಗಳೂರು

### ಪರಿಹಾರ ಮಾನದಂಡ ಪರಿಷ್ಕರಣೆಯಾಗಬೇಕು

**ಕೇಂದ್ರ ಗೃಹ ಸಚಿವ ಶ್ರೀ ಅಮಿತ್ ಶಾ ಅವರಿಗೆ ಬರೆದ ಪತ್ರದಲ್ಲಿ ಮತ್ತುಈ ಅಡಿಯಲ್ಲಿ ನೀಡಲಾಗುವ ನೆರವಿನ ಅಂಶಗಳು ಹಾಗೂ ಮಾನದಂಡಗಳನ್ನು, ವಿಶೇಷವಾಗಿ ರೈತರಿಗೆ ನೀಡುವ ಇನ್‌ಪುಟ್ ಸಬ್ಸಿಡಿಗೆ ಸಂಬಂಧಿಸಿದ ಮಾನದಂಡಗಳನ್ನು ಶೀಘ್ರ ಪರಿಷ್ಕರಿಸುವಂತೆ ಮನವಿ ಮಾಡಿದ್ದಾರೆ. ಪ್ರಸ್ತುತ ಜಾರಿಯಲ್ಲಿರುವ ಇನ್‌ಪುಟ್ ಸಬ್ಸಿಡಿ ಮೊತ್ತವು ಇಂದಿನ ಕೃಷಿ ವೆಚ್ಚಕ್ಕೆ ಹೋಲಿಸಿದರೆ ಸಮರ್ಪಕವಾಗಿಲ್ಲ. ರೈತರು ಅನುಭವಿಸುವ ನೈಜ ನಷ್ಟದ ಅಲ್ಪಭಾಗವನ್ನಷ್ಟೇ ಇದು ಭರಿಸುತ್ತದೆ ಎಂಬುದನ್ನು ಅವರು ಕೇಂದ್ರದ ಗಮನಕ್ಕೆ ತಂದಿದ್ದಾರೆ. 16ನೇ ಹಣಕಾಸು ಆಯೋಗದ ಅವಧಿ ಆರಂಭವಾಗಿರುವ ಹಿನ್ನೆಲೆಯಲ್ಲಿ, ಬಹುಕಾಲದಿಂದ ಬಾಕಿ ಇರುವ ಪರಿಹಾರ ಮಾನದಂಡಗಳ ಪರಿಷ್ಕರಣೆಯನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.**

ರಾಜ್ಯದಲ್ಲಿ ಬರ ಪರಿಸ್ಥಿತಿ ಮತ್ತಷ್ಟು ಭೀಕರವಾಗುತ್ತಿರುವ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ. ಜಿ. ಪರಮೇಶ್ವರ ಅವರು ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಹಾಗೂ ಕೇಂದ್ರ ಕೃಷಿ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪ್ರತ್ಯೇಕವಾಗಿ ಪತ್ರ ಬರೆದು, ಕರ್ನಾಟಕಕ್ಕೆ ತುರ್ತು ನೆರವು ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೋರಿದ್ದಾರೆ.

ರಾಜ್ಯ ಸರ್ಕಾರವು ಈಗಾಗಲೇ 101 ಬರಪೀಡಿತ ತಾಲ್ಲೂಕುಗಳಿಗೆ 3,705.30 ಕೋಟಿ ಹಣಕಾಸು ನೆರವು ಕೋರಿ ಖಾರಿಫ್ 2026 ಬರ ಪರಿಹಾರ ಮೆಮೊರಾಂಡಮ್ ಅನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಮುಂದಿನ ವೈಜ್ಞಾನಿಕ ಮೌಲ್ಯಮಾಪನದ ಬಳಿಕ ಹೆಚ್ಚುವರಿಯಾಗಿ 76ತಾಲ್ಲೂಕುಗಳನ್ನು ಎರಡನೇ ಹಂತದಲ್ಲಿ ಬರಪೀಡಿತವೆಂದು ಘೋಷಿಸಲಾಗಿದ್ದು, ಇದರೊಂದಿಗೆ ರಾಜ್ಯದಲ್ಲಿ ಬರಪೀಡಿತ ತಾಲ್ಲೂಕುಗಳ ಸಂಖ್ಯೆ 177ಕ್ಕೆ ಏರಿಕೆಯಾಗಿದೆ. ಇನ್ನೂ 40 ತಾಲ್ಲೂಕುಗಳಲ್ಲಿ ಗ್ರೌಂಡ್ ಟ್ರೂಥಿಂಗ್ ನಡೆಯುತ್ತಿದೆ. ನಿರಂತರ ಮೌಲ್ಯಮಾಪನದ ಆಧಾರದ ಮೇಲೆ ಮುಂಗಾರು ಅಂತ್ಯದ ವೇಳೆಗೆ ಬರಪೀಡಿತ ತಾಲ್ಲೂಕುಗಳ ಸಂಖ್ಯೆ 220 ದಾಟುವ ಸಾಧ್ಯತೆ ಇದೆ ಎಂದಿದ್ದಾರೆ. ಹೊಸದಾಗಿ ಘೋಷಿಸಲಾದ 76 ಬರಪೀಡಿತ ತಾಲ್ಲೂಕುಗಳಲ್ಲಿ ನಡೆಸಿದ ಬೆಳೆಹಾನಿ ಮೌಲ್ಯಮಾಪನದಲ್ಲಿ 26.08 ಲಕ್ಷ ಹೆಕ್ಟೇರ್ ಕೃಷಿ ಬೆಳೆ ಹಾಗೂ 1.49 ಲಕ್ಷ ಹೆಕ್ಟೇರ್ ತೋಟಗಾರಿಕಾ ಬೆಳೆ ಹಾನಿಯಾಗಿರುವುದು ಕಂಡುಬಂದಿದೆ.


ಉದಯವಾಹಿನಿ ಚಿತ್ರ

ಹಾನಿಯ ಪ್ರಮಾಣ ಶೇ.33ರಿಂದ ಶೇ.100ರವರೆಗೆ ಇದ್ದು, ಈ ಬರಪೀಡಿತ ಪ್ರದೇಶಗಳಲ್ಲಿ ಬಹುಪಾಲು ಶೇ.50ಕ್ಕಿಂತ ಹೆಚ್ಚು ಬೆಳೆಹಾನಿ ದಾಖಲಾಗಿದೆ. ತೊಗರಿ, ಮೆಕ್ಕೆಜೋಳ, ಹತ್ತಿ, ಕಬ್ಬು, ಸೋಯಾಬೀನ್ ಮತ್ತು ಹೆಸರು ಕಾಳು ಪ್ರಮುಖವಾಗಿ ಹಾನಿಗೊಳಗಾದ ಕೃಷಿ ಬೆಳೆಗಳಾಗಿವೆ. ಈರುಳ್ಳಿ, ಅಡಿಕೆ ಮತ್ತು ಕೆಂಪು ಮೆಣಸಿನಕಾಯಿ ಸೇರಿದಂತೆ ತೋಟಗಾರಿಕಾ ಬೆಳೆಗಳಿಗೂ ಹಾನಿಯಾಗಿದೆ. ಒಟ್ಟಾರೆ 27.57 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿ ದಾಖಲಾಗಿದ್ದು, ಬೆಳೆ ಬೆಳೆಯುವ ವೆಚ್ಚದ ಆಧಾರದ ಮೇಲೆ 27,576.2 ಕೋಟಿ ನಷ್ಟ ಅಂದಾಜಿಸಲಾಗಿದೆ. ಪ್ರಸ್ತುತ ಮಾನದಂಡಗಳ ಪ್ರಕಾರ ಇನ್‌ಪುಟ್ ಸಬ್ಸಿಡಿಗೆ 2,981.34 ಕೋಟಿ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ ಎಂದು ವಿವರಿಸಿದ್ದಾರೆ. ಒಟ್ಟಾರೆ 177 ಬರಪೀಡಿತ ತಾಲ್ಲೂಕುಗಳಲ್ಲಿ ಸುಮಾರು 47.09 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿಯಾಗಿದ್ದು, ಆರ್ಥಿಕ ನಷ್ಟ 46,324.5 ಕೋಟಿಗೆ ತಲುಪಿದೆ. ನಿರಂತರ ಮೌಲ್ಯಮಾಪನದ ಪ್ರಕಾರ 2026ರ ಖಾರಿಫ್ ಅವಧಿಯಲ್ಲಿ ಒಟ್ಟಾರೆ ಬೆಳೆಹಾನಿ 55 ಲಕ್ಷ ಹೆಕ್ಟೇರ್‌ಗಿಂತ ಹೆಚ್ಚಾಗುವ ಸಾಧ್ಯತೆ ಇದೆ. ಈ ಎರಡು ಹಂತಗಳ ಬರ ಘೋಷಣೆಯ ಮೂಲಕ, ಎನ್‌ಡಿಆರ್‌ಎಫ್ ನಿಯಮಗಳಡಿ 7142.64 ಕೋಟಿಗಳನ್ನು ಕೊಡಬೇಕೆಂದು ಮನವಿ ಸಲ್ಲಿಸಲಾಗಿದೆ. ಇದರಲ್ಲಿ 4998.6ಕೋಟಿ ರೂಗಳು ಇನ್ ಪುಟ್ ಸಬ್ಸಿಡಿಗಾಗಿ ಮತ್ತು 2144.04 ಕೋಟಿ ರೂ ಗಳನ್ನು ಮೇವು ಮತ್ತು ಕುಡಿಯುವ ನೀರು ಮುಂತಾದವುಗಳಿಗಾಗಿ ಕೇಳಲಾಗಿದೆ ಎಂದು ತಿಳಿಸಿದ್ದಾರೆ.

## ಪ್ರತಿಭಟನೆಯ ನಂತರ ಸುಳ್ಳು ಚುನಾವಣಾ ಹಕ್ಕುಗಳ ವಿರುದ್ಧ ಕ್ರಮಕ್ಕೆ ಕರ್ನಾಟಕ ಸಿಇಒ ಆದೇಶ

• ಉದಯವಾಹಿನಿ, ಬೆಂಗಳೂರು

ವಿಶೇಷ ತೀವ್ರ ಪರಿಷ್ಕರಣಾ ಪ್ರಕ್ರಿಯೆ ಸಂದರ್ಭದಲ್ಲಿ ನಮೂನೆ 7 ಅನ್ನು ಸಾಮೂಹಿಕವಾಗಿ ಸಲ್ಲಿಸಿರುವುದು ಮತ್ತು ಅದರ ದುರುಪಯೋಗದ ಬಗ್ಗೆ ಕ್ರಿಮಿನಲ್ ತನಿಖೆಗೆ ಆಗ್ರಹಿಸಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಅವರ ಸಂಪುಟ ಸಹೋದ್ಯೋಗಿಗಳು ಪ್ರತಿಭಟನೆ ನಡೆಸಿದ ಕೆಲವೇ ಗಂಟೆಗಳಲ್ಲಿ, ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿ ವಿ. ಅನ್ಬುಕುಮಾರ್ ಅವರು ರಾಜ್ಯಾದ್ಯಂತ ಚುನಾವಣಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಉದ್ದೇಶಪೂರ್ವಕವಾಗಿ ಸುಳ್ಳು ಹಕ್ಕುಗಳು ಅಥವಾ ಆಕ್ಷೇಪಣೆಗಳನ್ನು ಸಲ್ಲಿಸಿರುವುದು ಕಂಡುಬಂದ ಅರ್ಜಿದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಅವರು ಸೂಚಿಸಿದ್ದಾರೆ.

ಅಕ್ಟೋಬರ್ 1ರಂದು ಹೊರಡಿಸಲಾದ ಈ ನಿರ್ದೇಶನವನ್ನು ಕರ್ನಾಟಕದಾದ್ಯಂತ ಇರುವ ಜಿಲ್ಲಾ ಚುನಾವಣಾ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರಿನ ಚುನಾವಣಾ ಪ್ರಾಧಿಕಾರಗಳು ಹಾಗೂ 224 ವಿಧಾನಸಭಾ ಕ್ಷೇತ್ರಗಳ ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಕಳುಹಿಸಲಾಗಿದೆ.

ಚುನಾವಣಾ ನೋಂದಣಿ ಅಧಿಕಾರಿಗಳ ಮುಂದೆ ನಮೂನೆ 7ರ ಅರ್ಜಿಗಳನ್ನು ಸಾಮೂಹಿಕವಾಗಿ ಸಲ್ಲಿಸಿರುವ ಪ್ರಕರಣಗಳು ಕಚೇರಿಯ ಗಮನಕ್ಕೆ ಬಂದಿವೆ ಮತ್ತು ಕೆಲವು ಅರ್ಜಿಗಳ ಸತ್ಯಾಸತ್ಯತೆಯ ಬಗ್ಗೆ ಆರೋಪಗಳು ಕೇಳಿಬಂದಿವೆ ಎಂದು ಸಿಇಒ ಅವರ ಸೂಚನೆಯಲ್ಲಿ ಉಲ್ಲೇಖಿಸಲಾಗಿದೆ. ಚುನಾವಣಾ ನೋಂದಣಿ ಅಧಿಕಾರಿಗಳ ಮುಂದೆ ನಮೂನೆ 7ರಲ್ಲಿ ಸಾಮೂಹಿಕವಾಗಿ ಅರ್ಜಿಗಳನ್ನು ಸಲ್ಲಿಸುವ ಪ್ರಕರಣಗಳು ಈ ಕಚೇರಿಯ ಗಮನಕ್ಕೆ ಬಂದಿವೆ.

## ನಾಲ್ವರು ಸರ್ಕಾರಿ ಅಧಿಕಾರಿಗಳ ಮೇಲೆ ಲೋಕಾ ದಾಳಿ ವೇಳೆ ಅಸಮತೋಲನ ಆಸ್ತಿ ಪತ್ತೆ

• ಉದಯವಾಹಿನಿ, ಬೆಂಗಳೂರು

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು ರಾಜ್ಯದ 4 ಸರ್ಕಾರಿ ಅಧಿಕಾರಿಗಳ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ಅಪಾರ ಪ್ರಮಾಣದ ನಗದು ಮತ್ತು ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಬೆಂಗಳೂರಿನ ಇಬ್ಬರು ಮತ್ತು ಬೆಳಗಾವಿಯ ಇಬ್ಬರು ಅಧಿಕಾರಿಗಳು ಸೇರಿ ಒಟ್ಟು 4 ಮಂದಿ ಸರ್ಕಾರಿ ಅಧಿಕಾರಿಗಳಿಗೆ ಸೇರಿದ ನಿವಾಸದ ಮೇಲೆ ದಾಳಿ ನಡೆಸಿರುವ ಪೊಲೀಸರು ಅಸಮತೋಲನ ಆಸ್ತಿಯನ್ನು ಪತ್ತೆ ಹಚ್ಚಿದ್ದಾರೆ.

ಆರೋಪಿತ ಅಧಿಕಾರಿಗಳು ಸ್ಥಿರ ಆಸ್ತಿ, ವಾಸದ ಮನೆಗಳು, ಕೃಷಿ ಜಮೀನು ಹೊಂದಿರುವುದು ಕಂಡು ಬಂದಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ. ರಾಜೇಶ್ ಚನ್ನಪ್ಪ ಮಿಶ್ರಿ ಕೋಟಿ, ಕಾರ್ಖಾನೆಗಳು ಮತ್ತು ಬಾಯ್ಲರ್ ಇಲಾಖೆಯ ಉಪ ನಿರ್ದೇಶಕರು ವಿಭಾಗ-1 ಮಂಗಳೂರು, ಇವರಿಗೆ ಸೇರಿದ 6 ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ. ಸುರೇಶ್ ರಾಮು ಮುಂಜೆ, ತಹಶೀಲ್ದಾರ್, ತಹಶೀಲ್ದಾರ್ ಕಚೇರಿ, ನಿಪ್ಪಾಣಿ, ಬೆಳಗಾವಿ, ಇವರಿಗೆ ಸೇರಿದ 9 ಸ್ಥಳಗಳ ಮೇಲೆ ದಾಳಿ ನಡೆಸಿ ಶೋಧ ನಡೆಸಲಾಗಿದೆ.

ಮಂಟೇಸ್ವಾಮಿ, ಜಂಟಿ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯಾಜ್ಯಗಳ ಇಲಾಖೆ, ಮೈಸೂರು, ಇವರಿಗೆ ಸೇರಿದ 8 ಸ್ಥಳಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗಿದೆ. ಆರೋಪಿತ ಅಧಿಕಾರಿಗಳು ಸ್ಥಿರ ಆಸ್ತಿ, ವಾಸದ ಮನೆಗಳು, ಕೃಷಿ ಜಮೀನು ಹೊಂದಿರುವುದು ಕಂಡು ಬಂದಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ. ಜಿ.ಆರ್ ಹರಿಶಿಲ್ಪ, ವಿಶೇಷ ಭೂ ಸ್ವಾಧೀನಾಧಿಕಾರಿ-02 ಬೆಂಗಳೂರು, ಇವರಿಗೆ ಸೇರಿದ 9 ಸ್ಥಳಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗಿದೆ.

## ಮಳವಳ್ಳಿ ಶಿವಣ್ಣ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆ ರದ್ದುಕೋರಿ ಎಚ್. ವಿಶ್ವನಾಥ್, ಮಂಜುನಾಥ್ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ವಿಧಾನಪರಿಷತ್ ಸದಸ್ಯ ಬಿ.ಎಸ್. ಶಿವಣ್ಣ (ಮಳವಳ್ಳಿ ಶಿವಣ್ಣ) ದಾಖಲಿಸಿದ್ದ ಮಾನನಷ್ಟ ಮೊಕದ್ದಮೆ ರದ್ದುಪಡಿಸುವಂತೆ ಕೋರಿ ಮಾಜಿ ಸಚಿವ ಎಚ್.ವಿಶ್ವನಾಥ್ ಹಾಗೂ ಮಾಜಿ ಶಾಸಕ ಎ. ಮಂಜುನಾಥ್ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿ ಆದೇಶಿಸಿದೆ. ಇಬ್ಬರು ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಂತ ರಮಾನಾಥ್ ಹೆಗಡೆ ಅವರಿದ್ದ ಏಕಸದಸ್ಯ ಪೀಠ, ಅರ್ಜಿ ವಜಾಗೊಳಿಸಿ ಆದೇಶಿಸಿದೆ. ವಿಚಾರಣೆ ವೇಳೆ ಅರ್ಜಿದಾರ ಎಚ್. ವಿಶ್ವನಾಥ್ ಹಾಗೂ ಎ. ಮಂಜುನಾಥ್ ಪರ ವಕೀಲರು ಗೈರು ಹಾಜರಾಗಿದ್ದರು. ಪ್ರತಿವಾದಿ ಪರ ವಕೀಲರು ಪ್ರಕರಣದಲ್ಲಿ ವಾದ ಮಂಡಿಸಲು ಸಿದ್ಧರಿದ್ದು, ಅರ್ಜಿದಾರರ ಪರ ವಕೀಲರನ್ನು ತಮ್ಮ ವಾದ ಮಂಡಿಸುವಂತೆ ಕೋರಿಕೊಂಡಿದ್ದಾರೆ. ಆದರೆ ನ್ಯಾಯಪೀಠ, ಅರ್ಜಿದಾರರ ಪರ ವಕೀಲರು ಸತತ ಗೈರು ಹಾಜರಾಗಿದ್ದಾರೆ. ಮುಂದಿನ ವಿಚಾರಣೆ ವೇಳೆ ಹಾಜರಾಗದಿದ್ದರೆ ಅರ್ಜಿಯನ್ನು ವಜಾಗೊಳಿಸಲಾಗುವುದು ಎಂದು ಈ ಹಿಂದೆ ನಡೆದ ವಿಚಾರಣೆ ವೇಳೆ (ಸೆ.25) ಆದೇಶಿಸಿ ವಿಚಾರಣೆಯನ್ನು ಅಕ್ಟೋಬರ್ 1ಕ್ಕೆ ಮುಂದೂಡಲಾಗಿತ್ತು. ಆದರೆ, ಅರ್ಜಿದಾರರ ಪರ ವಕೀಲರು ಪುನಃ ಗೈರು ಹಾಜರಾಗಿದ್ದರಿಂದ ಅರ್ಜಿಗಳನ್ನು ವಜಾಗೊಳಿಸುತ್ತಿರುವುದಾಗಿ ಪೀಠ ತನ್ನ ಆದೇಶದಲ್ಲಿ ತಿಳಿಸಿದೆ. ಪ್ರಕರಣದ ಹಿನ್ನೆಲೆ: ರಾಜ್ಯದಲ್ಲಿ 2023ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಮುಖ್ಯಮಂತ್ರಿ ಆಗಿ ಸಿದ್ದರಾಮಯ್ಯ ಪ್ರಮಾಣ ವಚನ ಸ್ವೀಕಾರ ಮಾಡುವ ವೇದಿಕೆಯಲ್ಲಿ ಸಿದ್ದರಾಮಯ್ಯ ಜೊತೆ ಬಿ.ಎಸ್. ಶಿವಣ್ಣ ಇದ್ದರು.

# ಸಂಪುಟ ಸಭೆಯನ್ನೇ ಅಲಕ್ಷಿಸಿ ರಸ್ತೆಯಲ್ಲಿ ಕೂತು ನಡೆಸಿದ ಪ್ರಹಸನ ಹಾಸ್ಯಾಸ್ಪದ, ದೆಹಲಿ ಅಪ್ಪಣೆಯಂತೆ ಕುಣಿಯುತ್ತಿದ್ದಾರೆ

### ದೆಹಲಿಗೆ ಹೋಗಿ ಅವರ ಅಧಿನಾಯಕರಿಂದ ಅಪ್ಪಣೆ ಮತ್ತು ಅನುಮತಿ ಪಡೆದು ಬಂದಿದ್ದಾರೆ.

• ಉದಯವಾಹಿನಿ, ಬೆಂಗಳೂರು

ಮತಗಳ್ಳತನ ವಿರುದ್ಧ ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ಕಚೇರಿ ಮುಂದೆ ಸಿಎಂ ಆದಿಯಾಗಿ ಸಂಪುಟ ಸಚಿವರು ಧರಣಿ ನಡೆಸುತ್ತಿರುವುದರ ವಿರುದ್ಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**1** ವೋಟ್ ಚೋರಿ ಆಗಿದೆ ಎಂದು ಕಾಂಗ್ರೆಸ್ ಅನಗತ್ಯ

**2** ಕೇಂದ್ರ ಸಚಿವರಾದ ಹೆಚ್ ಡಿ ಕುಮಾರಸ್ವಾಮಿ ಲೇವಡಿ

**3** ಭೂತದ ಬಾಯಲ್ಲಿ ಭಗವದ್ಗೀತೆ

ಜೆ.ಪಿ.ನಗರ ನಿವಾಸದ ಬಳಿ ಕೇಂದ್ರ ಸಚಿವ ಕುಮಾರಸ್ವಾಮಿ ಮಾತನಾಡಿ, ಎಸ್‌ಐಆರ್ ಶುರುವಾದಾಗ ನಿರಂತರ ಅಕ್ರಮಗಳನ್ನು ಎಸಗಿದ ಕಾಂಗ್ರೆಸ್ ಪಕ್ಷವೇ ಈಗ ಅದರ ವಿರುದ್ಧ ಮಾತನಾಡುತ್ತಿರುವುದು ನಾಚಿಕೆಗೇಡು. ಅಲ್ಲದೇ ಮುಖ್ಯಮಂತ್ರಿ ಮತ್ತು ಅವರ ಸಂಪುಟ ಸದಸ್ಯರು ಸಂಪುಟ ಸಭೆಯನ್ನೇ ಅಲಕ್ಷಿಸಿ ರಸ್ತೆಯಲ್ಲಿ ಕೂತು ನಡೆಸಿದ ಪ್ರಹಸನ ಹಾಸ್ಯಾಸ್ಪದ ಎಂದು ಕೇಂದ್ರ ಸಚಿವರಾದ ಹೆಚ್ ಡಿ ಕುಮಾರಸ್ವಾಮಿ ಲೇವಡಿ ಮಾಡಿದರು.

ವೋಟ್ ಚೋರಿ ಆಗಿದೆ ಎಂದು ಕಾಂಗ್ರೆಸ್ ಅನಗತ್ಯವಾಗಿ ರಂಪ ಮಾಡುತ್ತಿರುವುದು ತಮಾಷೆಯಾಗಿದೆ. ಇದು ಹೇಗಿದೆ ಎಂದರೆ ಭೂತದ ಬಾಯಲ್ಲಿ ಭಗವದ್ಗೀತೆ ಬಂದ ಹಾಗಿದೆ. ಎಸ್‌ಐಆರ್ ಪ್ರಕ್ರಿಯೆ ಶುರುವಾದ ಸಂದರ್ಭದಲ್ಲಿ ಇದೇ ಕಾಂಗ್ರೆಸ್ ನಾಯಕರು ಕಲ್ಯಾಣ ಮಂಟಪಗಳು, ಸಮುದಾಯ ಭವನಗಳು, ಮನೆಗಳು


ಉದಯವಾಹಿನಿ ಚಿತ್ರ

ಸೇರಿದಂತೆ ನಾನಾ ಕಡೆ ಜನರನ್ನು ಗುಂಪು ಗುಂಪಾಗಿ ಸೇರಿಸಿ ಮತದಾರರ ಪಟ್ಟಿ ಪರಿಷ್ಕರಣೆ ಮಾಡಿದ್ದನ್ನು ನೋಡಿದ್ದೇವೆ. ಅದರ ವಿರುದ್ಧ ನಮ್ಮ ಪಕ್ಷದ ವತಿಯಿಂದ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇವೆ. ಆಮೇಲೆ ಎನ್‌ಡಿಎ ಮೈತ್ರಿಕೂಟದ ನಾಯಕರೆಲ್ಲರೂ ಹೋಗಿ ದೂರು ನೀಡಿದ್ದೇವೆ. ಆದರೂ ಯಾರ ಮೇಲೆಯೂ ಪ್ರಕರಣ ದಾಖಲಾಗಲಿಲ್ಲ. ಆದರೂ ಇವತ್ತು ಅಕ್ರಮ ಎಸಗಿದ ಕಾಂಗ್ರೆಸ್ ಪಕ್ಷದವರೇ ಬಂದು ಅಕ್ರಮ ಅಕ್ರಮ ಎಂದು ಬಾಯಿ ಬಡಿದುಕೊಳ್ಳುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ದೂರಿದರು.

ನಾವು ದೂರು ಕೊಟ್ಟಾಗ ಮೌನಕ್ಕೆ ಶರಣಾಗಿದ್ದ ಸರ್ಕಾರ, ಎಸ್‌ಐಆರ್ ನಲ್ಲಿ ದೋಷ ಇಲ್ಲ ಎಂದು ಸುಮ್ಮನೆ ಇದ್ದವರು ಈಗ ಏಕೆ ಎದ್ದು ಕೂತಿದ್ದೀರಿ?

### ಗ್ಯಾರಂಟಿಗಳಿಂದ ಖಜಾನೆ ಖಾಲಿ

**ನೈಸ್ ಯೋಜನೆಯನ್ನು ತೆಗೆದುಕೊಳ್ಳಬೇಕಾದರೆ ಈ ಸರ್ಕಾರದ ಬಳಿ ಹಣಕ್ಕೆ ಗತಿಯಿಲ್ಲ. ಏನಾದ್ರೂ ಆದರೆ ಇವರು ವಿಧಾನಸೌಧ ಮತ್ತು ವಿಕಾಸ ಸೌಧವನ್ನು ನನಗೆ ಬರೆದು ಕೊಡಬೇಕು. ಕೊನೆ ಪಕ್ಷ ಎರಡು ಲಕ್ಷ ಕೋಟಿ ಹಣವನ್ನು ನನಗೆ ಕೊಡಬೇಕಾಗುತ್ತದೆ.**

**ಮುಖ್ಯಮಂತ್ರಿ ಸಂಪುಟ ಸಭೆ ಬಿಟ್ಟು ರಸ್ತೆಯ ಮುಂದೆ ಅದು ಹೇಗೆ ಪ್ರತಿಭಟನೆ ನಡೆಸಲು ಸಾಧ್ಯ? ನಾವು ಪ್ರತಿಭಟನೆ ಮಾಡಲು ಹೋದರೆ ನ್ಯಾಯಾಲಯದ ಆದೇಶವಿದೆ ಅವಕಾಶ ನೀಡುವುದಿಲ್ಲ ಎಂದು ಹೇಳುವ ಪೊಲೀಸರು, ಈ ಮುಖ್ಯಮಂತ್ರಿಗೆ ಪ್ರತಿಭಟನೆ ನಡೆಸಲು ಪೊಲೀಸರು ಹೇಗೆ ಅವಕಾಶ ಕೊಟ್ಟರು? ಇದು ನ್ಯಾಯಾಂಗ ಉಲ್ಲಂಘನೆ ಆಗುವುದಿಲ್ಲವೇ ಎಂದು ಸಚಿವರು ಪ್ರಶ್ನಿಸಿದರು.**

ನಿಮ್ಮ ದೆಹಲಿ ನಾಯಕರು ಬಿಸಿ ಮುಟ್ಟಿಸಿದ ಮೇಲೆ ನೀವು ಈ ಪ್ರಹಸನ ಆರಂಭ ಮಾಡಿದ್ದೀರಿ. ಈಗ ಬಂದು ನಾಟಕ ಶುರು ಮಾಡಿದ್ದೀರಿ. ಮಾಧ್ಯಮಗೋಷ್ಠಿಯನ್ನು ನಡೆಸಿ, ನೈಸ್ ಕಂಪನಿ ಜತೆ ಶಾಮೀಲಾಗಿ ಮುಖ್ಯಮಂತ್ರಿ ಮತ್ತು ಅವರ ಕುಟುಂಬ ಸದಸ್ಯರು ಯೋಜನೆಯ ಭೂಮಿಯನ್ನು ಲಪಟಾಯಿಸುವ ಬಗ್ಗೆ ದಾಖಲೆಗಳ ಸಮೇತ ಬಹಿರಂಗ ಮಾಡಿದ್ದೆ. ಆ ವಿಷಯ ರಾಜಕೀಯವಾಗಿ ಮತ್ತು ಸಾರ್ವಜನಿಕವಾಗಿ ತೀವ್ರ ಚರ್ಚೆಗೆ ಒಳಗಾಗುತ್ತಿರುವ ಸಂದರ್ಭದಲ್ಲಿ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಈ ಎಸ್‌ಐಆರ್ ವಿಷಯವನ್ನು ಮುನ್ನೆಲೆಗೆ ತಂದಿದ್ದಾರೆ ಎಂದು ಸಚಿವ ಕುಮಾರಸ್ವಾಮಿ ಅವರು ನೇರ ಆರೋಪ ಮಾಡಿದರು.

## ಹನೂರು ಡ್ಯಾಂ ಮತ್ತು ಹಳ್ಳಗಳಲ್ಲಿ ನೀರಿನ ಹರಿವು ಹೆಚ್ಚಳ, ಶಾಸಕರಿಂದ ಪರಿಶೀಲನೆ

• **ಉದಯವಾಹಿನಿ,** ಹನೂರು

ತಾಲ್ಲೂಕಿನಲ್ಲಿ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದ ಹುಬ್ಬೆ-ಹುಣಸೆ ಡ್ಯಾಂ ಹಾಗೂ ಸುತ್ತಮುತ್ತಲಿನ ಹಳ್ಳಗಳಲ್ಲಿ ನೀರಿನ ಹರಿವು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಶಾಸಕ ಎಂ.ಆರ್. ಮಂಜುನಾಥ್ ಅವರು ನೀರಾವರಿ ಇಲಾಖೆಯ ಅಧೀಕ್ಷಕ ಹಾಗೂ ಅಧಿಕಾರಿಗಳೊಂದಿಗೆ ಡ್ಯಾಂಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿದ ಅವರು, ಕಳೆದ 20 ವರ್ಷಗಳಲ್ಲಿಯೇ ಕಂಡುಬರದ ರೀತಿಯಲ್ಲಿ ಹುಬ್ಬೆ-ಹುಣಸೆ ಡ್ಯಾಂ ಹಾಗೂ ಹಳ್ಳಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಇದರಿಂದ ಹನೂರು ಪಟ್ಟಣದ ತಗ್ಗು ಪ್ರದೇಶಗಳಲ್ಲಿನ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಮಳೆಗಾಲದಲ್ಲಿ ಮರುಕಳಿಸುತ್ತಿರುವ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವುದು ಅಗತ್ಯವಾಗಿದೆ ಎಂದರು. ಹಿಂದೆ ಹಳ್ಳಗಳು ಅಗಲವಾಗಿ ಹಾಗೂ ಆಳವಾಗಿ ಇದ್ದುದರಿಂದ ಮಳೆನೀರು ಸರಾಗವಾಗಿ ಹರಿದು ಹೋಗುತ್ತಿತ್ತು. ಆದ ಪಟ್ಟಣದ ಬೆಳವಣಿಗೆಯೊಂದಿಗೆ ಹಳ್ಳಗಳ ಅಕ್ಕಪಕ್ಕದಲ್ಲಿ ಒತ್ತುವರಿ ಹೆಚ್ಚಾಗಿರುವುದು ಹಾಗೂ ನೀರಿನ ಹರಿವಿಗೆ ಅಡ್ಡಿಯಾಗುವಂತಹ ಅವೈಜ್ಞಾನಿಕ ನಿರ್ಮಾಣಗಳು ಪ್ರವಾಹ ಪರಿಸ್ಥಿತಿಗೆ ಕಾರಣವಾಗುತ್ತಿವೆ.

ತಾತ್ಕಾಲಿಕ ಕ್ರಮಗಳಿಗೆ ಸೀಮಿತವಾಗದೆ, ವೈಜ್ಞಾನಿಕ ರೀತಿಯಲ್ಲಿ ಶಾಶ್ವತ ಪರಿಹಾರ ರೂಪಿಸಬೇಕಿದೆ ಎಂದು ಅವರು ಹೇಳಿದರು.ಹನೂರು ಪಟ್ಟಣದಲ್ಲಿ ಮಳೆನೀರಿನ ಪ್ರವಾಹವನ್ನು ನಿಯಂತ್ರಿಸುವ ಉದ್ದೇಶದಿಂದ ಹಳ್ಳದ ಎರಡೂ ಬದಿಗಳಲ್ಲಿ ಸುಮಾರು 3 ರಿಂದ 4 ಮೀಟರ್ ಎತ್ತರದ ತಡೆಗೋಡೆ (ರಿಟೈನಿಂಗ್ ವಾಲ್) ನಿರ್ಮಿಸುವ ಕುರಿತು ನೀರಾವರಿ ಇಲಾಖೆ-ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಲಾಯಿತು.

ಈ ಯೋಜನೆಯಿಂದ ಹಳ್ಳದ ನೀರು ವಸತಿ ಪ್ರದೇಶಗಳಿಗೆ ನುಗ್ಗುವುದನ್ನು ನಿಯಂತ್ರಿಸಲು ಸಾಧ್ಯವಾಗುವ ನಿರೀಕ್ಷೆಯಿದ್ದು, ಕಾಮಗಾರಿಯ ತಾಂತ್ರಿಕ ಸಾಧ್ಯತೆಗಳ ಕುರಿತು ಅಧಿಕಾರಿವ ಸಲಹೆ ಪಡೆಯಲಾಗಿದೆ. ಈ ಸಂಬಂಧ ಅವರು ಅಗತ್ಯ ಸಲಹೆಗಳನ್ನು ನೀಡಿದ್ದಾರೆ.

## ಕೋಲಾರದಲ್ಲಿ ಅಪರೂಪದ 'ಆಲಿವ್ ನೀರು ಹಾವು' ಪತ್ತೆ!

• **ಉದಯವಾಹಿನಿ, ಕೋಲಾರ**

ಕೋಲಾರದ ಮಾಸ್ತಿ ಬಡಾವಣೆಯಲ್ಲಿರುವ ಪಶುವೈದ್ಯ ಡಾ. ರಾಹುಲ್ ಅವರ ಮನೆಯ ಆವರಣದಲ್ಲಿ ಅತ್ಯಂತ ಅಪರೂಪದ ಹಾಗೂ ವಿರಳವಾಗಿ ಕಂಡುಬರುವ 'ಆಲಿವ್ ನೀರು ಹಾವು ಪ್ರತ್ಯಕ್ಷವಾಗಿದೆ.

ವಿಷರಹಿತವಾದ ಈ ನೀರಾವು ಮನೆಯ ಅಂಗಳದಲ್ಲಿ ಸದ್ದು ಮಾಡದೆ ಕಾಣಿಸಿಕೊಂಡಿದ್ದು, ಮನೆಯವರು ತಕ್ಷಣವೇ ಉರಗ ರಕ್ಷಕ ನಾಗರಾಜ್ ಅವರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಉರಗ ರಕ್ಷಕ ನಾಗರಾಜ್, ಜಾಗರೂಕತೆಯಿಂದ ಹಾವನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಳಿಕ ಈ ಅಪರೂಪದ ನೀರಾವನ್ನು ಸುರಕ್ಷಿತವಾಗಿ ಸಮೀಪದ



ಉದಯವಾಹಿನಿ ಚಿತ್ರ

ಅರಣ್ಯ ಪ್ರದೇಶಕ್ಕೆ ತಂದು ಬಿಡಲಾಗಿದೆ. ಹಾವನ್ನು ಯಶಸ್ವಿಯಾಗಿ ರಕ್ಷಿಸಿದ್ದಕ್ಕೆ ಸ್ಥಳೀಯರು ಹಾಗೂ ಅರಣ್ಯ ಪ್ರೇಮಿಗಳು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

# ನೀರಿನ ಬಿಲ್ ಬರೋಬ್ಬರಿ 23 ಕೋಟಿ ಬಾಕಿ

### ಗೃಹ ಬಳಕೆ ಸಂಪರ್ಕದ ಬಾಕಿ ಬಿಲ್ಲೊತ್ತವೇ 20.23 ಕೋಟಿ! ಗೃಹೇತರ ಬಳಕೆ ಬಾಕಿ 17.42 ಲಕ್ಷ ಇದೆ.

• **ಉದಯವಾಹಿನಿ, ರಾಮನಗರ**

**1** ನೈಸ್ ರಸ್ತೆಗೆ ನಮ್ಮ ಆಕ್ಷೇಪವಿಲ್ಲ
**2** ಪೂಜ್ಯರಿಗೆ ಒಂದು ಭರವಸೆ ನೀಡಿ
**3** ಚೇಣಿಯವರೇ ಮಠಕ್ಕೆ ಬಂದಿದ್ದರು

ಜಿಲ್ಲಾ ಕೇಂದ್ರವಾದ ರಾಮನಗರಕ್ಕೆ ಪೂರೈಕೆಯಾಗುವ ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ, ಕಳೆದ 30 ವರ್ಷಗಳಿಂದ ನಗರದಲ್ಲಿ ವಸೂಲಿಯಾಗದ ಬಾಕಿ ಬಿಲ್ ಮೊತ್ತ ಬಡ್ಡಿ ಸಮೇತ ಬರೋಬ್ಬರಿಗೆ 23 ಕೋಟಿ ತಲುಪಿದೆ. ಈ ಪೈಕಿ ಗೃಹ ಬಳಕೆ ಸಂಪರ್ಕದ ಬಾಕಿ ಮೊತ್ತವೇ 20.23 ಕೋಟಿ! ಉಳಿದಂತೆ ವಾಣಿಜ್ಯ ಬಳಕೆ ಬಿಲ್ 2.99 ಕೋಟಿ ಹಾಗೂ ಗೃಹೇತರ ಬಳಕೆ ಬಾಕಿ 17.42 ಲಕ್ಷ ಇದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ತವರು ಜಿಲ್ಲೆಯ ಜಿಲ್ಲಾ ಕೇಂದ್ರದ ಆಡಳಿತ ಸಂಸ್ಥೆಯಾದ ನಗರಸಭೆಯು ನಗರದ ಮೂಲಸೌಕರ್ಯ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಹಣಕಾಸಿನನೆರವಿಗಾಗಿ ಸರ್ಕಾರದ ಕಡೆ ಮುಖ ಮಾಡಿದ್ದರೆ, ಮತ್ತೊಂದೆಡೆ ವಸೂಲಿಯಾಗದ ನೀರಿನ ಬಾಕಿ ಬಿಲ್ ಮೊತ್ತ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ. ಅರ್ಕಾವತಿ ನದಿ ನೀರನ್ನೇ ಅವಲಂಬಿಸಿದ್ದ ನಗರಕ್ಕೆ ಕಳೆದೆರಡು ವರ್ಷದಿಂದ ಟಿ.ಕೆ. ಹಳ್ಳಿಯಿಂದ ಶುದ್ಧೀಕರಿಸಿದ ಕಾವೇರಿ ನೀರನ್ನು ರಾಮನಗರಕ್ಕೆ ದಿನದ 24 ತಾಸು ಪೂರೈಕೆ ಮಾಡಲಾಗುತ್ತಿದೆ. ಅದಕ್ಕೂ ಮುಂಚೆ ಅಧಿಕೃತ ನೀರಿನ ಸಂಪರ್ಕದ ಜೊತೆಗೆ ಅನಧಿಕೃತವಾಗಿದ್ದ ಸಂಪರ್ಕಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕೆಯುಡಬ್ಲ್ಯೂಎಸ್‌ಡಿಬಿ) ಪತ್ತೆ ಹಚ್ಚುತ್ತಾ ಬಂದಿದೆ. ಅನಧಿಕೃತ ಸಂಪರ್ಕಗಳನ್ನು ಅಧಿಕೃತಗೊಳಿಸುವ ಜೊತೆಗೆ ಹಿಂದಿನ ಬಾಕಿ ಬಿಲ್ ಮೊತ್ತ ಸಂಗ್ರಹಕ್ಕೂ ಮಂಡಳಿ ಮುಂದಾಗಿದೆ.



ಉದಯವಾಹಿನಿ ಚಿತ್ರ

18,148 ಸಂಪರ್ಕ: 'ನಗರದಲ್ಲಿ ನಿರಂತರ ನೀರು ಪೂರೈಕೆ ಅನುಷ್ಠಾನದ ಜೊತೆಗೆ ಎಲ್ಲಾ ರೀತಿಯ ಸಂಪರ್ಕಗಳನ್ನು ಅಧಿಕೃತಗೊಳಿಸುವ ಕೆಲಸಕ್ಕೂ ಚಾಲನೆ ನೀಡಿದ ಮಂಡಳಿಯು, ಪ್ರತಿ ಸಂಪರ್ಕಕ್ಕೆ ಪ್ರತ್ಯೇಕವಾಗಿ ಡಿಜಿಟಲ್ ಮೀಟರ್ ಅಳವಡಿಸಿದೆ. ಈ ವರ್ಷದ ಆಗಸ್ಟ್ ಅಂತ್ಯದವರೆಗೆ ನಗರದಲ್ಲಿ ಸುಮಾರು 18,148 ನಿರಂತರ ನೀರಿನ ಸಂಪರ್ಕಗಳನ್ನು ನೀಡಲಾಗಿದೆ. 'ಒಟ್ಟು ನೀರಿನ ಸಂಪರ್ಕಗಳ ಪೈಕಿ ಗೃಹ ಬಳಕೆಯು ಸಿಂಹಪಾಲಾಗಿದ್ದು ಒಟ್ಟು 17,517 ಇದೆ. ಉಳಿದಂತೆ 471 ವಾಣಿಜ್ಯ ಸಂಪರ್ಕ ಹಾಗೂ 160 ಗೃಹೇತರ ಸಂಪರ್ಕಗಳನ್ನು ನೀಡಲಾಗಿದೆ. ಅನಧಿಕೃತ ಸಂಪರ್ಕಗಳನ್ನು ಅಧಿಕೃತಗೊಳಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಜೊತೆಗೆ ಹೊಸ ಸಂಪರ್ಕಗಳನ್ನು ನೀಡಲಾಗುತ್ತಿದ್ದು, ಸಂಪರ್ಕಗಳ ಸಂಖ್ಯೆ ಏರುತ್ತಲೇ ಇದೆ' ಎಂದು ಹೇಳಿದರು.

**ಮನ್ನಾ ಸರ್ಕಾರಕ್ಕೆ ಬಿಟ್ಟದ್ದು:** ಬೆಟ್ಟದಂತೆ ಬೆಳೆದಿರುವ ನೀರಿನ ಬಾಕಿ ಬಿಲ್ ಅನ್ನು ಇದೊಂದು ಬಾರಿ ಮನ್ನಾ ಮಾಡಿ, ನಂತರಪ್ರತಿ ತಿಂಗಳು ತಪ್ಪದೆ ವಸೂಲಿ ಮಾಡಬೇಕು ಎಂದು ನಾಗರಿಕರು ಒತ್ತಾಯಿಸುತ್ತಿದ್ದಾರೆ.

ಆದರೆ, ಮನ್ನಾ ನಿರ್ಧಾರ ಸರ್ಕಾರದ ಮಟ್ಟದಲ್ಲಿ ಆಗಬೇಕು. ಈ ಕುರಿತು ನಗರಸಭೆಯು ಪ್ರಸ್ತಾವ ಕಳಿಸಬೇಕು. ಇಲ್ಲದಿದ್ದರೆ ಬಾಕಿದಾರರು ಪಾವತಿಸಲೇಬೇಕಾಗುತ್ತದೆ ಎಂದು ಮಂಡಳಿ ಅಧಿಕಾರಿಗಳು ತಿಳಿಸಿದರು. ನಗರವು ಪುರಸಭೆ ಆಗಿದ್ದಾಗಿನಿಂದ ಹಿಡಿದು ನಗರಸಭೆಯಾಗಿ ಮೇಲ್ದರ್ಜೆಗೇರಿದಾಗಲೂ ಸ್ಥಳೀಯ ಆಡಳಿತ ಸಂಸ್ಥೆಯೇ ನೀರು ಪೂರೈಕೆ ಮತ್ತು ನಿರ್ವಹಣೆ ಹೊಣೆ ನಿಭಾಯಿಸುತ್ತಿತ್ತು. 2005ರಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಜವಾಬ್ದಾರಿ ಹಸ್ತಾಂತರವಾಯಿತು.

### ನಿರ್ವಹಣೆಗೆ ನಗರಸಭೆ ಆಸಕ್ತಿ

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯೇ 2005ರಿಂದ ನಗರದ ನೀರು ಪೂರೈಕೆ ಹಾಗೂ ನಿರ್ವಹಣೆ ಹೊಣೆಯನ್ನು ನಿಭಾಯಿಸುತ್ತಿದೆ. ಅದನ್ನು ಮತ್ತಷ್ಟು ಸುಲಲಿತವಾಗಿ ನಿಭಾಯಿಸುವ ದೃಷ್ಟಿಯಿಂದ ನಗರಸಭೆಯು ಕಳೆದ ತಿಂಗಳು ನಡೆದ ಸಾಮಾನ್ಯಸಭೆಯಲ್ಲಿ ನೀರು ಪೂರೈಕೆ ಮತ್ತು ನಿರ್ವಹಣೆ ಜವಾಬ್ದಾರಿಯನ್ನು ನಗರಸಭೆಗೆ ಹಸ್ತಾಂತರ ಮಾಡಿಕೊಳ್ಳಲು ನಿರ್ಣಯ ಮಾಡಿದೆ.**

**ನಗರದ ವ್ಯಾಪ್ತಿಯಲ್ಲಿ ನೀರು ಪೂರೈಕೆ ದರವನ್ನು ಪರಿಷ್ಕರಿಸಿ ಶೇ 60ರಷ್ಟು ಏರಿಕೆ ಮಾಡಲು ನಗರಸಭೆಯು ಜು. 1ರಂದು ನಡೆದ ಸಾಮಾನ್ಯಸಭೆಯಲ್ಲಿ ತೀರ್ಮಾನಿಸಿತು. ಸರ್ಕಾರದ 2017ರ ಆದೇಶದ ಪ್ರಕಾರ 3 ವರ್ಷಕ್ಕೊಮ್ಮೆ ದರ ಪರಿಷ್ಕರಣೆ ಮಾಡಬೇಕು. ಅದರಂತೆಅದರಂತೆ ಸೆ. 1ರಿಂದ ಪರಿಷ್ಕೃತ ದರವು ಜಾರಿಗೆ ಬಂದಿದೆ. ಹಿಂದೆ 2011 ಹಾಗೂ 2017ರಲ್ಲಿ ತಿಂಗಳಿಗೆ ಇಂತಿಷ್ಟು ದರವನ್ನು ನಿಗದಿಪಡಿಸಿ ಪರಿಷ್ಕರಣೆ ಮಾಡಲಾಗಿತ್ತು.**

## ಗಾಂಧೀಜಿ, ಶಾಸ್ತ್ರಿ ಬದುಕು ಮತ್ತು ಹೋರಾಟ ನಮಗೆಲ್ಲರಿಗೂ ಮಾದರಿ

• **ಉದಯವಾಹಿನಿ, ಗುಂಡ್ಲುಪೇಟೆ**

ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹಾದ್ದೂರ್ ಶಾಸ್ತ್ರಿ ತಮ್ಮ ಬದುಕನ್ನು ದೇಶ ಸೇವೆಗೆ ಮುಡಿಪಾಗಿಟ್ಟಿದ್ದರು ಎಂದು ತಹಶೀಲ್ದಾರ್ ಎಂ.ಎಸ್.ತನ್ಮಯ್ ಹೇಳಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹಾದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮದಲ್ಲಿ ಇಬ್ಬರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಅಹಿಂಸೆ ಮತ್ತು ಸತ್ಯಾಗ್ರಹದ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ನೇತೃತ್ವ ನೀಡಿದ ಮಹಾತ್ಮ ಗಾಂಧೀಜಿ ದೇಶಕ್ಕೆ ಸ್ವಾತಂತ್ರ್ಯ ದೊರಕಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಲಾಲ್ ಬಹಾದ್ದೂರ್ ಶಾಸ್ತ್ರಿಯವರು 'ಜೈ ಜವಾನ್, ಜೈ ಕಿಸಾನ್ ಘೋಷಣೆಯ ಮೂಲಕ ದೇಶದ ಸೈನಿಕರು ಹಾಗೂ ರೈತರ ಮಹತ್ವವನ್ನು ಸಾರಿದರು. ಇಬ್ಬರ ಬದುಕು ಮತ್ತು ಹೋರಾಟ ಇಂದಿನ ಪೀಳಿಗೆಗೆ ಮಾದರಿಯಾಗಿದೆ ಎಂದರು.

ಜಗತ್ತಿನಲ್ಲಿ ಶಾಂತಿ ಮತ್ತು ಅಹಿಂಸೆ ಎಂದಾಗ ಮೊದಲು ನೆನಪಾಗುವವರು ಮಹಾತ್ಮ ಗಾಂಧೀಜಿ. ಅವರ ಅಹಿಂಸಾ ತತ್ವವನ್ನು ಸ್ಮರಿಸುವ ಸಲುವಾಗಿ ಗಾಂಧೀಜಿಯವರ ಜನ್ಮದಿನವನ್ನು ಅಂತಾರಾಷ್ಟ್ರೀಯ ಅಹಿಂಸಾ ದಿನವನ್ನಾಗಿ ಆಚರಿಸಲಾಗುತ್ತಿದೆ. ರಾಜಕಾರಣಿ, ಸಾಮಾಜಿಕ ಕಾರ್ಯಕರ್ತ ಹಾಗೂ



ಉದಯವಾಹಿನಿ ಚಿತ್ರ

ವಕೀಲರಾಗಿದ್ದ ಗಾಂಧೀಜಿಯವರ ತತ್ವ-ಸಿದ್ಧಾಂತಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಿರಸ್ತೇದಾರ್ ವಿನೋದ್, ಕಂದಾಯ ನಿರೀಕ್ಷಕ ಮನೋಹರ್, ಗ್ರಾಮ ಆಡಳಿತಾಧಿಕಾರಿ ಜವರೇಗೌಡ, ನಾಗರತ್ನ, ಸಂತೋಷ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ತಾಲೂಕು ಕಚೇರಿ ಸಿಬ್ಬಂದಿ ಉಪಸ್ಥಿತರಿದ್ದರು.

## ಆರೋಗ್ಯಯುತ ಜೀವನಕ್ಕೆ ಸ್ವಚ್ಛತೆ ಅತ್ಯಗತ್ಯ

• **ಉದಯವಾಹಿನಿ, ಚಾಮರಾಜನಗರ**

ಜನರಲ್ಲಿ ಸ್ವಚ್ಛತೆಯ ಅರಿವಿನ ದೃಢಸಂಕಲ್ಪ ಮಾಡಲು ಸ್ವಚ್ಛತಾ ಹೀ ಸೇವಾ ಆಂದೋಲನ ನಿರಂತರವಾಗಿ ನಡೆಯಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೋನಾ ರೋತ್ ತಿಳಿಸಿದರು. ತಾಲ್ಲೂಕಿನ ಹೆಬ್ಬಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ದಡದಹಳ್ಳಿ ಗ್ರಾಮದ ನಂದಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಗುರುವಾರ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ, ಹೆಬ್ಬಸೂರು ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಸ್ವಚ್ಛತಾ ಹೀ ಸೇವಾ ಆಂದೋಲನದಲ್ಲಿ ದೇವಸ್ಥಾನದ ಸುತ್ತಮುತ್ತ ಹಾಗೂ ಪ್ರಾಚೀನ ಕಲ್ಯಾಣಿ ಶ್ರಮದಾನ ಅಭಿಯಾನಕ್ಕೆ ಚಾಲನೆ ನೀಡಿ, ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿದರು. ಗ್ರಾಮದ ಪರಿಸರ ಸ್ವಚ್ಛತೆಯಿಂದ ಪ್ರತಿಯೊಬ್ಬರೂ ಆರೋಗ್ಯಯುತ ಜೀವನ ಆರ್ಥಿಕ ಸದೃಢತೆಯನ್ನು ಹೊಂ ಸಾಧ್ಯವಾಗುತ್ತದೆ. ಮಹಾತ್ಮ ಗಾಂಧೀಜಿ ಜಯಂತಿಯಂದು ಅವರಿಗೆ ಗೌರವ ಸಲ್ಲಿಸಲು ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ 'ಸ್ವಚ್ಛತಾ ಹೀ ಸೇವಾ-2026 ಎಂಬ ವಿಶೇಷ ಜನಾಂದೋಲನವನ್ನು ಪ್ರತಿವರ್ಷ ಅ.2ರಂದು ಸ್ವಚ್ಛ ಭಾ ದಿನವನ್ನಾಗಿ ಆಚರಿಸಲಾಗುತ್ತಿದೆ. ಸ್ವಚ್ಛತೆಗಾಗಿ ಸ್ವಯಂ ಪ್ರೇರಣೆ ಮತ್ತು ಸಾಮೂಹಿಕ ಶ್ರಮದಾನ ಚಟುವಟಿಕೆಗಳನ್ನು ಹಮ್ಮಿಕೊಂಡು ಸಮುದಾಯದಲ್ಲಿ ಸ್ವಚ್ಛತೆಯ ಆಶಯಗಳನ್ನು ಬಲಪಡಿಸುವ ಉದ್ದೇಶದೊಂದಿಗೆ ಸ್ವಚ್ಛತಾ ಹೀ ಸೇವಾ ಆಂದೋಲನವನ್ನು 2017ರಿಂದ ಆಚರಿಸಲಾಗುತ್ತಿದೆ ಎಂದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಡಿ.ಸಿ.ಶ್ರುತಿ ಪ್ರಾಸ್ತಾವಿಕವಾಗಿ ಮಾತನಾಡಿ ಮಹಾತ್ಮ ಗಾಂಧೀಜಿ ಅವರ ಜನ್ಮ ದಿನಾಚರಣೆಯ ಸ್ಮರಣಾರ್ಥ ಸ್ವಚ್ಛ ಭಾರತ್ ದಿವಸ ಆಚರಿಸಲಾಗುತ್ತಿದೆ.

ವಿವಿಧ ಸ್ವಚ್ಛತಾ ಚಟುವಟಿಕೆಗಳು ಅನೈರ್ಮಲ್ಯ ತಾಣಗಳ ಗುರುತಿಸುವಿಕೆ ಮತ್ತು ಸ್ವಚ್ಛಗೊಳಿಸುವಿಕೆ, ಶಾಲಾ ಮಕ್ಕಳಿಂದ ವಿವಿಧ ಜಾಗೃತಿ ಕಾರ್ಯಕ್ರಮಗಳು, ಪೌರಕಾರ್ಮಿಕರ ಆರೋಗ್ಯ ಶಿಬಿರಗಳು, ಸ್ವ-ಸಹಾಯ ಮಹಿಳಾ ಗುಂಪಿನಿಂದ ಗುಂಪು ಸಭೆ, ಚರ್ಚೆ ಮತ್ತು ವಿವಿಧ ಸ್ವತ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ ಎಂದರು.

## ಅಂತರಾಷ್ಟ್ರೀಯ ಕರಾಟೆ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದ ರಾಮನಗರದ ಲಕ್ಷಿತ್ ಟಿ. ಗೌಡ

• **ಉದಯವಾಹಿನಿ, ರಾಮನಗರ**



ಉದಯವಾಹಿನಿ ಚಿತ್ರ

ಮುಂಬೈನಲ್ಲಿ ನಡೆದ ಅಂತರ ರಾಷ್ಟ್ರೀಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ರಾಮನಗರದ ಲಕ್ಷಿತ್ ಟಿ. ಗೌಡ ಚಿನ್ನದ ಪದಕ ಪಡೆಯುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾನೆ.

ಹಿರಿಯ ವಕೀಲ ಹಾಗೂ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ರಾಮನಗರ ಜಿಲ್ಲಾ ಶಾಖೆಯ ಪ್ರಧಾನ ಕಾರ್ಯದರ್ಶಿ ಟಿ.ತಿಮ್ಮೇಗೌಡ ಅವರ ಪುತ್ರ ಲಕ್ಷಿತ್ ಟಿ. ಗೌಡ ಅವರು, ಮುಂಬೈನಲ್ಲಿ ನಡೆದ ಭಾರತ, ಶ್ರೀಲಂಕಾ, ನೇಪಾಳ ರಾಷ್ಟ್ರಗಳ ನಡುವಿನ ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಿ ಅತ್ಯಂತ ಕಿರಿ ವಯಸ್ಸಿನಲ್ಲಿ ಚಿನ್ನದ ಪದಕವನ್ನು ಗಳಿಸುವ ಮೂಲಕ ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾನೆ. ಲಕ್ಷಿತ್ ಟಿ. ಗೌಡ ವಿದ್ಯಾರ್ಥಿಯು ಕೆಂಪೇಗೌಡನ ದೊಡ್ಡಿಯಲ್ಲಿರುವ ನೇಟಸ್ ಶಾಲೆಯಲ್ಲಿ ಮೂರನೇ ತರಗತಿಯಲ್ಲಿ ಓದುತ್ತಿದ್ದು. ಶಾಲೆಯ ಮಕ್ಕಳಿಗೆ ಕರಾಟೆ ಕ್ರೀಡೆಯಲ್ಲಿ ಸ್ಫೂರ್ತಿಯಾಗಿದ್ದು ಶಾಲೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಯ ಸಾಧನೆಗೆ ಶಾಲೆಯ ಶಿಕ್ಷಕರು, ಕುಟುಂಬದವರು ಶುಭ ಹಾರೈಸಿದ್ದಾರೆ.

## ರೋಟರಿ ಸಂಸ್ಥೆ ವತಿಯಿಂದ ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯ ತಪಾಸಣೆ

• **ಉದಯವಾಹಿನಿ, ರಾಮನಗರ**

ಹಿರಿಯರ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ ಅವರು ನಮ್ಮ ಆಸ್ತಿ ಇದ್ದಂತೆ ಅವರ ಸೇವೆ ಮಾಡುವ ಯಾವ ಅವಕಾಶವನ್ನು ಇಂದಿನ ಯುವ ಪೀಳಿಗೆ ಕಳೆದುಕೊಳ್ಳಬಾರದು ಎಂದು ಕುಮಾರಸ್ವಾಮಿ ತಿಳಿಸಿದರು. ರೋಟರಿ ರಾಮನಗರ, ರೋಟರಿ ಬೆಂಗಳೂರು ಪ್ರೈಡ್, ರೋಟರಿ ರಾಮಗಢ್ ರಾಕರ್ಸ್, ರೋಟರಿ ಬಿಡದಿ ಸೆಂಟ್ರಲ್, ಶಾಂತಿನಿಕೇತನ ಸಮೂಹ ಶಿಕ್ಷ ಸಂಸ್ಥೆ ಹಾಗೂ ವೈಯಾ ವಿಕಾಸ್ ಎಂಪವರ್‌ಮೆಂಟ್ ಸೀನಿಯರ್ಸ್ ಸಹಯೋಗದಲ್ಲಿ ನಗರದ ಶಾಂತಿನಿಕೇತನ ಶಾಲೆಯ ಆವರಣದಲ್ಲಿ ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ರೋಟರಿ ಸಂಸ್ಥೆಯ ಡಿಜಿಎನ್ ಡಾ. ಆರ್. ಕುಮಾರಸ್ವಾಮಿ ಉದ್ಘಾಟಿಸಿ ಮಾತನಾಡಿ, ಹಿರಿಯ ನಾಗರಿಕರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಅಗತ್ಯವಾಗಿದ್ದು, ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಹಲವು ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ಸೂಕ್ತ ಚಿಕಿತ್ಸೆ ಪಡೆಯಬಹುದು ಎಂದು ತಿಳಿಸಿದರು. ಹಿರಿಯ ನಾಗರಿಕರಿಗೆ ಆರೋಗ್ಯ ತಪಾಸಣೆಯ ಜೊತೆಗೆ ಆರೋಗ್ಯದ ಕುರಿತು ಅಗತ್ಯ ಸಲಹೆ ಮತ್ತು ಮಾರ್ಗದರ್ಶನ ನೀಡಲಾಯಿತು. ಶಿಬಿರದಲ್ಲಿ



ಉದಯವಾಹಿನಿ ಚಿತ್ರ

ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಆರೋಗ್ಯ ತಪಾಸಣೆಯ ಸೌಲಭ್ಯವನ್ನು ಪಡೆದುಕೊಂಡರು. ಹಿರಿಯ ನಾಗರಿಕರ ಆರೋಗ್ಯ ರಕ್ಷಣೆಗೆ ಇಂತಹ ಶಿಬಿರಗಳು ಸಹಕಾರಿಯಾಗಿದ್ದು, ಮುಂದಿನ ದಿನಗಳಲ್ಲಿಯೂ ಸಾರ್ವಜನಿಕ ಹಿತದೃಷ್ಟಿಯಿಂದ ಆರೋಗ್ಯ ಸಂಬಂಧಿತ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದರು. ಶಿಬಿರದಲ್ಲಿ ಹಿರಿಯ ನಾಗರಿಕರು ಭಾಗವಹಿಸಿ ವಿವಿಧ ಆರೋಗ್ಯ ತಪಾಸಣೆಗಳ ಪ್ರಯೋಜನ ಪಡೆದುಕೊಂಡರು. ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ವಹಿಸುವುದು ಹಾಗೂ ಆರೋಗ್ಯ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸುವ ಉದ್ದೇಶದಿಂದ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಕಾರ್ಯದರ್ಶಿ ಎಲ್. ಸಿದ್ಧಪ್ಪಾಜಿ, ವಲಯ ಪಾಲಕರು ಆರ್. ಮಲ್ಲೇಶ್ , ಬಾಲಾಜಿ, ವೈಯಾ ವಿಕಾಸ್ ಎಂಪವರ್ ಮೆಂಟ್ ಸೀನಿಯರ್ಸ್ ಸಿಇಒ ಜಮುನಾ ರವಿ , ರೋಟರಿ ರಾಮಗಡ್ ರಾಕರ್ಸ್ ಅಧ್ಯಕ್ಷ ಎಂ.ಎಚ್. ಪ್ರಕಾಶ್ ರೋಟರಿ ರಾಮನಗರ ಅಧ್ಯಕ್ಷೆ ಗಾಯತ್ರಿದೇವಿ, ರೋಟರಿ ಬೆಂಗಳೂರು ಪ್ರೈಮ್ ಅಧ್ಯಕ್ಷೆ ಇಂದಿರಾ ರಘು, ಬಿಡದಿ ಸೆಂಟ್ರಲ್ ಅಧ್ಯಕ್ಷ ಕೃಷ್ಣ, ಸಹಪಾಲಕರುಗಳಾದ ಗುರುಶಂಕರ್, ಕಾಂತರಾಜು ವಸಂತ್ ಕುಮಾರ್ ಸೇರಿದಂತೆ ರೋಟರಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇದೇ ವೇಳೆ ರಾಮಗಡ್ ರಾಕರ್ಸ್ ಕಾರ್ಯದರ್ಶಿ ನಾಗೇಶ್, ರೋಟರಿಯನ್ ಗಳಾದ ತಿಮ್ಮೇಗೌಡ , ಕೃಷ್ಣ, ಗೌರೀಶ್, ನಾಗೇಶ್, ಲೋಕೇಶ್ , ನಿವೃತ್ತ ಯೋಧ ಶಿವಸ್ವಾಮಿ, ಅನಿತಾಲಕ್ಷ್ಮಿ , ಉಮಾ, ಶಿವರಾಜಮ್ಮ , ಮಂಜುಳ, ಶೋಭಾ ರಾಜು, ಶ್ವೇತ , ದೀಪಕ್, ಪುಟ್ಟಸ್ವಾಮಿಗೌಡ , ಪುಟ್ಟಸ್ವಾಮಯ್ಯ ಡಿ, ಸೇರಿದಂತೆ ವಿವಿಧ ರೋಟರಿ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಶಿಬಿರದ ಯಶಸ್ಸಿಗೆ ಸಹಕರಿಸಿದರು.

# ಬಿಜೆಪಿ ಕಿತ್ತಾಟ; ವಿಜಯೇಂದ್ರ ಎರಡೂ ಬಣಗಳಿಗೆ ಎಚ್ಚರಿಕೆ

### ಭಾರತೀಯ ಜನತಾ ಪಕ್ಷಕ್ಕೆ ಜಯವಾಗಲಿ ಎಂದು ಪ್ರತಿಯೊಬ್ಬ ನಾಯಕ ಹಾಗೂ ಕಾರ್ಯಕರ್ತ ಒಗ್ಗಟ್ಟಿನಿಂದ ಶ್ರಮಿಸಬೇಕು

• **ಉದಯವಾಹಿನಿ, ಬಂಗಾರಪೇಟೆ**

ಸ್ಥಳೀಯ ನಾಯಕರು ಮತ್ತು ಬೆಂಬಲಿಗರು ಪ್ರತ್ಯೇಕ ಬಣ ಮಾಡಿಕೊಂಡು ಕಿತ್ತಾಡಿಕೊಂಡಿದ್ದರೆ ಬಂಗಾರಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಎಂದಿಗೂ ಗೆಲ್ಲಲು ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಎರಡೂ ಬಣಗಳ ಮುಖಂಡರಿಗೆ ಬಹಿರಂಗವಾಗಿಯೇ ಎಚ್ಚರಿಕೆ ನೀಡಿದರು. ನಗರದ ಆರ್. ಆರ್.ಕನ್ವೆನ್ಷನ್ ಸಭಾಂಗಣದಲ್ಲಿ'ಸೇವಾ ಸಂಕಲ್ಪ ಅಭಿಯಾನ'ದಡಿ ಹಮ್ಮಿಕೊಂಡಿದ್ದ 'ಬೂತ್ ವಿಜಯ ಸಂಕಲ್ಪ' ಯಾತ್ರೆಯ ಕಾರ್ಯಕರ್ತರ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

**1** ಬೂತ್ ವಿಜಯ ಸಂಕಲ್ಪ ಯಾತ್ರೆಯ
**2** ಒಗ್ಗಟ್ಟಿನಿಂದ ಪಕ್ಷವನ್ನು ಗೆಲ್ಲಿಸಲು ಶ್ರಮಿಸಬೇಕು
**3** ಕಾರ್ಯಕರ್ತರು ಸಣ್ಣಪುಟ್ಟ ಭಿನ್ನಾಭಿಪ್ರಾಯ

ನಗರಕ್ಕೆ ಬರುವ ಮಾರ್ಗ ಮಧ್ಯೆ ಒಂದೇ ವಿದ್ಯುತ್ ಕಂಬದಲ್ಲಿ ಮೇಲೊಂದು, ಕೆಳಗೊಂದು ಪ್ರತ್ಯೇಕವಾಗಿ ಸ್ವಾಗತ ಕೋರುವ ಫ್ಲೆಕ್ಸ್ ಹಾಗೂ ಬ್ಯಾನರ್ ಗಮನಿಸಿದೆ. ನಾಯಕರು ಹಾಗೂ ಬೆಂಬಲಿಗರು ಹೀಗೆ ಗೊಂದಲ ಮೂಡಿಸಿಕೊಂಡು ಪ್ರತ್ಯೇಕವಾಗಿ ಕಿತ್ತಾಡಿಕೊಳ್ಳುವುದು ಸಂಘಟನೆಗೆ ಶೋಭೆಯಲ್ಲ. ಕೇವಲ ಬ್ಯಾನರ್, ಫ್ಲೆಕ್ಸ್ ಹಾಕಿ ಶೀಟಿ



ಉದಯವಾಹಿನಿ ಚಿತ್ರ

ಹೊಡೆಯುವುದರಿಂದ ಅಥವಾ ಬೃಹತ್ ಹಾರಗಳನ್ನು ಹಾಕಿ ಮೆರವಣಿಗೆ ಮಾಡುವುದರಿಂದ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ. ನಮಗೆ ವ್ಯಕ್ತಿಗಿಂತ ಪಕ್ಷದ ಸಿದ್ಧಾಂತ ಮುಖ್ಯ. ಈ ವ್ಯಕ್ತಿಗೆ ಜಯವಾಗಲಿ ಎನ್ನುವುದನ್ನು ಬಿಟ್ಟು ಭಾರತೀಯ ಜನತಾ ಪಕ್ಷಕ್ಕೆ ಜಯವಾಗಲಿ ಎಂದು ಪ್ರತಿಯೊಬ್ಬ ನಾಯಕ ಹಾಗೂ ಕಾರ್ಯಕರ್ತ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಕಿವಿಮಾತು ಹೇಳಿದರು.

ಬಂಗಾರಪೇಟೆಯಲ್ಲೇ ಯಾವ ರೀತಿ ಇವತ್ತು ರಿಯಲ್ ಎಸ್ಟೇಟ್ ದಂಧೆ ನಡೆಯುತ್ತಾ ಇದೆ. ಬೆದರಿಸಿ ಬಡವರ ಜಮೀನನ್ನು ಯಾವ ರೀತಿ ಕಾಂಗ್ರೆಸ್ ಮುಖಂಡರು ಹೊಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು. ವಿಧಾನಸಭಾ ಚುನಾವಣೆ ಮುಗಿದ ಮೇಲೆ ಇಲ್ಲಿಗೆ ಬಂದು ವಿಜಯಯಾತ್ರೆ ಮಾಡುವಂತೆ ಆಗಬೇಕು. ಬೂತ್ ಮಟ್ಟದಲ್ಲಿ ಪ್ರತಿ ಗ್ರಾಮದ ಎಲ್ಲಾ ಸಮುದಾಯಗಳ ಮನೆ ಬಾಗಿಲಿಗೆ ತೆರಳಿ ಕೇಂದ್ರ ಸರ್ಕಾರದ ಸಾಧನೆಗಳನ್ನು ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರವನ್ನು ತಿಳಿಸಬೇಕು. ಕಾರ್ಯಕರ್ತರು ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಗ್ಗಟ್ಟಿನಿಂದ ಪಕ್ಷವನ್ನು ಗೆಲ್ಲಿಸಲು ಶ್ರಮಿಸಬೇಕು ಎಂದು ಸೂಚನೆ ನೀಡಿದರು.

ಮಾಜಿ ಸಂಸದ ಎಸ್ ಮುನಿಸ್ವಾಮಿ ಮಾತನಾಡಿ, 'ತಾಲ್ಲೂಕಿನಲ್ಲಿ ಕಾಂಗ್ರೆಸ್ ಶಾಸಕರು ಬಡವರ ಹಾಗೂ ಸರ್ಕಾರಿ ಜಮೀನುಗಳನ್ನು ಕಬಳಿಸಿ ಸುಮಾರು 500 ಎಕರೆಗೂ ಹೆಚ್ಚು ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಕೋಲಾರಮ್ಮ ಕೆರೆಯ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಿದ ಮಾದರಿಯಲ್ಲೇ, ಮುಂಬರುವ ದಿನಗಳಲ್ಲಿ ಶಾಸಕರ ಈ ಅಕ್ರಮ ಭೂ ಒತ್ತುವರಿಯನ್ನು ತೆರವುಗೊಳಿಸಲು ಕನಿಷ್ಠ 40 ಜೆಸಿಬಿಗಳ ಅಗತ್ಯವಿದೆ. ಶಾಸಕರ ಭ್ರಷ್ಟಾಚಾರ ಮತ್ತು ಭೂಕಬಳಿಕೆ ವಿರುದ್ಧ ಕ್ಷೇತ್ರದ ಜನತೆ ತೀವ್ರ ಆಕ್ರೋಶಗೊಂಡಿದ್ದು, ಮುಂಬರುವ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ' ಎಂದರು. ಎಸ್.ಎನ್.ನಾರಾಯಣಸ್ವಾಮಿ ಅವರನ್ನು ಮುಂಬರುವ ಚುನಾವಣೆಯಲ್ಲಿ ಸೋಲಿಸಿ ಶಾಶ್ವತವಾಗಿ ಮನೆಗೆ ಕಳುಹಿಸಲು ಕ್ಷೇತ್ರದ ಕಾರ್ಯಕರ್ತರು ಸಿದ್ಧರಾಗಿದ್ದಾರೆ ಎಂದು ಹೇಳಿದರು.

**ಬಂಗಾರಪೇಟೆ ವಿಧಾನಸಭಾ ಕ್ಷೇತ್ರವನ್ನು ಯಾವುದೇ ಕಾರಣಕ್ಕೂ ಜೆಡಿಎಸ್‌ಗೆ ಬಿಟ್ಟುಕೊಡಬಾರದು. ಬಿಜೆಪಿಯೇ ಉಳಿಸಿಕೊಳ್ಳಬೇಕು. ಬಿಜೆಪಿ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎಂದು ಬಿ.ವಿ.ಮಹೇಶ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಅವರನ್ನು ಒತ್ತಾಯಿಸಿದರು. ಮುನಿಸ್ವಾಮಿ, ಮಹೇಶ್ '**

### ಬೆಂಬಲಿಗರು ಶಕ್ತಿ ಪ್ರದರ್ಶನ

**ವಿಜಯೇಂದ್ರ ಸಮ್ಮುಖದಲ್ಲಿ ಎಸ್.ಮುನಿಸ್ವಾಮಿ ಬಿ.ವಿ.ಮಹೇಶ್ ಬೆಂಬಲಿಗರು ಶಕ್ತಿ ಪ್ರದರ್ಶಿಸಿದರು. ಇಬ್ಬರ ಬೆಂಬಲಿಗರು ಪ್ರತ್ಯೇಕವಾಗಿ ನಾಯಕರ ಪರವಾಗಿ ಘೋಷಣೆ ಕೂಗಿದರು. ಅವರ ಹೆಸರು ಹೇಳಿದಾಗಲೆಲ್ಲಾ ಶೀಟಿ ಹೊಡೆದರು.**

## ಮಿನಿ ನ್ಯೂಸ್

### ಮೈತ್ರಿಯಲ್ಲಿ ಸಮನ್ವಯ ಇರಲಿ: ನಿಖಿಲ್ ಕುಮಾರಸ್ವಾಮಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ದೊಡ್ಡಬಳ್ಳಾಪುರ**

ಬೆಂಗಳೂರು ಶಿಕ್ಷಕರ ಕ್ಷೇತ್ರದ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಎ.ಪಿ.ರಂಗನಾಥ್ ಅವರ ಗೆಲುವಿಗೆ ಕಾರ್ಯಕರ್ತರು ಒಗ್ಗಟ್ಟಾಗಿ ಶ್ರಮಿಸಬೇಕು ಎಂದು ಜೆಡಿಎಸ್ ರಾಜ್ಯ ಯುವ ಘಟಕ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು. ನಗರದಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ಮಾತನಾಡಿ, ತಾಲ್ಲೂಕಿನಲ್ಲಿ ಬಿಜೆಪಿ ಶಾಸಕರಿದ್ದು, ಅವರೊಂದಿಗೆ ಜೆಡಿಎಸ್ ಉತ್ತಮ ಬಾಂಧವ್ಯ ಹೊಂದಿದೆ. ಮೈತ್ರಿ ಅಭ್ಯರ್ಥಿ ಪರವಾಗಿ ಎರಡೂ ಪಕ್ಷಗಳ ಕಾರ್ಯಕರ್ತರು ಸಮನ್ವಯದಿಂದ ಕೆಲಸ ಮಾಡಬೇಕು' ಎಂದರು. ಶಿಕ್ಷಕರ ಸಮಸ್ಯೆ ಅರಿವು ಇರುವ ಎ.ಪಿ.ರಂಗನಾಥ್ ಅವರು ಶಿಕ್ಷಕರ ಅನುಕೂಲಕ್ಕಾಗಿ ಹಲವು ಯೋಜನೆ ರೂಪಿಸುವ ಉದ್ದೇಶ ಹೊಂದಿದ್ದಾರೆ. ಗ್ರಾಮಾಂತರ ಜಿಲ್ಲೆಯ ಶಿಕ್ಷಕರು ಪ್ರಜ್ಞಾವಂತರಾಗಿದ್ದು, ಯಾವುದೇ ಆಮಿಷಗಳಿಗೆ ಒಳಗಾಗದೆ ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳಲಿದ್ದಾರೆ ಎಂದು ಹೇಳಿದರು.

ಶಾಸಕ ಧೀರಜ್ ಮುನಿರಾಜು, ತಾಲ್ಲೂಕಿನಲ್ಲಿ ಮೈತ್ರಿ ಧರ್ಮವನ್ನು ಪಾಲಿಸಲಾಗುವುದು. ವಿಧಾನ ಪರಿಷತ್ತಿನಲ್ಲಿ ಶಿಕ್ಷಕರ ಧ್ವನಿಯಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು' ಎಂದು ಮನವಿ ಮಾಡಿದರು.ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಎಸ್.ಎಂ.ಹರೀಶ್ ಗೌಡ, 'ಎರಡು ಚುನಾವಣೆಗಳನ್ನು ಎದುರಿಸಿರುವ ರಂಗನಾಥ್ ಅವರಿಗೆ ಶಿಕ್ಷಕರ ಬೇಡಿಕೆ ಹಾಗೂ ಸಮಸ್ಯೆಗಳ ಅರಿವಿದೆ. ಶಿಕ್ಷಕರ ಹಿತಾಸಕ್ತಿಗಾಗಿ ಅವರನ್ನು ಪ್ರತಿನಿಧಿಯಾಗಿ ಆಯ್ಕೆ ಮಾಡಬೇಕು' ಎಂದರು.

### ತಿಪಟೂರು ಹೋಬಳಿಗೊಂದು ಮೇವು ಬ್ಯಾಂಕ್‌ಗೆ ಆಗ್ರಹಿಸಿ

• **ಉದಯವಾಹಿನಿ, ತಿಪಟೂರು**

ಹೋಬಳಿಗೊಂದು ಮೇವು ಬ್ಯಾಂಕ್ ತೆರೆಯಬೇಕು, ಪ್ರತಿ ಎಕರೆಗೆ 25 ಸಾವಿರ ಬರ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ಹಳ್ಳಿಕಾರ್ ರೈತ ಸಂಘ, ರಾಜ್ಯ ರೈತ ಸಂಘ, ರೈತ ಶಕ್ತಿ ಸೇರಿದಂತೆ ವಿವಿಧ ಸಂಘಟನೆಗಳಿಂದ ಗುರುವಾರ ಜಿಲ್ಲಾಧಿಕಾರಿ ಕಚೇರಿವರೆಗೆ ಎತ್ತಿನಗಾಡಿ ಹಾಗೂ ಟ್ರ್ಯಾಕ್ಟರ್ ಜಾಥಾ ನಡೆಯಿತು. 12ಕ್ಕೂ ಹೆಚ್ಚು ಎತ್ತಿನ ಬಂಡಿ, ಟ್ರ್ಯಾಕ್ಟರ್, ಐವತ್ತಕ್ಕೂ ಹೆಚ್ಚು ಜಾನುವಾರುಗಳೊಂದಿಗೆ ನಗರದ ಶಿವಕುಮಾರ ಸ್ವಾಮೀಜಿ ವೃತ್ತದಿಂದ ಜಾಥಾಕ್ಕೆ ಚಾಲನೆ ನೀಡಲಾಯಿತು. ಬಿ.ಎಚ್. ರಸ್ತೆಯ ಮೂಲಕ ಜಾಥಾ ನಡೆಸಿ ಬಳಿಕ ಸಿಂಗ್ರಿ ನಂಜಪ್ಪ ವೃತ್ತದ ಬಳಿ ಪ್ರತಿಭಟನೆ ನಡೆಸಲಾಯಿತು. ಜಿಲ್ಲಾಧಿಕಾರಿ ಕಚೇರಿಯತ್ತ ಜಾಥಾ ಮುಂದುವರಿಯಿತು.

ಹಳ್ಳಿಕಾರ್ ರೈತ ಸಂಘದ ವಿನಯ್ ಮಡೆನೂರು ಮಾತನಾಡಿ, ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಿರುವುದರಿಂದ ಜಾನುವಾರುಗಳಿಗೆ ಮೇವಿನ ಸಮಸ್ಯೆ ಎದುರಾಗಿದೆ. ಜಾನುವಾರುಗಳಿಗೆ ಮೇವು ನೀಡಲು ರೈತರಿಂದ ಸಾಧ್ಯವಾಗುತ್ತಿಲ್ಲ. ಹಣ ನೀಡಿದರೂ ಮೇವು ದೊರೆಯುತ್ತಿಲ್ಲ. ಪ್ರತಿ ಹೋಬಳಿಗೊಂದು ಮೇವು ವಿತರಣಾ ಕೇಂದ್ರ ಸ್ಥಾಪಿಸಿ, ಅಗತ್ಯ ಪ್ರಮಾಣದಲ್ಲಿ ಮೇವು ವಿತರಿಸಬೇಕು' ಎಂದು ಆಗ್ರಹಿಸಿದರು.

ಹಸಿರುಸೇನೆ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಬಸ್ತಿಹಳ್ಳಿ ರಾಜಣ್ಣ ಮಾತನಾಡಿ, ಬರಗಾಲದಿಂದ ರೈತರು ಈಗಾಗಲೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಬೆಳೆ ಕೈಕೊಟ್ಟಿರುವ ಸಂದರ್ಭದಲ್ಲಿ ಕೃಷಿಗಾಗಿ ಮಾಡಿರುವ ಸಾಲ, ಕೂಲಿ ವೆಚ್ಚ, ಬೀಜ, ಗೊಬ್ಬರ ಹಾಗೂ ಇತರೆ ಖರ್ಚುಗಳನ್ನು ಭರಿಸುವುದು ಕಷ್ಟವಾಗಿದೆ. ರಾಗಿ ಸೇರಿದಂತೆ ರೈತರ ಉತ್ಪನ್ನಗಳಿಗೆ ಸಂಬಂಧಿಸಿದ ಬಾಕಿ ಹಣವನ್ನು ವಿಳಂಬವಿಲ್ಲದೆ ಬಿಡುಗಡೆ ಮಾಡಿ ಎಂದು ಒತ್ತಾಯಿಸಿದರು.

### ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ

• **ಉದಯವಾಹಿನಿ, ಬಾಗೇಪಲ್ಲಿ**

ಮತದಾರರ ಪಟ್ಟಿ ರದ್ದು ಮಾಡಬೇಕು. ಹೊರಗುಳಿದ ಮತದಾರರ ಹಕ್ಕು ಮರಳಿ ಸಿಗಬೇಕು. ಚುನಾವಣಾ ಆಯೋಗದ ಮೇಲಿನ ನಂಬಿಕೆ ಮರಳಿ ಬರಬೇಕು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ರಾಜೀನಾಮೆ ಕೊಡಬೇಕು ಎಂದು ಸಿಪಿಐ(ಎಂ) ಪ್ರತಿಭಟನೆ ನಡೆಸಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯ ಎಂ.ಪಿ.ಮುನಿವೆಂಕಟಪ್ಪ, 'ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದ ಮೇಲೆ ಅಲ್ಪಸಂಖ್ಯಾತರು, ದಲಿತರು, ಹಿಂದುಳಿದವರ ಹಕ್ಕು ಕಸಿಯಲಾಗುತ್ತಿದೆ.

ಎನ್‌ಆರ್‌ಸಿ, ಯುಸಿಸಿ ಜಾರಿ ಮಾಡಿ ಜನರ ಹಕ್ಕು ಕಸಿದಿದೆ. ಈಗ ವಿಶೇಷ ಮತದಾರರ ಪರಿಷ್ಕರಣೆ (ಎಸ್‌ಐಆರ್) ಜಾರಿ ಮಾಡಿದೆ. ಮುಖ್ಯ ಚುನಾವಣಾ ಆಯುಕ್ತರು ಬಿಜೆಪಿ, ಆರ್‌ಎಸ್‌ಎಸ್ ಬಯಕೆಯಂತೆ ಕೆಲಸ ಮಾಡಿದ್ದಾರೆ. ಸಲಹೆ ಪಡೆಯದೆ ಎಸ್‌ಐಆರ್ ಜಾರಿ ಮಾಡಿದ್ದಾರೆ ಎಂದು ಇಬ್ಬರು ಆಯುಕ್ತರು ಹೇಳಿದ್ದಾರೆ. ಎಸ್‌ಐಆರ್‌ನಿಂದ ರಾಜ್ಯದಲ್ಲಿ 1 ಕೋಟಿ 20 ಲಕ್ಷ ಮತದಾರರು ಹಕ್ಕು ಕಳೆದುಕೊಳ್ಳುವ ಭಯ ಇದೆ. ಬಾಗೇಪಲ್ಲಿ ಕ್ಷೇತ್ರದಲ್ಲಿ 20 ಸಾವಿರಕ್ಕೂ ಹೆಚ್ಚು ಮತದಾರರು ಹಕ್ಕು ಕಳೆದುಕೊಳ್ಳುವ ಭಯ ಇದೆ ಎಂದರು.

ಎಸ್‌ಐಆರ್ ಲೋಪಗಳ ಪಟ್ಟಿ ಚುನಾವಣಾ ಆಯೋಗಕ್ಕೆ ಕೊಟ್ಟಿದ್ದೇವೆ. ಉತ್ತರ ಇಲ್ಲ, ಬಿಜೆಪಿಗೆ ಮತ ಹಾಕದ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಅರ್ಜಿ ಕೊಟ್ಟು ಗುರುತು ಮಾಡಿದ್ದಾರೆ. ಕೆಲ ಬಿಎಲ್‌ಒ ಮತ್ತು ಅಧಿಕಾರಿಗಳು ಬಿಜೆಪಿ ಹೇಳಿದಂತೆ ಕೆಲಸ ಮಾಡಿದ್ದಾರೆ. ಮತದಾನ ಸಂವಿಧಾನದ ಹಕ್ಕು. ಅದನ್ನು ಕಸಿಯುತ್ತಿದ್ದಾರೆ. ಹೊರಗುಳಿದ ಮತದಾರರನ್ನು ಸೇರಿಸಿ ಮುಂದೆ ದೊಡ್ಡ ಹೋರಾಟ ಮಾಡುತ್ತೇವೆ' ಎಂದು ಎಚ್ಚರಿಕೆ ಕೊಟ್ಟರು.

## ಮೊದಲ ಬಾರಿಗೆ ಕಲ್ಯಾಣ ಕರ್ನಾಟಕದ ಸ್ವಾಮೀಜಿಯಿಂದ ದಸರಾ ಉದ್ಘಾಟನೆ

• **ಉದಯವಾಹಿನಿ, ಮೈಸೂರು**

ಕಲ್ಯಾಣ ಕರ್ನಾಟಕ ಭಾಗದ ಸ್ವಾಮೀಜಿಯೊಬ್ಬರು ನಾಡಹಬ್ಬ ಮೈಸೂರು ದಸರಾ ಉದ್ಘಾಟಿಸುತ್ತಿರುವುದು ಇದೇ ಮೊದಲು. ಅ.11ರಿಂದ 21ರವರೆಗೆ ನಡೆಯಲಿರುವ ದಸರಾ ಉದ್ಘಾಟನೆಗೆ ಆಯ್ಕೆಯಾಗಿರುವ ಕೊಪ್ಪಳದ ಗವಿಮಠ ಸ್ವಾಮೀಜಿ ಈ ಗೌರವ ದೊರೆತ ಏಳನೇ ಸ್ವಾಮೀಜಿ ಎನಿಸಿದ್ದಾರೆ.

2007ರಲ್ಲಿ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮೀಜಿ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸುವ ಮೂಲಕ ಮಠಾಧೀಶರನ್ನು ಆಯ್ಕೆ ಮಾಡುವ ಪರಿಪಾಠ ಆರಂಭವಾಯಿತು. 2008, 2009, 2010, 2011, 2012ರಲ್ಲಿ ಕ್ರಮವಾಗಿ ತುಮಕೂರು ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿ, ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ಗುರೂಜಿ, ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಉಡುಪಿ ಪೇಜಾವರ ಮಠದ ವಿಶ್ವೇಶ್ವರತೀರ್ಥ ಸ್ವಾಮೀಜಿ ಹಾಗೂ ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಅವರನ್ನು ಆಹ್ವಾನಿಸಲಾಗಿತ್ತು. 2012ರ ನಂತರ ಮಠಾಧೀಶರೊಬ್ಬರಿಗೆ ಮತ್ತೇ ಈ ಗೌರವ ದೊರೆತಿದೆ.

ಸಿದ್ದರಾಮಯ್ಯ ಅವರು 2ನೇ ಬಾರಿಗೆ ಮುಖ್ಯಮಂತ್ರಿಯಾದ ನಂತರ 2023ರಲ್ಲಿ ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕ ಹಂಸಲೇಖ, 2024ರಲ್ಲಿ ಸಾಹಿತಿ ಹಂ.ಪ. ನಾಗರಾಜಯ್ಯ ಮತ್ತು 2025ರಲ್ಲಿ ಸಾಹಿತಿ ಭಾನು ಮುಸ್ತಾಕ್ ಅವರನ್ನು ಆಯ್ಕೆ ಮಾಡಿದ್ದರು. ಡಿ.ಕೆ.ಶಿವಕುಮಾರ್ ತಮ್ಮ ನೇತೃತ್ವದಲ್ಲಿ ನಡೆಯುತ್ತಿರುವ ಮೊದಲ ನಾಡಹಬ್ಬದ ಉದ್ಘಾಟನೆಗೆ ಕೊಪ್ಪಳದ ಗವಿಮಠದ ಯುವ ಮಠಾಧೀಶರನ್ನು ಆಯ್ಕೆ ಮಾಡಿದ್ದಾರೆ.

ಅಂತರಾಳದಿಂದ.. EDITORIAL

# ಆನ್‌ಲೈನ್‌ನಲ್ಲಿ ಪ್ರವೇಶ ಪರೀಕ್ಷೆ ಪೂರ್ವ ತಯಾರಿ ಅಗತ್ಯ



ದೇಶಾದ್ಯಂತ ಭಾರೀ ವಿವಾದಕ್ಕೆ ಕಾರಣವಾಗಿ ವಿದ್ಯಾರ್ಥಿ-ಯುವಸಮುದಾಯದ ಆಕ್ರೋಶಕ್ಕೆ ಗುರಿಯಾಗಿ ಕೇಂದ್ರ ಶಿಕ್ಷಣ ಸಚಿವರ ತಲೆದಂಡಕ್ಕೆ ಕಾರಣವಾಗಿದ್ದ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಬಳಿಕ ಕೇಂದ್ರ ಸರಕಾರ ಪ್ರವೇಶಕ್ಕಾಗಿ ದೇಶಾದ್ಯಂತ ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕಂಪ್ಯೂಟರ್ ಆಧರಿತವಾಗಿ ನಡೆಸಲು ಗಂಭೀರ ಚಿಂತನೆ ನಡೆಸಿದೆ. ಈ ಬಗ್ಗೆ ವ್ಯವಸ್ಥಿತ ಕಾರ್ಯತಂತ್ರವನ್ನು ರೂಪಿಸಿ ಪೆನ್-ಪೇಪರ್ ಬಳಸಿ ನಡೆಸಲಾಗುವ ಪರೀಕ್ಷಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸಿ ಆನ್‌ಲೈನ್ ಪರೀಕ್ಷಾ ವ್ಯವಸ್ಥೆ ಜಾರಿಗೆ ತರಲು ಕೇಂದ್ರ ಶಿಕ್ಷಣ ಇಲಾಖೆ ಸಿದ್ಧತೆಗಳನ್ನು ಆರಂಭಿಸಿದೆ. ದೇಶಾದ್ಯಂತ ಪ್ರವೇಶ ಪರೀಕ್ಷೆಗಳನ್ನು ನ್ಯಾಯಸಮ್ಮತವಾಗಿ ಮತ್ತು ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ಈ ಮಹತ್ತರ ಬದಲಾವಣೆಯ ಕಾರ್ಯಕ್ಕೆ ಕೇಂದ್ರ ಸರಕಾರ ಮುಂದಡಿ ಇರಿಸಿದೆ. ಸಾಧ್ಯವಾದಷ್ಟು ಬೇಗನೆ ಈ ಹೊಸ ವ್ಯವಸ್ಥೆಯಡಿ ಪರೀಕ್ಷೆಗಳನ್ನು ನಡೆಸಲು ಅನುಕೂಲವಾಗುವಂತೆ ಶಿಕ್ಷಣ ಇಲಾಖೆ ಕಾರ್ಯತಂತ್ರ ರೂಪಣೆ, ಅಗತ್ಯ ಮೂಲಸೌಕರ್ಯಗಳ ಜೋಡಣೆಯತ್ತ ತನ್ನ ಲಕ್ಷ್ಯ ಹರಿಸಿದೆ. ಸದ್ಯ ವಿವಿಧ ಸಂಸ್ಥೆಗಳು ಮತ್ತು ಇಲಾಖೆಗಳು ನಡೆಸುತ್ತಿರುವ ಕಂಪ್ಯೂಟರ್‌ಆಧರಿತ ನೇಮಕಾತಿ ಪರೀಕ್ಷೆಗಳಲ್ಲಿ ಸಹಸ್ರಾರು ಸಂಖ್ಯೆಯ ಅಭ್ಯರ್ಥಿಗಳಿಗೆ ಸೀಮಿತವಾಗಿದ್ದರೆ ನೀಟ್ ಸಹಿತ ಇನ್ನಿತರ ಶೈಕ್ಷಣಿಕ ಕೋರ್ಸ್‌ಗಳ ಪ್ರವೇಶಾತಿ ಪರೀಕ್ಷೆಗಳಿಗೆ ಲಕ್ಷಾಂತರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಜರಾಗುತ್ತಾರೆ. ಇಷ್ಟೊಂದು ದೊಡ್ಡ ಸಂಖ್ಯೆಯ ಪರೀಕ್ಷಾರ್ಥಿಗಳಿಗೆ ಅಗತ್ಯ ಮೂಲಸೌಕರ್ಯ, ಸಮಗ್ರ ವ್ಯವಸ್ಥೆಯ ನಿರ್ವಹಣೆ, ಪರೀಕ್ಷೆ ವೇಳೆ ಯಾವುದೇ ನೆಟ್ವರ್ಕ್, ಸರ್ವರ್ ಸಮಸ್ಯೆಗಳ ಸಹಿತ ತಾಂತ್ರಿಕ ಅಡಚಣೆ, ಗೌಪ್ಯ ಮಾಹಿತಿ ಸೋರಿಕೆ, ಸೈಬರ್ ಹ್ಯಾಕಿಂಗ್‌ನಂತಹ ಗಂಭೀರ ಸವಾಲುಗಳು ಎದುರಾಗುವ ಸಾಧ್ಯತೆಗಳಿವೆ. ಸದ್ಯ ಆನ್‌ಲೈನ್ ಮೂಲಕ ಫಲಿತಾಂಶ ಪ್ರಕಟಿಸಿದ ಸಂದರ್ಭದಲ್ಲೂ ಸರ್ವ?ರಸಮಸ್ಯೆಯಿಂದಾಗಿ ವಿದ್ಯಾರ್ಥಿಗಳು ಅಥವಾ ಅಭ್ಯರ್ಥಿಗಳು ತಾಸುಗಟ್ಟಲೆ ಪರದಾಡುವ ಸಾಕಷ್ಟು ನಿದರ್ಶನಗಳು ದೇಶದಲ್ಲಿರುವಾಗ ರಾಷ್ಟ್ರಮಟ್ಟದಲ್ಲಿ ನಡೆಸಲಾಗುವ ಪ್ರವೇಶ ಪರೀಕ್ಷೆಗಳನ್ನು ಆನ್ ಲೈನ್‌ನಲ್ಲಿ ನಡೆಸಿದರೆ ಪರಿಸ್ಥಿತಿ ಹೇಗಿರಬಹುದು ಎಂದು ಊಹಿಸಿದರೆ ಯಾರಿಗಾದರೂ ಆತಂಕವಾಗದೇ ಇರಲಾರದು. ಹೀಗಾಗಿ ಹೊಸ ವ್ಯವಸ್ಥೆಗೆ ಹೊರಳಿಕೊಳ್ಳುವುದಕ್ಕೂ ಮುನ್ನ ಸಾಕಷ್ಟು ಪೂರ್ವ ತಯಾರಿ, ಪ್ರಾಯೋಗಿಕ ನೆಲೆಯಲ್ಲಿ ರಾಷ್ಟ್ರಮಟ್ಟದಲ್ಲಿ ಪರೀಕ್ಷೆಗಳನ್ನು ನಡೆಸಿ ಈ ಸಮಸ್ಯೆ, ಸವಾಲುಗಳನ್ನು ಎದುರಿಸಲು ಹೊಸ ವ್ಯವಸ್ಥೆ ಸನ್ನದ್ಧವಾಗಿದೆ ಎಂಬುದನ್ನು ಖಾತರಿಪಡಿಸಿಕೊಂಡ ಬಳಿಕವಷ್ಟೇ ಇದನ್ನು ಅಧಿಕೃತವಾಗಿ ಕಾರ್ಯರೂಪಕ್ಕೆ ತರುವ ಅಗತ್ಯವಿದೆ. ಪರೀಕ್ಷಾ ವ್ಯವಸ್ಥೆಯ ಸುಧಾರಣೆಗಾಗಿ ರಚಿಸಲಾಗಿರುವ ಉನ್ನತಮಟ್ಟದ ತಜ್ಞರ ಸಮಿತಿ ನೀಡುವ ವರದಿಯ ಶಿಫಾರಸುಗಳ ಕಾರ್ಯಸಾಧ್ಯತೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಆನ್‌ಲೈನ್ ಆಧರಿತ ಪರೀಕ್ಷಾ ವ್ಯವಸ್ಥೆಯಂತಹ ಸವಾಲಿನ ಸುಧಾರಣ ಕ್ರಮಗಳನ್ನು ಜಾರಿಗೊಳಿಸಿದಾಗಲಷ್ಟೇ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ವಿಶ್ವಾಸಾರ್ಹತೆ ಮೂಡಲು ಸಾಧ್ಯ.

**ದೇಶದಲ್ಲಿ ಈಗಾಗಲೇ ಹಲವು ನೇಮಕಾತಿ ಸಂಸ್ಥೆಗಳು ಮತ್ತು ಇಲಾಖೆಗಳು ಆನ್ ಲೈನ್‌ನಲ್ಲಿ ಪರೀಕ್ಷೆಗಳನ್ನು ಅತ್ಯಂತ ಅಚ್ಚುಕಟ್ಟಾಗಿ ನಡೆಸುತ್ತಿವೆ. ಇದೇ ಮಾದರಿಯನ್ನು ಅನುಸರಿಸಲು ಮುಂದಾಗಿರುವ ಕೇಂದ್ರ ಸರಕಾರ ಪ್ರವೇಶ ಪರೀಕ್ಷೆಗಳಲ್ಲಿ ಕಂಪ್ಯೂಟರ್ ಆಧರಿತ ಪರೀಕ್ಷಾ ವ್ಯವಸ್ಥೆಯ ಜಾರಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಹಗರಣದ ಬಳಿಕ ದೇಶದ ಪರೀಕ್ಷಾ ವ್ಯವಸ್ಥೆಯ ಸಮಗ್ರ ಪರಿಶೀಲನೆಗಾಗಿ ನೇಮಿಸಲಾಗಿರುವ ಉನ್ನತ ಮಟ್ಟದ ಸಮಿತಿ ನೀಡುವ ವರದಿಯ ಶಿಫಾರಸುಗಳನ್ನು ಆಧರಿಸಿ ಆನ್ ಲೈನ್ ಮಾದರಿ ಪರೀಕ್ಷಾ ವ್ಯವಸ್ಥೆಗೆ ಪೂರ್ಣ ರೂಪ ನೀಡಲು ಶಿಕ್ಷಣ ಇಲಾಖೆ ತೀರ್ಮಾನಿಸಿದೆ.**



# ರಾಮಾಯಣ

16. ಅಂಗದನ ರಾಯಭಾರ

• ಹಿಂದಿನ ಸಂಚಿಕೆಯಿಂದ

## 121ನೆಯ ಅಧ್ಯಾಯ

ನಿನ್ನ ಒಬ್ಬ ತಮ್ಮನು ಬಂದು ಶರಣಾಗಲು ಅವನನ್ನು ರಾಜೀವಲೋಚನನು ಮನ್ನಿಸಲು ಅವನು ಕಿಂಕರನಾಗಿದ್ದಾನೆ. ನನ್ನನ್ನು ನೃಪಾಲರತ್ನನಾದ ರಾಮನ ಕಿಂಕರನೆಂದು ಭಾವಿಸಿ ಆಡುವ ಮಾತುಗಳನ್ನು ಕೇಳೋ, ದಾನವ. ಹೀಗೆಂದ ಅಂಗದನ ಮಾತುಗಳನ್ನು ಕೇಳಿ ಹರುಷವನ್ನು ತಾಳಿದ ದಶಾಸ್ಯನು ಮಂತ್ರಿಯೊಡನೆ, ಇವನು ನನ್ನ ಅಣ್ಣನ ಮಗ. ಇವನು ಮನುಜನಿಗೆ ಚರನಾಗಿ ನನ್ನ ಬಳಿ ಬಂದಿದ್ದಾನೆ. ಮೂರು ಲೋಕಗಳಲ್ಲಿಯೂ ಪರಾಕ್ರಮಕ್ಕೆ ಹೆಸರಾದ ಕಪಿವರನ ಮಗನು ಮಾನವನೊಬ್ಬನಿಗೆ ಡಿಂಗರಿಗನಾಗಿ ಬಂದು, ನೀಚನಾದ ಸುಗ್ರೀವನಿಂದಾಗಿ ಅಪಕೀರ್ತಿಗೊಳಗಾಗಿ ಪ್ಲವಗಚಾಪಲ್ಯವನ್ನು ಬಿಡದೆ ತನ್ನ ತನುವನ್ನು ಪೊರೆದುಕೊಳ್ಳುವ ತರುಣನನ್ನು ನೋಡುವುದು ಯಾರಿಗೆ ತಾನೇ ಸಮಾಧಾನ'' ಎಂದು ಸಮಾಧಾನಪಡಿಸುತ್ತ ನಯವಾದ ನುಡಿಗಳಿಂದ, ''ಮಗನೇ, ನನ್ನ ಪರಾಕ್ರಮದಿಂದ ಸಂಪಾದಿಸಿದ ಈ ಸಂಪತ್ತು ನಿನ್ನದೇ. ಸಂಗ್ರಾಮದಲ್ಲಿ ಕ್ಷುದ್ರ ಮಾನವರಿಬ್ಬರನ್ನೂ, ನಿನ್ನ ತಂದೆಯನ್ನು ಕೊಲ್ಲಿಸಿದ ಕುಲಗೆಡುಕನಾದ ಸುಗ್ರೀವನನ್ನೂ ತರಿದು ಹಾಕಿ ರಣಹದ್ದುಗಳಿಗೆ ಉಣಬಡಿಸುತ್ತೇನೆ. ಆ ಬಳಿಕ ನನ್ನ ವೈರವನ್ನು ಬಿಟ್ಟು ನಿನಗೆ ಕಪಿರಾಜತ್ವವನ್ನು ತಂದುಕೊಡುತ್ತೇನೆ.

ನೀನು ಮಹಾರಾಜನೆಂದೆನಿಸಿಕೊಂಡು ಸುಖವಾಗಿ ಬಾಳುವೆಯಂತೆ. ನೀನು. ನನಗೆ ಬೇರೆಯವನಲ್ಲ, ಇಂದ್ರಜಿತು ಮುಂತಾದವರಿಗಿಂತ ಹೆಚ್ಚಿನವನು. ಕಪಿಕರಡಿಗಳನ್ನು ಸಂಗ್ರಹಿಸಿಕೊಂಡು ಬಂದಿರುವ ಆ ನರನು ಅದೇನು ತಾನೇ ಮಾಡಬಲ್ಲ, ಧನಧಾನ್ಯ ತುಂಬಿದ ಈ ಪಟ್ಟಣಕ್ಕೆ ನಿನ್ನನ್ನು ಯುವರಾಜನನ್ನಾಗಿ ಮಾಡುತ್ತೇನೆ, ದೊರೆತನದಿಂದ ಈ ನಗರವನ್ನು ಆಳು' ಎಂದು ಹೇಳಲು ಅಂಗದನು ಈ ರೀತಿ ಉತ್ತರಿಸಿದ ಸಕಲ ಶಾಸ್ತ್ರಗಳನ್ನೂ ತಿಳಿದವನ ರೀತಿಯಲ್ಲಿ ಆಗಿಹೋದುದನ್ನೂ ಈಗಿರುವ ಸ್ಥಿತಿಯನ್ನೂ ಮುಂದೆ ಆಗುವುದನ್ನೂ ಊಹೆಯಿಂದ ಮಾತನಾಡಿ ನೀನು ಬೇರೆಯವರನ್ನು ಹರ್ಷಿತರನ್ನಾಗಿಸಿ ಕೃತಕೃತ್ಯರನ್ನಾಗಿ ಮಾಡಿಕೋ. ನಿನ್ನ ಮನಸ್ಸಿನ ದೌಷ್ಟ್ಯವು ನನಗೆ ತಿಳಿದಿಲ್ಲವೆಂದು ಅರಿತೆಯಾ? ವಿರಾಧ ಖರ ದೂಷಣ ತ್ರಿಶಿರರು ಸಾಯುವಾಗ ನಿನ್ನ ಪೌರುಷ ಎಲ್ಲಿ ಹೋಗಿತ್ತು? ಒಡಹುಟ್ಟಿದವಳ ಕಿವಿಮೂಗುಗಳನ್ನು ಲಕ್ಷ್ಮಣನು ತರಿದು ಎಸೆದಾಗ ನಿನ್ನ ಸಾಹಸವು ಎಲ್ಲಿ ಅಡಗಿತ್ತು? ಭಿಕ್ಷುಕ ರೂಪವನ್ನು ತಾಳಿ ರಘುವರನ ಸತಿಯನ್ನು ಅಪಹರಿಸುವಾಗ ನಿನ್ನ ಧೈರ್ಯವೆಲ್ಲಿ ಅಡಗಿತ್ತು? ನಿನ್ನ ಕೀರ್ತಿಯನ್ನು ಏನೆಂದು ಹೇಳುವುದು? ವೇದವತಿಯನ್ನು ಬಲಾತ್ಕರಿಸಹೋಗಿ ಅವಳಿಂದ ಶಾಪಕ್ಕೊಳಗಾದುದು, ಪುಂಜಿಕಾಸ್ಥಲಿಯನ್ನು ಕೆಣಕಿ ಬ್ರಹ್ಮನಿಂದ ಶಾಪಗ್ರಸ್ತನಾದ ವಿಷಯವು ಯಾರಿಗೂ ತಿಳಿಯದು ಎಂದಂದುಕೊಂಡೆಯಾ? ಪರರ ಸತಿಯರಿಗೆ ಆಸೆಪಟ್ಟು ಭಂಗಪಟ್ಟವರ ಕತೆಯನ್ನು ನೀನು ಕೇಳಿ ತಿಳಿಯೆಯಾ? ನಿನಗೂ ಅದೇ ಗತಿ ಕಾದಿದೆಯೆಂಬುದು ಇಷ್ಟರಲ್ಲೇ ಜಗತ್ತಿಗೆ ತಿಳಿಯುತ್ತದೆ. ದುರ್ಮಾರ್ಗವನ್ನು ಹಿಡಿದವನು ಬೇರೆ ಯಾರಿಗೆ ತಾನೇ ಏನು ಉಪಕಾರವನ್ನು ಮಾಡಬಲ್ಲ ನಿನ್ನ ಮಾತುಗಳಿಂದ ನಾನು ಮರುಳಾಗುವವನಲ್ಲ. ಕಪಿವೃಂದವು ಈಗಾಗಲೇ ನಿನ್ನ ನಾಡಿನ ಜಲಧಿತಟದಲ್ಲಿ ಬಂದು ಆವರಿಸಿದೆ; ನಿನ್ನ ತಮ್ಮನು ರಾಮನ ಪದಜಲಜಗಳಿಗೆ ಶರಣಾಗಿದ್ದಾನೆ. ಇವುಗಳನ್ನೆಲ್ಲ ಮನಸ್ಸಿಗೆ ತಂದುಕೊಂಡು, ಇಷ್ಟು ದಿನ ಎಸಗಿದ ಪಾಪಕೃತ್ಯಗಳಿಗೆ ಪರಿಹಾರವನ್ನು ಹುಡುಕು. ನನ್ನ ಮಾತುಗಳನ್ನು ಕೇಳದಿದ್ದರೆ ದೈತೇಯ ಜಾತಿಗೆ ಉಳಿಗಾಲವಿಲ್ಲ.

ನಿನ್ನ ಕುಲದ ಘನತೆ ನಾಶವಾಗುತ್ತದೆ. ನಿನ್ನ ಅವಿವೇಕಗಳಿಗೆ ಉಪಾಯವೊಂದಿದೆ, ಮನಃಪೂರ್ವಕವಾಗಿ ಅದನ್ನು ಅನುಸರಿಸಿದರೆ ನೀನೂ ನಿನ್ನ ಕುಲವೂ ನಿನ್ನ ಐಸಿರಿಯೂ ಉಳಿದುಕೊಳ್ಳುತ್ತದೆ. ಕೂಡಲೇ ಜನಕಜೆಯನ್ನು ರಘುವೀರನಿಗೆ ಒಪ್ಪಿಸಿಕೊಟ್ಟು ನಿನ್ನದೆಂಬುದೆಲ್ಲವನ್ನೂ ಉಳಿಸಿಕೋ. ಭೂರಮೆಯು ಸಾಮಾನ್ಯಳಲ್ಲ, ಅವಳು ಸಾಕ್ಷಾತ್ ರಮೆ ನಿನ್ನ ಭ್ರಮೆಯನ್ನು ಬಿಟ್ಟು ಆಕೆಯನ್ನು ಬಿಟ್ಟುಕೊಟ್ಟು ರಾಮನ ಕೃಪೆಗೊಳಗಾಗಿ ಸುಖವಾಗಿರುವವನಾಗಿರು. ಸಾಕ್ಷಾತ್ ಎಷ್ಟುವಾದ ಅವನೊಡನೆ ನೀನು ಸೆಣಸಲಾರೆ; ಸಮಾನಬಲರೊಡನೆ ಸೆಣಸಿದರೆ ಜಯಾಪಜಯಗಳು ಲಾಭಾಲಾಭಗಳು ಈಶಕೃಪೆಯಿಂದ ಒದಗುತ್ತವೆ.

ಮುಂದುವರೆಯುವುದು

# ನಿತ್ಯ ಬೀಟ್‌ರೂಟ್ ಜ್ಯೂಸ್ ಸೇವಿಸುವುದರಿಂದ ಲಿವರ್ ನಿರ್ವಿಷಗೊಳ್ಳುತ್ತದೆಯೇ?; ಅದರ ಸಂಪೂರ್ಣ ಪ್ರಯೋಜನಗಳೇನು?

ಬೀಟ್‌ರೂಟ್‌ನಲ್ಲಿ ಕಬ್ಬಿಣಾಂಶವು ಹೇರಳವಾಗಿದೆ. ಹಿಮೋಗ್ಲೋಬಿನ್ ಮಟ್ಟವನ್ನು ತ್ವರಿತವಾಗಿ ಹೆಚ್ಚಿಸುವುದರ ಜೊತೆಗೆ ದೇಹಕ್ಕೆ ಅಗತ್ಯವಾದ ಪೋಷಕಾಂಶಗಳನ್ನು ಸಹ ಒದಗಿಸುತ್ತದೆ. ಬೀಟ್‌ರೂಟ್ ದೇಹದ ಆರೋಗ್ಯಕ್ಕೆ ಅನೇಕ ಪ್ರಯೋಜನಗಳನ್ನು ನೀಡುತ್ತದೆ.

ಹೆಚ್ಚಿನ ಜನರು ಇದನ್ನು ತಮ್ಮ ದೈನಂದಿನ ಆಹಾರದಲ್ಲಿ ಸೇರಿಸಿಕೊಳ್ಳುತ್ತಾರೆ. ಪ್ರತಿದಿನ ಬೀಟ್‌ರೂಟ್ ರಸ ಕುಡಿಯುವುದರಿಂದ ಯಕೃತ್ತು ನಿರ್ವಿಷವಾಗುತ್ತದೆಯೇ? ಈ ಕುರಿತು ವೈದ್ಯರು ತಿಳಿಸುವುದೇನು ಎಂಬುದನ್ನು ವಿವರವಾಗಿ ಇಲ್ಲಿ ಅರಿತುಕೊಳ್ಳೋಣ ಬನ್ನಿ. ಬೀಟ್‌ರೂಟ್ ರಸವು ಯಕೃತ್ತಿನ ಕಾರ್ಯ ಸುಧಾರಿಸುವಲ್ಲಿ ಹಾಗೂ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಬೀಟ್‌ರೂಟ್‌ನಲ್ಲಿ ಕಂಡುಬರುವ ನಿರ್ದಿಷ್ಟ ಪೋಷಕಾಂಶಗಳು ಯಕೃತ್ತಿಗೆ ರಕ್ಷಣಾತ್ಮಕ ಗುರಾಣಿಯಾಗಿ ಕಾರ್ಯನಿರ್ವಹಿಸುತ್ತವೆ. ಹೆಚ್ಚುವರಿಯಾಗಿ ಯಕೃತ್ತಿನಿಂದ ವಿಷ ಹಾಗೂ ಕಲ್ಮಶಗಳನ್ನು ಹೊರಹಾಕುವಲ್ಲಿ ಮುಖ್ಯ ಪಾತ್ರವಹಿಸುತ್ತದೆ.

ಬೀಟ್‌ರೂಟ್‌ನಲ್ಲಿ ಬೀಟಾಲೈನ್‌ಗಳಿಂದ ತುಂಬಿರುತ್ತದೆ. ಈ ಸಂಯುಕ್ತಗಳು ಶಕ್ತಿಯುತವಾದ ಉತ್ಕರ್ಷಣ ನಿರೋಧಕ ಗುಣಗಳನ್ನು ಹೊಂದಿವೆ. ಈ ಉತ್ಕರ್ಷಣ ನಿರೋಧಕಗಳು ಆಕ್ಸಿಡೇಟಿವ್ ಒತ್ತಡ ತಡೆಗಟ್ಟುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇದು ಯಕೃತ್ತಿನ ಕೋಶಗಳನ್ನು ಹಾನಿಗೊಳಿಸುತ್ತದೆ ಹಾಗೂ ಇವುಗಳ ಕ್ರಿಯಾತ್ಮಕ ಸಾಮರ್ಥ್ಯ ದುರ್ಬಲಗೊಳಿಸುತ್ತದೆ. ಇಂಟರ್ನ್ಯಾಷನಲ್ ಜರ್ನಲ್ ಆಫ್ ನರ್ಸಿಂಗ್ ಎಜುಕೇಶನ್ ಅಂಡ್ ರಿಸರ್ಚ್ ವರದಿ ತಿಳಿಸುವ ಪ್ರಕಾರ, ಬೀಟಾಲೈನ್‌ಗಳು ದೇಹದಲ್ಲಿನ ವಿಷವನ್ನು ಒಡೆಯುವ ಕಿಣ್ವಗಳ ಉತ್ಪಾದನೆ ಹೆಚ್ಚಿಸುತ್ತವೆ, ಇದರಿಂದ ದೇಹದ ನೈಸರ್ಗಿಕ ನಿರ್ವಿಶೀಕರಣ ಪ್ರಕ್ರಿಯೆ ಬೆಂಬಲಿಸುತ್ತವೆ. ಬೀಟ್‌ರೂಟ್‌ನಲ್ಲಿ ಕಂಡುಬರುವ ನೈಸರ್ಗಿಕ ಸಂಯುಕ್ತವಾದ ಬೀಟಾಲೈನ್, ಯಕೃತ್ತಿನ ಆರೋಗ್ಯ ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಆರೋಗ್ಯ ತಜ್ಞರು ಹೇಳುವಂತೆ ಇದು ದೇಹವನ್ನು ಕೊಬ್ಬನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಹಾಯ ಮಾಡುತ್ತದೆ. ಅತಿಯಾದ ಕೊಬ್ಬಿನ ಶೇಖರಣೆಯನ್ನು ತಡೆಗಟ್ಟುತ್ತದೆ. ಇದು ಕೊಬ್ಬಿನ ಯಕೃತ್ತಿನ ಕಾಯಿಲೆಯಂತಹ ಪರಿಸ್ಥಿತಿಗಳಿಂದ ಯಕೃತ್ತನ್ನು ರಕ್ಷಿಸುತ್ತದೆ. ಇದು ಯಕೃತ್ತಿನ ಕೋಶಗಳನ್ನು ಹಾನಿಯಿಂದ ರಕ್ಷಿಸುತ್ತದೆ. ವಯಸ್ಕರಲ್ಲಿ ಆಲ್ಕೊಹಾಲ್ಯುಕ್ತವಲ್ಲದ ಕೊಬ್ಬಿನ ಯಕೃತ್ತಿನ ಕಾಯಿಲೆ ಚಿಕಿತ್ಸೆಗಾಗಿ ಬೀಟ್‌ರೂಟ್ ರಸವು ಪರಿಣಾಮಕಾರಿ ವಿಧಾನವಾಗಿದೆ ಎಂದು ನ್ಯಾಷನಲ್ ಮೆಡಿಷನ್ ಲೈಬ್ರರಿ ತಿಳಿಸುತ್ತದೆ. ದೀರ್ಘಕಾಲದ ಉರಿಯೂತವು ಯಕೃತ್ತಿಗೆ ಹಾನಿ ಮಾಡುತ್ತದೆ. ಬೀಟ್‌ರೂಟ್ ಯಕೃತ್ತಿನ ಉರಿಯೂತವನ್ನು ಕಡಿಮೆ ಮಾಡಲು, ಯಕೃತ್ತಿನ ಆರೋಗ್ಯವನ್ನು ಸುಧಾರಿಸಲು ಸಹಾಯ ಮಾಡುವ ಉರಿಯೂತ ತಡೆಯುವ ಗುಣಲಕ್ಷಣಗಳನ್ನು ಹೊಂದಿದೆ. ಬೀಟ್‌ರೂಟ್‌ನಲ್ಲಿರುವ ಬೀಟಾಲೈನ್‌ಗಳು ಹಾಗೂ ನೈಟ್ರೇಟ್‌ಗಳು ಉರಿಯೂತ ಕಡಿಮೆ ಮಾಡಲು ಹಾಗೂ ರಕ್ತ ಪರಿಚಲನೆ ಸುಧಾರಿಸಲು ಸಹಾಯ ಮಾಡುತ್ತದೆ. ಯಕೃತ್ತಿಗೆ ಅಗತ್ಯವಾದ ಪೋಷಕಾಂಶಗಳನ್ನು ಒದಗಿಸುತ್ತದೆ, ಜೀವಕೋಶ ದುರಸ್ತಿ ಪ್ರಕ್ರಿಯೆಯನ್ನು ವೇಗಗೊಳಿಸುತ್ತದೆ ಎಂದು ಹೇಳಲಾಗುತ್ತದೆ.

ಬೀಟ್‌ರೂಟ್ ರಸವನ್ನು ನಿಯಮಿತವಾಗಿ ಸೇವಿಸುವುದರಿಂದ



ಯಕೃತ್ತಿನ ಕಿಣ್ವದ ಕಾರ್ಯವನ್ನು ಸುಧಾರಿಸಬಹುದು. ರಕ್ತದಲ್ಲಿ(ಅಲನೈನ್ ಅಮಿನೊಟ್ರಾನ್ಸ್‌ಫರೇಸ್) ಹಾಗೂ ಕಿಣ್ವಗಳ ಮಟ್ಟವು ಹೆಚ್ಚಾಗಿರುವುದು ಯಕೃತ್ತಿನ ಮೇಲಿನ ಒತ್ತಡ ಸೂಚಿಸುತ್ತದೆ.

ನಿಯಮಿತವಾಗಿ ಬೀಟ್‌ರೂಟ್ ಜ್ಯೂಸ್ ಸೇವಿಸುವುದರಿಂದ ಈ ಕಿಣ್ವಗಳ ಮಟ್ಟವು ಗಣನೀಯವಾಗಿ ಕಡಿಮೆಯಾಗುತ್ತದೆ. ಈ ಮೂಲಕ ಯಕೃತ್ತಿನ ಕಾರ್ಯನಿರ್ವಹಣೆಯು ಸುಧಾರಿಸುತ್ತದೆ ಎಂದು ಹಲವಾರು ಅಧ್ಯಯನಗಳು ತೋರಿಸಿವೆ. ಬೀಟ್‌ರೂಟ್ ಜ್ಯೂಸ್ ಯಕೃತ್ತಿಗೆ ಅತ್ಯಂತ ಪ್ರಯೋಜನಕಾರಿಯಾಗಿದ್ದರೂ ತಜ್ಞರು ಇದನ್ನು ಮಿತವಾಗಿ ಸೇವಿಸಬೇಕು. ಇದರ ಅತಿಯಾದ ಸೇವನೆಯು ಗುಲಾಬಿ ಅಥವಾ ಕೆಂಪು ಬಣ್ಣದ ಮೂತ್ರ ವಿಸರ್ಜನೆಯಂತಹ (ಬೀಟೂರಿಯಾ) ಅಡ್ಡಪರಿಣಾಮಗಳಿಗೆ ಕಾರಣವಾಗಬಹುದು. ಬೀಟ್‌ರೂಟ್‌ನಲ್ಲಿ ಹೆಚ್ಚಿನ ಪ್ರಮಾಣದ ಆಕ್ಸಲೇಟ್ ಇರುವುದರಿಂದ ಕೆಲವರಲ್ಲಿ ಮೂತ್ರಪಿಂಡದ ಕಲ್ಲುಗಳು ಉಂಟಾಗುವ ಅಪಾಯ ಇರುತ್ತದೆ.



# ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

98

# ಕೈ ಚಾಚುವ ಕಲಿಕೆ

ಯಶಸ್ಸಿಗೆ ಅಪಜಯವನ್ನು ಅರಗಿಸಿಕೊಳ್ಳುವ ಧೀರತೆ, ಸಕಾರಾತ್ಮಕ ಚಿತ್ತದ ಜೊತೆಗೆ ಕೈ ಚಾಚುವ ವಿನಯವೂ ಬೇಕು. ಸಹಾಯ ಯಾಚಿಸುವುದು ದೌರ್ಬಲ್ಯವಲ್ಲ, ಕಲಿಕೆಯ ಜಾಣ್ಮೆ. ಇದು ಅಹಂಕಾರದ ಅಳಿವು, ಜ್ಞಾನದ ಆರಂಭ. ಸಮಸ್ಯೆ ಎದುರಾದಾಗ ಮೌನದಲ್ಲಿ ಕುಗ್ಗುವ ಬದಲು ಗುರು,ಮಿತ್ರ, ಹಿರಿಯರಲ್ಲಿ ಮಾರ್ಗದರ್ಶನ ಬೇಡುವ ಪರಿಪಾಟ ರೂಢಿಸಬೇಕು.

ತಪ್ಪನ್ನು ಹಂಚಿಕೊಂಡಾಗ ಪರಿಹಾರದ ಹಾದಿ ಶೀಘ್ರ ತೆರೆದುಕೊಳ್ಳುತ್ತದೆ. ಪ್ರಶ್ನಿಸುವುದು ಅವಮಾನವಲ್ಲ, ಪ್ರಜ್ಞೆಯ ದೀಪ ಬೆಳಗಿಸುವ ಕ್ರಿಯೆ. ಸ್ಪಷ್ಟತೆ ಬಯಸುವವನಿಗೆ ಕಲಿಕೆಯ ಬಾಗಿಲು ಎಂದೂ ಮುಚ್ಚದು. ಕೇಳುವವನು ಒಂದು ಕ್ಷಣ ಮೂರ್ಖನಂತೆ ಕಾಣಬಹುದು, ಕೇಳದವನು ಜೀವನಪೂರ್ತಿ ಮೂರ್ಖನಾಗಿರುತ್ತಾನೆ. ನೆರವಿನ ಹಸ್ತ ಚಾಚುವ ಕಲಿಕಾರ್ಥಿ ಒಳಗೊಳಗೆ ಕರಗುವುದಿಲ್ಲ. ಅವನಲ್ಲಿ ವಿನಯ, ಆತ್ಮಪ್ರತ್ಯಯ, ಸ್ಫಟಿಕದಂತಹ ಸ್ಪಷ್ಟತೆ ಅರಳುತ್ತವೆ. ಆದ್ದರಿಂದ ಸಹಾಯ ಸ್ವೀಕರಿಸುವ ಧೈರ್ಯವೇ ಯಶಸ್ಸಿನೆಡೆಗೆ ಕರೆದೊಯ್ಯುವ ನಿಶ್ಶಬ್ದ ಆದರೆ ಪ್ರಬಲ ಸಾತ್ವಿಕ ಶಕ್ತಿ.

**ನರವಿಜ್ಞಾನದ ನುಡಿ ಸ್ಪಷ್ಟ. ನೆರವನ್ನು ಸ್ವೀಕರಿಸುವ ಮುಕ್ತ ಮನಸ್ಸು ಕಾರ್ಟಿಸಾಲ್ ತಗ್ಗಿಸಿ, ವಿವೇಚನೆ, ಏಕಾಗ್ರತೆ, ಭಾವನಾತ್ಮಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಸಾಮಾಜಿಕ ಸಹಕಾರ ಕಲಿಕೆಯ ವೇಗವನ್ನು ದ್ವಿಗುಣಗೊಳಿಸುತ್ತದೆ. ಹಂಚಿಕೆಯೇ ಮಿದುಳಿಗೆ ನೆಮ್ಮದಿ.**



# ನೀವು ಕೂದಲಿಗೆ ಎಣ್ಣೆ ಹಚ್ಚುವಾಗ ಸಾಮಾನ್ಯವಾಗಿ ಈ ತಪ್ಪುಗಳನ್ನು ಮಾಡಬೇಡಿ: ತಜ್ಞರ ಸಲಹೆ

ಕೂದಲಿಗೆ ಎಣ್ಣೆ ಹಚ್ಚುವುದು ನಮ್ಮ ಸಾಂಪ್ರದಾಯಿಕ ಕೂದಲಿನ ಆರೈಕೆಯ ದಿನಚರಿಯ ಮುಖ್ಯ ಭಾಗವಾಗಿದೆ. ಒಣ ಕೂದಲನ್ನು ಮೃದು ಹಾಗೂ ರೇಷ್ಮೆಯಂತಹ ಕೂದಲನ್ನಾಗಿ ಪರಿವರ್ತಿಸುವುದಲ್ಲದೆ, ತಲೆ ತೊಳೆಯುವಾಗ ಕೂದಲಿನ ಎಳೆಗಳ ನಡುವಿನ ಘರ್ಷಣೆ ಕಡಿಮೆ ಮಾಡುತ್ತದೆ. ನೀವು ಯಾವ ರೀತಿಯ ಎಣ್ಣೆಯನ್ನು ಆರಿಸಿಕೊಳ್ಳುತ್ತೀರಿ ಎಂಬಷ್ಟೇ ಮುಖ್ಯವಾಗಿ ಅದನ್ನು ಹೇಗೆ ಹಚ್ಚಿಕೊಳ್ಳುತ್ತೀರಿ ಎಂಬುದು ಕೂಡ ಪ್ರಮುಖವಾಗುತ್ತದೆ ಎಂದು ತಜ್ಞರು ತಿಳಿಸುತ್ತಾರೆ. ಕೂದಲಿಗೆ ಎಣ್ಣೆ ಹಚ್ಚುವಾಗವಹಿಸಬೇಕಾದ ಪ್ರಮುಖವಾಗಿರುವಂತಹ ಕೆಲವು ಮುನ್ನೆಚ್ಚರಿಕೆಗಳೇನು ಎಂಬುದನ್ನು ತಿಳಿಯೋಣ. ಗಂಟು ಬಿದ್ದ ಅಥವಾ ಜಡೆ ಕಟ್ಟಿದ ಕೂದಲಿಗೆ ನೇರವಾಗಿ ಎಣ್ಣೆ ಹಚ್ಚುವುದರಿಂದ ಕೂದಲು ಅತಿಯಾಗಿ ಉದುರಬಹುದು ಇಲ್ಲವೇ ಮುರಿಯಬಹುದು.

ಎಣ್ಣೆ ಹಚ್ಚುವ ಮೊದಲು ಕೂದಲನ್ನು ನಿಧಾನವಾಗಿ ಬಾಚಿ, ಗಂಟುಗಳನ್ನು ಬಿಡಿಸಿಕೊಳ್ಳಬೇಕೆಂದು ತಜ್ಞರು ಶಿಫಾರಸು ಮಾಡುತ್ತಾರೆ. ಕೂದಲಿನ ತುದಿಗಳಿಂದ ಪ್ರಾರಂಭಿಸಿ ಕ್ರಮೇಣ ಮೇಲ್ಭಾಗದವರೆಗೆ ಗಂಟುಗಳನ್ನು ಬಿಡಿಸುವುದು ಉತ್ತಮ. ಅಲ್ಲದೆ, ಬಿಡಿಸಲು ಕಷ್ಟವಾದ ಗಂಟುಗಳ ಮೂಲಕ ಬಾಚಣಿಗೆಯನ್ನು ಬಲವಂತವಾಗಿ ಎಳೆಯಬಾರದು. ದೀರ್ಘಕಾಲದವರೆಗೆ ತಲೆಯ ಚರ್ಮವನ್ನು ಮಸಾಜ್ ಮಾಡುವುದರಿಂದ ಎಣ್ಣೆಯು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ ಎಂಬುದು ತಪ್ಪು ಕಲ್ಪನೆ. ತಲೆಯ ಚರ್ಮದ ಮೇಲೆ ಅತಿಯಾದ ಒತ್ತಡ ಹೇರುವುದರಿಂದ ಕಿರಿಕಿರಿ ಉಂಟಾಗಬಹುದು, ಸಣ್ಣಪುಟ್ಟ ಗೀರುಗಳು ಇಲ್ಲವೇ ಗಾಯಗಳಾಗಬಹುದು ಎಂದು ಆರೋಗ್ಯ ತಜ್ಞರು ಎಚ್ಚರಿಕೆ ನೀಡುತ್ತಾರೆ. ತಲೆಯ ಮೇಲೆ ನೇರವಾಗಿ ಎಣ್ಣೆಯನ್ನು ಸುರಿಯುವ ಬದಲು, ಬೆರಳ ತುದಿಯಿಂದ ತಲೆಯ ಚರ್ಮದ ವಿವಿಧ ಭಾಗಗಳಿಗೆ ಸ್ವಲ್ಪ ಪ್ರಮಾಣದ ಎಣ್ಣೆ ಹಚ್ಚಿ, ಬಳಿಕ ಕೆಲವು ನಿಮಿಷಗಳ ಕಾಲ ವೃತ್ತಾಕಾರದಲ್ಲಿ ನಿಧಾನವಾಗಿ ಮಸಾಜ್ ಮಾಡಬೇಕಾಗುತ್ತದೆ ಎಂದು ತಜ್ಞರು ತಿಳಿಸುತ್ತಾರೆ.



ಇಡೀ ತಲೆಯನ್ನು ಎಣ್ಣೆಯಿಂದ ಸಂಪೂರ್ಣವಾಗಿ ನೆನೆಸುವುದರಿಂದ ಯಾವುದೇ ಹೆಚ್ಚುವರಿ ಪ್ರಯೋಜನಗಳಿಲ್ಲ. ಅತಿಯಾದ ಎಣ್ಣೆಯ ಬಳಕೆಯು ತಲೆಯ ಚರ್ಮ, ಕೂದಲನ್ನು ಜಿಡ್ಡಿನಿಂದ ಕೂಡಿದ, ಭಾರವಾದ, ಅಂಟಂಟಾದಂತೆ ಮಾಡುತ್ತದೆ. ಉಳಿದ ಎಣ್ಣೆಯನ್ನು ತೆಗೆದುಹಾಕಲು ಪದೇ ಪದೇ ಶಾಂಪೂ ಬಳಸಬೇಕಾಗುತ್ತದೆ. ಈ ಪ್ರಕ್ರಿಯೆಯು ಕೂದಲಿನ ನೈಸರ್ಗಿಕ ತೇವಾಂಶ ತೆಗೆದುಹಾಕುತ್ತದೆ, ತಲೆಯ ಚರ್ಮ ಇನ್ನಷ್ಟು ಒಣಗುವಂತೆ ಮಾಡುತ್ತದೆ ಎಂದು ತಜ್ಞರು ಎಚ್ಚರಿಸುತ್ತಾರೆ. ನಿಮ್ಮ ಕೂದಲಿನ ಉದ್ದ, ದಪ್ಪ, ಒಣಗುವಿಕೆಯ ಮಟ್ಟಕ್ಕೆ ಅನುಗುಣವಾಗಿ ಎಣ್ಣೆಯನ್ನು ಹಚ್ಚುವುದು ಸೂಕ್ತ. ಮೊದಲು ತಲೆಯ ಚರ್ಮಕ್ಕೆ ಎಣ್ಣೆಯನ್ನು ಹಚ್ಚಿ, ನಂತರ ಕೈಯಲ್ಲಿ ಉಳಿದಿರುವ ಎಣ್ಣೆಯನ್ನು ಕೂದಲಿನ ಉದ್ದಕ್ಕೂ ನಿಧಾನವಾಗಿ ಸವರಲು ಅವರು ಸಲಹೆ ನೀಡುತ್ತಾರೆ. ಕೂದಲಿನ ಮೇಲೆ ಅತಿಯಾದ ಪ್ರಮಾಣದಲ್ಲಿ ಎಣ್ಣೆಯನ್ನು ಹಚ್ಚುವ ಬದಲು, ತುದಿಗಳ ಮೇಲೆ ಸ್ವಲ್ಪ ಹೆಚ್ಚು ಗಮನಹರಿಸುವುದು ಕೂಡ ಒಳ್ಳೆಯದು ಎಂದು ತಜ್ಞರು ತಿಳಿಸುತ್ತಾರೆ.

ಎಣ್ಣೆಯ ಸಂಪೂರ್ಣ ಪ್ರಯೋಜನಗಳನ್ನು ಪಡೆಯಲು ಅದನ್ನು ರಾತ್ರಿಯಿಡೀ ಹಾಗೆಯೇ ಬಿಡುವ ಅಗತ್ಯವಿಲ್ಲ. ಕೂದಲು ತೊಳೆಯುವ ಮೊದಲು ಇದನ್ನು ಸ್ವಲ್ಪ ಸಮಯದವರೆಗೆ ಹಚ್ಚಿಟ್ಟರೆ ಸಾಕು. ವಿಶೇಷವಾಗಿ ಎಣ್ಣೆಯುಕ್ತ ನೆತ್ತಿ, ತಲೆಹೊಟ್ಟು, ಪದೇ ಪದೇ ನೆತ್ತಿಯಲ್ಲಿ ತುರಿಕೆ ಇರುವವರು ರಾತ್ರಿಯಿಡೀ ಎಣ್ಣೆಯನ್ನು ಹಚ್ಚಿಟ್ಟುಕೊಂಡರೆ, ಮತ್ತಷ್ಟು ಆ ಸಮಸ್ಯೆಗಳು ಉಲ್ಬಣಗೊಳ್ಳಬಹುದು. ಎಣ್ಣೆಯನ್ನು ಹಚ್ಚಿದ ಬಳಿಕ ಅದನ್ನು ಸೂಕ್ತ ಸಮಯದವರೆಗೆ ಹಾಗೆಯೇ ಬಿಟ್ಟು, ನಂತರ ಮೈಲ್ಡ್ ಶಾಂಪೂ ಬಳಸಿ ಕೂದಲನ್ನು ತೊಳೆಯಬೇಕಾಗುತ್ತದೆ ಎಂದು ಸೌದರ್ಯ ತಜ್ಞರು ಸಲಹೆ ನೀಡುತ್ತಾರೆ. ಕೂದಲಿನ ಎಣ್ಣೆಯನ್ನು ಬಿಸಿ ಮಾಡಲೇಬೇಕೆಂದೇನೂ ಇಲ್ಲ. ಒಂದು ವೇಳೆ ನೀವು ಉಗುರುಬೆಚ್ಚಗಿನ ಎಣ್ಣೆಯಿಂದ ನೆತ್ತಿಗೆ ಮಸಾಜ್ ಮಾಡಲು ಬಯಸಿದರೆ, ಅದು ಕೇವಲ ಸ್ವಲ್ಪವೇ ಬೆಚ್ಚಗಿರುವಂತೆ (ಉಗುರುಬೆಚ್ಚಗಿನ ಸ್ಥಿತಿಯಲ್ಲಿ) ನೋಡಿಕೊಳ್ಳಿ. ಅತಿಯಾದ ಬಿಸಿಯಿರುವ ಎಣ್ಣೆಯನ್ನು ಹಚ್ಚುವುದರಿಂದ ನೆತ್ತಿಯ ಸೂಕ್ಷ್ಮ ಚರ್ಮಕ್ಕೆ ಹಾನಿಯಾಗಬಹುದು.

ಮೊದಲಿಗೆ ಕೂದಲಿನಲ್ಲಿರುವ ಗಂಟುಗಳನ್ನು ಸಂಪೂರ್ಣವಾಗಿ ಬಿಡಿಸಬೇಕಾಗುತ್ತದೆ. ಬಳಿಕ ಸ್ವಲ್ಪ ಪ್ರಮಾಣದ ಎಣ್ಣೆ ತೆಗೆದುಕೊಂಡು ಅದನ್ನು ನೆತ್ತಿಯ ವಿವಿಧ ಭಾಗಗಳಿಗೆ ಹಂತ ಹಂತವಾಗಿ ಹಚ್ಚಿ, ಬಳಿಕ ಬೆರಳ ತುದಿಯಿಂದ ವೃತ್ತಾಕಾರದ ಚಲನೆಯಲ್ಲಿ ನೆತ್ತಿಯನ್ನು ನಿಧಾನವಾಗಿ ಮಸಾಜ್ ಮಾಡಬೇಕಾಗುತ್ತದೆ. ಕೈಯಲ್ಲಿ ಉಳಿದಿರುವ ಎಣ್ಣೆಯನ್ನು ಕೂದಲಿನ ಉದ್ದಕ್ಕೂ ಅಂದರೆ, ತುದಿಯವರೆಗೂ ಹಚ್ಚಬೇಕಾಗುತ್ತದೆ. ಕೊನೆಯದಾಗಿ ಕೂದಲನ್ನು ಮೈಲ್ಡ್ ಶಾಂಪೂವಿನಿಂದ ತೊಳೆಯುವ ಮೊದಲು ಸ್ವಲ್ಪ ಸಮಯದವರೆಗೆ ಹಾಗೆಯೇ ಬಿಡಬೇಕಾಗುತ್ತದೆ ಎಂದು ತಜ್ಞರು ಸಲಹೆ ನೀಡುತ್ತಾರೆ.

# 40 ವರ್ಷದ ಬಳಿಕ ಮಹಿಳೆಯರಿಗೆ ಅವಶ್ಯವಿರುವ ಪೋಷಕಾಂಶಗಳು ಯಾವುವು ಗೊತ್ತೇ? ತಜ್ಞರ ಸಲಹೆಗಳಿವು

40ನೇ ವಯಸ್ಸು ಮಹಿಳೆಯರ ಜೀವನದಲ್ಲಿ ಪ್ರಮುಖ ಮೈಲಿಗಲ್ಲು ಆಗಿದೆ. ಈ ವಯಸ್ಸನ್ನು ತಲುಪುತ್ತಿದ್ದಂತೆ ಅವರ ದೇಹದಲ್ಲಿ ಕ್ರಮೇಣ ಹಾರ್ಮೋನುಗಳ ಬದಲಾವಣೆಗಳು ಸಂಭವಿಸುತ್ತವೆ. ದೇಹವು ಪೆರಿಮೆನೋಪಾಸ್, ಋತುಬಂಧದ ಕಡೆಗೆ ಚಲಿಸಲು ಪ್ರಾರಂಭಿಸಿದಾಗ ದೇಹದ ಸ್ನಾಯುಗಳ ಬಲ, ಮೂಳೆ ಸಾಂದ್ರತೆ, ಚಯಾಪಚಯ ಹಾಗೂ ನಿದ್ರೆಯ ಚಕ್ರದಲ್ಲಿ ಬದಲಾವಣೆಗಳನ್ನು ಅನುಭವಿಸುವುದು ಕೂಡ ಸಹಜವಾಗಿದೆ.

ದೈಹಿಕ ಆಯಾಸ, ಹಸಿವಿನ ಮಟ್ಟದಲ್ಲಿ ವ್ಯತ್ಯಾಸಗಳು ಕಾಣಿಸಿಕೊಳ್ಳಬಹುದು. ಈ ಬದಲಾವಣೆಗಳಿಗೆ ಹೆದರಬಾರದು. ಜೊತೆಗೆ ಅಸಡ್ಡೆ ತೋರಿಸಬಾರದು. 40 ವರ್ಷಗಳ ಬಳಿಕ ಆಹಾರವನ್ನು ಗಮನಾರ್ಹವಾಗಿ ನಿರ್ಬಂಧಿಸುವುದಕ್ಕಿಂತ ಹೆಚ್ಚಾಗಿ ದೇಹಕ್ಕೆ ಸರಿಯಾದ ಪೋಷಕಾಂಶಗಳನ್ನು ಆಯ್ಕೆಮಾಡುವುದು, ಸೇವಿಸುವುದು ಮುಖ್ಯವಾಗಿದೆ. ಸಮತೋಲಿತ ಆಹಾರ, ಸರಿಯಾದ ವ್ಯಾಯಾಮವು ದೀರ್ಘಾವಧಿಯಲ್ಲಿ ಮಹಿಳೆಯರ ದೈಹಿಕ ಶಕ್ತಿ ವೃದ್ಧಿಸುವುದು ಹಾಗೂ ಒಟ್ಟಾರೆ ಆರೋಗ್ಯ ಸಂರಕ್ಷಿಸಲು ತುಂಬಾ ಸಹಾಯವಾಗುತ್ತದೆ. ಮುಂಬೈನ ಏಮ್ಸ್ ಆಸ್ಪತ್ರೆಯ ಸಲಹೆಗಾರ್ತಿ ಮತ್ತು ಪೌಷ್ಟಿಕತಜ್ಞೆ ಕವಿತಾ ನಾಥನ್ ಅವರು 40 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು ಯಾವ ಪೋಷಕಾಂಶಗಳಿಗೆ ಆದ್ಯತೆ ನೀಡಬೇಕು ಎಂಬುದರ ಕುರಿತು ವಿವರವಾಗಿ ತಿಳಿಸಿದ್ದಾರೆ. ಪೌಷ್ಟಿಕತಜ್ಞೆ ಕವಿತಾ ನಾಥನ್ ಅವರು ತಿಳಿಸುವ ಪ್ರಕಾರ, ತಮ್ಮ ದೇಹದ ಅವಶ್ಯಕತೆಗಳಿಗೆ ಅನುಗುಣವಾಗಿ ಮಹಿಳೆಯರು ತಮ್ಮ ದೈನಂದಿನ ಆಹಾರದಲ್ಲಿ ಸೇರಿಸಬೇಕಾದ ಪ್ರಮುಖ ಪೋಷಕಾಂಶಗಳನ್ನು ಸೇರಿಸಬೇಕಾಗುತ್ತದೆ. ವಯಸ್ಸಿನೊಂದಿಗೆ ದೇಹವು ನೈಸರ್ಗಿಕವಾಗಿ ಸ್ನಾಯುವಿನ ದ್ರವ್ಯರಾಶಿ ಕಳೆದುಕೊಳ್ಳಲು ಪ್ರಾರಂಭಿಸುತ್ತದೆ. ಇದನ್ನು ತಪ್ಪಿಸಲು ಸಾಕಷ್ಟು ಪ್ರೋಟೀನ್ ಸೇವನೆ ಅತ್ಯಗತ್ಯವಾಗಿದೆ. ಆಹಾರದಲ್ಲಿ ಬೇಳೆಕಾಳುಗಳು,



ಕಾಳುಗಳು, ಡೈರಿ ಉತ್ಪನ್ನಗಳು, ಮೊಟ್ಟೆ, ಮೀನು, ಚಿಕನ್, ತೋಫು, ಪನೀರ್, ನಟ್ಸ್ ಸೇರಿಸಬೇಕಾಗುತ್ತದೆ. ಋತುಬಂಧದ ಸಮಯದಲ್ಲಿ ಹಾರ್ಮೋನ್ 'ಈಸ್ಟ್ರೋಜೆನ್' ಕಡಿಮೆಯಾಗುವುದರಿಂದ ಮೂಳೆಯ ಬಲವು ಕಡಿಮೆಯಾಗುವ ಸಾಧ್ಯತೆ ಹೆಚ್ಚಿರುತ್ತದೆ. ಇದನ್ನು ತಡೆಗಟ್ಟಲು ಹಾಲು, ಮೊಸರು, ಪನೀರ್, ರಾಗಿ, ಎಳ್ಳು, ಪಾಲಕ್ ಮುಂತಾದ ಸೊಪ್ಪು ತರಕಾರಿಗಳನ್ನು ಸೇವಿಸಬೇಕು. ವಿಟಮಿನ್ ಡಿ ಕೊರತೆಯನ್ನು ವೈದ್ಯರ ಸಲಹೆಯೊಂದಿಗೆ ಮಾತ್ರೆಗಳಾಗಿ ತೆಗೆದುಕೊಳ್ಳಬಹುದು. ನಿಯಮಿತ ಮುಟ್ಟಿನ ಚಕ್ರ, ಭಾರಿ ರಕ್ತಸ್ರಾವ ಹೊಂದಿರುವ ಮಹಿಳೆಯರು ಕಬ್ಬಿಣದ ಕೊರತೆ ಬೆಳೆಸಿಕೊಳ್ಳಬಹುದು. ಎಲೆಕೋಸು, ಬೇಳೆಕಾಳುಗಳು, ಗ್ರೀನ್ಸ್, ಮೊಟ್ಟೆಗಳು ಹಾಗೂ ಕಬ್ಬಿಣದ ಅಂಶವಿರುವ ಆಹಾರಗಳು ಇದಕ್ಕೆ ಒಳ್ಳೆಯದು. ಸಸ್ಯ ಮೂಲದ ಆಹಾರದಿಂದ ಕಬ್ಬಿಣಾಂಶವನ್ನು ಉತ್ತಮವಾಗಿ ಹೀರಿಕೊಳ್ಳಲು ವಿಟಮಿನ್ ಸಿ (ನಿಂಬೆ, ನೆಲ್ಲಿಕಾಯಿ ಸೇರಿದಂತೆ ವಿವಿಧ ಆಹಾರಗಳು) ಸಮೃದ್ಧವಾಗಿರುವ ಆಹಾರವನ್ನು ಸೇವಿಸಬೇಕಾಗುತ್ತದೆ.

# ಯಾವುದೇ ಖರ್ಚಿಲ್ಲದೆ ಉತ್ತಮ ದೇಹದ ಆರೋಗ್ಯ ಕಾಪಾಡಿಕೊಳ್ಳಬಹುದು

ನಿಮ್ಮ ಮನೆಯ ಹತ್ತಿರವಿರುವ ಉದ್ಯಾನದಲ್ಲಿ ಓಪನ್ ಜಿಮ್ ವ್ಯವಸ್ಥೆ ಹೊಂದಿದ್ದರೆ, ಫಿಟ್‌ನೆಸ್‌ಗಾಗಿ ದೂರ ಹೋಗಬೇಕಾದ ಅವಶ್ಯಕತೆಯಿಲ್ಲ. ಇಲ್ಲಿರುವ ಉಪಕರಣವನ್ನು ಸರಿಯಾಗಿ ಬಳಸುವುದು ಹೇಗೆ ಎಂದು ತಿಳಿದಿರುವುದು ದೇಹದ ಸಾಮರ್ಥ್ಯಕ್ಕೆ ಅನುಗುಣವಾಗಿ ನಿಯಮಿತವಾಗಿ ವ್ಯಾಯಾಮ ಮಾಡುವುದು ಉತ್ತಮವಾಗಿದೆ. ಪಾರ್ಕ್‌ನಲ್ಲಿರುವ ಕಲರ್ ಫುಲ್ ವ್ಯಾಯಾಮ ಸಲಕರಣೆಗಳನ್ನು ನೋಡುವ ಬದಲು ಅವುಗಳನ್ನು ಬಳಸಲು ಆರಂಭಿಸಿದರೆ ಫಿಟ್‌ನೆಸ್ ಸೆಷನ್ ಆಗಿ ಪರಿವರ್ತಿಸಿಕೊಳ್ಳಬಹುದು ಎಂದು ಫಿಟ್‌ನೆಸ್ ತಜ್ಞರು ತಿಳಿಸುತ್ತಾರೆ. ಪ್ರಸ್ತುತ ತೆರೆದ ಜಿಮ್‌ನಲ್ಲಿ ಉಪಕರಣಗಳನ್ನು ಬಳಸುವುದರಿಂದ ದೇಹದ ಆರೋಗ್ಯಕ್ಕೆ ಲಭಿಸುವ ಪ್ರಯೋಜನಗಳನ್ನು ಅರಿತುಕೊಳ್ಳೋಣ.

ನಗರಾಡಳಿತ ಸಂಸ್ಥೆಗಳೊಂದಿಗೆ ಜಿಲ್ಲಾ ಕೇಂದ್ರಗಳು ಮತ್ತು ಪುರಸಭೆಗಳಲ್ಲಿ ಓಪನ್ ಜಿಮ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇವುಗಳನ್ನು ಕಾಲೋನಿಗಳು, ಅಪಾರ್ಟ್ಮೆಂಟ್ ಆವರಣಗಳು ಹಾಗೂ ಉದ್ಯಾನಗಳಲ್ಲಿ ಸ್ಥಾಪಿಸಲಾಗಿದೆ. ಹಸಿರು ನಿಸರ್ಗದ ಮಧ್ಯದಲ್ಲಿ ಉಚಿತವಾಗಿ ಮನೆಯ ಸಮೀಪದಲ್ಲಿ ವ್ಯಾಯಾಮ ಮಾಡಬಹುದು. ಕಷ್ಟಪಟ್ಟು ಜಿಮ್‌ಗೆ ಹೋಗಿ ಸಾವಿರಾರು ರೂಪಾಯಿ ಶುಲ್ಕ ಪಾವತಿಸುವ ಅಗತ್ಯವಿಲ್ಲ. ಎಲ್ಲಾ ವಯಸ್ಸಿನವರು ಇವುಗಳನ್ನು ಬಳಸಬಹುದು. ತೆರೆದ ಜಿಮ್‌ನಲ್ಲಿ ಉಪಕರಣಗಳನ್ನು ಹೇಗೆ ಬಳಸಬೇಕು ಎಂಬುದು ಅನೇಕರಿಗೆ ತಿಳಿದಿಲ್ಲ. ಓಪನ್ ಜಿಮ್‌ನಲ್ಲಿರುವ ಯಾವ ಸಾಧನವನ್ನು ಹೇಗೆ ಬಳಸುವುದು ಎಂಬುದನ್ನು ಅರಿತುಕೊಳ್ಳೋಣ. ನಿಮ್ಮ ಉದ್ಯಾನದಲ್ಲಿರುವ ರೋಯಿಂಗ್ ಯಂತ್ರವು ಕೈಗಳಿಗೆ ಮತ್ತು ಬೆನ್ನಿಗೆ ಉತ್ತಮ ವ್ಯಾಯಾಮವನ್ನು ಒದಗಿಸುತ್ತದೆ.

ಇದನ್ನು ಹೇಗೆ ಬಳಸುವುದು, ಮೊದಲು ಆಸನದ ಮೇಲೆ ಕುಳಿತು ಎರಡೂ ಕೈಗಳಿಂದ ಹಿಡಿಕೆಗಳನ್ನು ಹಿಡಿದುಕೊಳ್ಳಿ, ನಿಧಾನವಾಗಿ ದೇಹದ ಕಡೆಗೆ ಎಳೆಯಿರಿ. ನಂತರ ನಿಯಂತ್ರಣದೊಂದಿಗೆ ಹಿಂತಿರುಗಿ, ತೋಳುಗಳು, ಭುಜಗಳು ಮತ್ತು ಏರ್ ವಾಕರ್ ಯಂತ್ರವು ನಡಿಗೆಗೆ ಹೊಸ ನೋಟವನ್ನು ನೀಡುತ್ತದೆ. ಈ ಉಪಕರಣವನ್ನು ಬಳಸಲು, ಪೆಡಲ್ಸ್ ಮೇಲೆ ಪಾದಗಳನ್ನು ಹಾಕಿ, ಕೈಗಳಿಂದ ಹಿಡಿಕೆಗಳನ್ನು ಹಿಡಿದುಕೊಳ್ಳಿ ಹಾಗೂ ಕಾಲುಗಳನ್ನು ಮುಂದಕ್ಕೆ, ಹಿಂದಕ್ಕೆ ಸರಿಸಬೇಕಾಗುತ್ತದೆ.

# ಕಾಫಿಯಲ್ಲಿಯೂ ಪ್ರೋಟೀನ್; ಏನಿದು ಹೊಸ ಟ್ರೆಂಡ್?

ಇಂದಿನ ಯುವಕರು ತಾವು ತಿನ್ನುವ ಪ್ರತಿಯೊಂದು ಆಹಾರದಲ್ಲೂ ಪ್ರೋಟೀನ್ ಇರಬೇಕು ಎಂದು ಬಯಸುತ್ತಾರೆ. ಹೀಗಾಗಿ ಪೌಷ್ಟಿಕಾಂಶ ಹೆಚ್ಚಿರುವ ಹಾಗೂ ಪ್ರೋಟೀನ್ ಸಮೃದ್ಧವಾಗಿರುವ ಆಹಾರಗಳನ್ನೇ ಹೆಚ್ಚು ಆಯ್ಕೆ ಮಾಡುಕೊಳ್ಳುತ್ತಾರೆ. ಸಾಮಾನ್ಯ ದಿನಗಳಲ್ಲಿ ಕಾಫಿ ಎಂದ ತಕ್ಷಣ ಇದು ಆರೋಗ್ಯಕ್ಕೆ ಒಳ್ಳೆಯದಲ್ಲ, ಗ್ಯಾಸ್ಟ್ರಿಕ್ ಉಂಟುಮಾಡುತ್ತದೆ ಎಂದು ಭಾವಿಸುವವರೇ ಜಾಸ್ತಿ. ಜನರ ಈ ಮನಸ್ಥಿತಿಯನ್ನು ಬದಲಾಯಿಸಲು ಹಾಗೂ ಕಾಫಿಯಲ್ಲೂ ಪ್ರೋಟೀನ್ ಸಿಗುವಂತೆ ಮಾಡಲು ಹೊಸ ಮಾದರಿಯ ಹಲವಾರು 'ಪ್ರೋಟೀನ್ ಕಾಫಿ' ಫ್ಲೇವರ್‌ಗಳು ಮತ್ತು ಪ್ರೋಟೀನ್ ಪೌಡರ್‌ಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಸೋಶಿಯಲ್ ಮೀಡಿಯಾದಲ್ಲಿ ಸದ್ಯ 'ಪ್ರೋಫಿ'ಎಂಬ ಹೊಸ ಹೆಲ್ತ್ ಟ್ರೆಂಡ್ ಭಾರಿ ಸದ್ದು ಮಾಡುತ್ತಿದೆ. ಆದರೆ, ನಿಜವಾಗಿಯೂ ದಿನನಿತ್ಯ ಕುಡಿಯುವ ಕಾಫಿಗೆ ಪ್ರೋಟೀನ್ ಶೇಕ್ ಅಥವಾ ಪೌಡರ್ ಸೇರಿಸಿ ಕುಡಿಯುವುದು ದೇಹಕ್ಕೆ ಒಳ್ಳೆಯದೇ? ಈ ಬಗ್ಗೆ ಪೌಷ್ಟಿಕಾಂಶ ತಜ್ಞರು ಏನು ಹೇಳುತ್ತಾರೆ ಎಂಬ ವಿವರ ಇಲ್ಲಿದೆ. ಸಾಮಾನ್ಯವಾಗಿ ಬೆಳಿಗ್ಗೆ ಅಥವಾ ಸಂಜೆ ಕುಡಿಯುವ ಬಿಸಿ ಅಥವಾ ಕೋಲ್ಡ್ ಕಾಫಿಗೆ ಪ್ರೋಟೀನ್ ಶೇಕ್, ವೇ ಪ್ರೋಟೀನ್, ಅಥವಾ ಪ್ಲಾಂಟ್-ಬೇಸ್ಡ್ ಪ್ರೋಟೀನ್ ಪೌಡರ್ ಸೇರಿಸಿ ಕುಡಿಯುವುದನ್ನೇ 'ಪ್ರೋಫಿ' ಎನ್ನಲಾಗುತ್ತದೆ. ಫಿಟ್‌ನೆಸ್ ಪ್ರಿಯರು, ಜಿಮ್‌ಗೆ ಹೋಗುವವರು ಮತ್ತು ತೂಕ ಇಳಿಸಿಕೊಳ್ಳಲು ಬಯಸುವವರು ಈ ಟ್ರೆಂಡ್‌ಗೆ ಹೆಚ್ಚು ಮಾರುಹೋಗಿದ್ದಾರೆ. ವರ್ಕೌಟ್ ಮಾಡುವವರಿಗೆ ಕಾಫಿಯಲ್ಲಿರುವ ಕೆಫೀನ್ ತಕ್ಷಣದ ಶಕ್ತಿಯನ್ನು ನೀಡಿದರೆ, ಅದಕ್ಕೆ ಸೇರಿಸುವ ಪ್ರೋಟೀನ್ ವ್ಯಾಯಾಮದ ನಂತರ ಹಾನಿಗೊಳಗಾದ ಸ್ನಾಯುಗಳನ್ನು ಬೇಗನೇ ಗುಣಪಡಿಸಲು ನೆರವಾಗುತ್ತದೆ.

ಬರಿ ಕಾಫಿ ಕುಡಿದರೆ ಅದರಲ್ಲಿರುವ ಕೆಫೀನ್‌ನಿಂದ ಹಸಿವು ತಾತ್ಕಾಲಿಕವಾಗಿ ಕಡಿಮೆಯಾಗಬಹುದು, ಆದರೆ ಸ್ವಲ್ಪ ಸಮಯದಲ್ಲೇ ಮತ್ತೆ ಹಸಿವಾಗುತ್ತದೆ. ಅದೇ ಕಾಫಿಗೆ ಪ್ರೋಟೀನ್ ಬೆರೆಸಿದಾಗ ದೇಹದಲ್ಲಿ ಹಸಿವನ್ನು ಉತ್ತೇಜಿಸುವ ಹಾರ್ಮೋನ್‌ಗಳು ಕಡಿಮೆಯಾಗಿ, ದೀರ್ಘಕಾಲ ಹೊಟ್ಟೆ ತುಂಬಿದ ಅನುಭವವಾಗುತ್ತದೆ. ಇದು ಅನಗತ್ಯವಾಗಿ ಜಂಕ್ ಫುಡ್ ತಿನ್ನುವುದನ್ನು ತಡೆಯುತ್ತದೆ. ಬರಿ ಕೆಫೀನ್ ಮತ್ತು ಸಕ್ಕರೆ ಇರುವ ಕಾಫಿ ಸೇವಿಸಿದಾಗ ರಕ್ತದಲ್ಲಿನ ಸಕ್ಕರೆ ಪ್ರಮಾಣ ಹಠಾತ್ತನೆ ಏರಿಕೆಯಾಗುತ್ತದೆ. ಆದರೆ ಕಾಫಿಯ ಜೊತೆ ಪ್ರೋಟೀನ್ ಸೇರಿದಾಗ, ಗ್ಲೂಕೋಸ್ ಹೀರಿಕೊಳ್ಳುವ ಪ್ರಕ್ರಿಯೆ ನಿಧಾನವಾಗಿ, ರಕ್ತದಲ್ಲಿ ಸಕ್ಕರೆ ಮಟ್ಟ ಸ್ಥಿರವಾಗಿರಲು ಸಹಾಯ ಮಾಡುತ್ತದೆ.

ಬಿಸಿ ಕಾಫಿಗೆ ಪ್ರೋಟೀನ್ ಪೌಡರ್ ಬೆರೆಸಿದಾಗ ಅದು ಸರಿಯಾಗಿ ಕರಗದೆ ಗಂಟುಕಟ್ಟಿಕೊಳ್ಳಬಹುದು ಹಾಗೂ ಕೆಲವರಲ್ಲಿ ಹೊಟ್ಟೆ ಉರಿ ಅಥವಾ ಗ್ಯಾಸ್ಟ್ರಿಕ್ ಸಮಸ್ಯೆಯನ್ನು ಹೆಚ್ಚು ಮಾಡಬಹುದು. ಮಾರುಕಟ್ಟೆಯಲ್ಲಿ ಸಿಗುವ ರೆಡಿ ಟು ಡ್ರಿಂಕ್ 'ಪ್ರೋಟೀನ್ ಕಾಫಿ' ಫ್ಲೇವರ್‌ಗಳಲ್ಲಿ ಹೆಚ್ಚಿನ ಪ್ರಮಾಣದ ಕೃತಕ ಸಿಹಿ, ಪ್ರಿಸರ್ವೇಟಿವ್‌ಗಳು ಮತ್ತು ಕೆಮಿಕಲ್‌ಗಳು ಇರುತ್ತವೆ.

ಇವುಗಳನ್ನು ಪ್ರತಿದಿನ ಸೇವಿಸುವುದು ಆರೋಗ್ಯಕ್ಕೆ ಹಾನಿಕರ. ಪ್ರೋಟೀನ್ ಕಾಫಿ ಕುಡಿಯುವ ಭರದಲ್ಲಿ ಪ್ರೋಟೀನ್ ಪೌಡರ್, ಹಾಲು ಹಾಗೂ ಸಿಹಿ ಪದಾರ್ಥಗಳನ್ನು ಹೆಚ್ಚು ಬಳಸಿದರೆ ದೇಹಕ್ಕೆ ಅತಿಯಾದ ಕ್ಯಾಲೋರಿ ಸೇರುತ್ತದೆ.

### ಹಬ್ಬದ ಋತುವಿನಲ್ಲಿ ಗ್ರಾಹಕರಿಗೆ ಸಕ್ಕರೆಯ ಸುಗಮ ಲಭ್ಯತೆಗಾಗಿ ಸಕ್ಕರೆ ದಾಸ್ತಾನು ಮತ್ತು ಸಂಗ್ರಹಣೆ ಮಾನದಂಡ ಪರಿಷ್ಕರಣೆ

# ಸಕ್ಕರೆ ಸಂಗ್ರಹಣೆ 1,000 ಕ್ವಿಂಟಾಲ್, ದಾಸ್ತಾನಿಗೆ 15 ದಿನಗಳ ಕಾಲಮಿತಿ ನಿಗದಿಪಡಿಸಿದ ಕೇಂದ್ರ

**ಉದಯವಾಹಿನಿ, ನವದೆಹಲಿ/ಹುಬ್ಬಳ್ಳಿ**

ಹಬ್ಬದ ಋತುವಿನಲ್ಲಿ ಗ್ರಾಹಕರಿಗೆ ಸಕ್ಕರೆಯ ಸುಗಮ ಲಭ್ಯತೆಗಾಗಿ ಕೇಂದ್ರ ಸರ್ಕಾರ ಸಕ್ಕರೆ ದಾಸ್ತಾನು ಮತ್ತು ಸಂಗ್ರಹಣೆ ಮಾನದಂಡವನ್ನು ಪರಿಷ್ಕರಿಸಿದ್ದು, ದಾಸ್ತಾನು ಅವಧಿಯನ್ನು 15 ದಿನಗಳಿಗೆ ಮತ್ತು ಪ್ರಮಾಣವನ್ನು 1,000 ಕ್ವಿಂಟಾಲ್‌ಗೆ ನಿಗದಿಪಡಿಸಿದೆ.

ಹಬ್ಬದ ಸಮಯ ಹಾಗೂ ಹೊಸ ಸಕ್ಕರೆ ಋತುವಿನ ಆರಂಭದಲ್ಲಿ ಅಕ್ರಮವಾಗಿ ಹೆಚ್ಚಿನ ಸಂಗ್ರಹಣೆ ಹಾಗೂ ಬೆಲೆ ಏರಿಕೆ ತಡೆಗಟ್ಟುವ ನಿಟ್ಟಿನಲ್ಲಿ ಸಕ್ಕರೆ ದಾಸ್ತಾನು, ಸಂಗ್ರಹಣೆ ಮಾನದಂಡವನ್ನು ಅಕ್ಟೋಬರ್ 1ರಿಂದಲೇ ಅನ್ವಯಿಸುವಂತೆ ಪರಿಷ್ಕರಿಸಲಾಗಿದೆ. ಸಕ್ಕರೆ ವಿತರಕರ ದಾಸ್ತಾನು ಅವಧಿಯನ್ನು 15 ದಿನಗಳಿಗೆ ಮಿತಿಗೊಳಿಸಿದ್ದು, 1,000 ಕ್ವಿಂಟಾಲ್‌ಗಳಿಗೆ ದಾಸ್ತಾನು ಮಿತಿ ನಿಗದಿಪಡಿಸಿದೆ. ಕೋಲ್ಕತ್ತಾ ಮತ್ತದರ ವಿಸ್ತೃತ ಮಹಾನಗರ ಪ್ರದೇಶಗಳು ಹಾಗೂ ಅಸ್ಸಾಂ ರಾಜ್ಯವನ್ನು ಹೊರತುಪಡಿಸಿ ದೇಶದ ಉಳಿದೆಡೆ ಅ.15ರಿಂದ ನ.30ರವರೆಗೆ ಈ ಪರಿಷ್ಕೃತ ಮಾನದಂಡವನ್ನು ಜಾರಿಗೊಳಿಸಿದೆ. ಸಕ್ಕರೆ ಅಕ್ರಮ ದಾಸ್ತಾನು ಮತ್ತು ಬೆಲೆ ಸ್ಥಿರತೆ ಕಾಪಾಡುವ ಸದುದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಸಕ್ಕರೆ ವ್ಯಾಪಾರಿಗಳಲ್ಲಿ ದಾಸ್ತಾನು ಸ್ವೀಕರಿಸಿದ ದಿನಾಂಕದಿಂದ 15 ದಿನ ಮೀರಿದ ಅವಧಿಗೆ ದಾಸ್ತಾನು ಇಡುವಂತಿಲ್ಲ. ದೇಶಾದ್ಯಂತ ಯಾವುದೇ ಸಮಯ, ಸ್ಥಳದಲ್ಲಿ ಸಾವಿರ ಕ್ವಿಂಟಲ್‌ಗಿಂತ ಹೆಚ್ಚಿನ ಸಕ್ಕರೆ ದಾಸ್ತಾನು ಹೊಂದಿರಬಾರದು ಎಂದು ಕೇಂದ್ರ ಗ್ರಾಹಕ ವ್ಯವಹಾರ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಕೋಲ್ಕತ್ತಾ ಮತ್ತದರ ವಿಸ್ತೃತ ಮಹಾನಗರ ಪ್ರದೇಶಗಳು ಮತ್ತು ಅಸ್ಸಾಂ ರಾಜ್ಯಕ್ಕೆ ಮಾತ್ರ ಸಕ್ಕರೆ ದಾಸ್ತಾನು ಮಿತಿ 2,000 ಕ್ವಿಂಟಾಲ್‌ನಷ್ಟೇ ಇದೆ. ಕೋಲ್ಕತ್ತಾವು ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕದಿಂದ ಸಕ್ಕರೆ ಪಡೆಯುತ್ತಿದ್ದು, ಈಶಾನ್ಯ ಪ್ರದೇಶ ಸೇರಿದಂತೆ ದೇಶದ ಪೂರ್ವ ಭಾಗಕ್ಕೆ ಪೂರೈಸುತ್ತದೆ. ಭೌಗೋಳಿಕ ನಿರ್ಬಂಧ, ಸಾರಿಗೆ ಮತ್ತು ಈಶಾನ್ಯ ಪ್ರದೇಶದ ಗ್ರಾಹಕರ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಅಸ್ಸಾಂಗೆ ಹೆಚ್ಚಿನ ಮಿತಿ ನಿಗದಿಪಡಿಸಲಾಗಿದೆ ಎಂದು ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

1. ಅಕ್ಟೋಬರ್ 1ರಿಂದಲೇ ಅನ್ವಯಿಸುವಂತೆ ಪರಿಷ್ಕರಣೆ
2. ಬೆಲೆ ಸ್ಥಿರತೆ ಕಾಪಾಡುವ ಸದುದ್ದೇಶದಿಂದ ಜಾರಿ
3. 15 ದಿನ ಮೀರಿದ ಅವಧಿಗೆ ದಾಸ್ತಾನು ಇಡುವಂತಿಲ್ಲ.

**ಚಿಲ್ಲರೆ ಸಕ್ಕರೆ ಬೆಲೆ ಶೇ.15 ಇಳಿಕೆ:** ಕೇಂದ್ರ ಸರ್ಕಾರ ಸಮಯೋಚಿತವಾಗಿ ಸಕ್ಕರೆ ಸುಗಮ ವಹಿವಾಟು ದೃಷ್ಟಿಯಿಂದ ಕೈಗೊಂಡ ಕ್ರಮದಿಂದಾಗಿ ಸಕ್ಕರೆಯ ಸರಾಸರಿ ಚಿಲ್ಲರೆ ಬೆಲೆ ಶೇ.15ರಷ್ಟು ಇಳಿಕೆ ಕಂಡಿದೆ. ಎಕ್ಸ್‌-ಮಿಲ್ ಸಕ್ಕರೆ ಬೆಲೆ ಸಹ ಶೇ.28ರಷ್ಟು ಇಳಿದಿದೆಯಾದರೂ ಕಳೆದ ಮೂರು ವಾರಗಳಲ್ಲಿ ಸಕ್ಕರೆ ಬೆಲೆ ಸ್ಥಿರವಾಗಿದೆ. ಸಕ್ಕರೆ ಕಾರ್ಖಾನೆಗಳು, ಡೀಲರ್‌ಗಳು,

### ಎಲ್ ನಿನೊ ಪರಿಣಾಮ ಮೇಲ್ವಿಚಾರಣೆ

**ಕೆಲವು ಸಕ್ಕರೆ ಉತ್ಪಾದಿತ ಪ್ರದೇಶಗಳಲ್ಲಿ ಎಲ್ ನಿನೊ ಪರಿಣಾಮವನ್ನು ಕೇಂದ್ರ ಸರ್ಕಾರ ಮೇಲ್ವಿಚಾರಣೆ ಮಾಡುತ್ತಿದೆ ಮತ್ತು ಸಕ್ಕರೆ ದೇಶೀಯ ಲಭ್ಯತೆ, ಗ್ರಾಹಕರ ಹಿತಾಸಕ್ತಿ ಹಾಗೂ ಕಬ್ಬು ಬೆಳೆಗಾರರ ಹಿತ ಕಾಯುವಲ್ಲಿ ಸಮತೋಲನ ಕಾಯ್ದುಕೊಳ್ಳಲು ಸಕಾಲಿಕವಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಪ್ರಲ್ಹಾದ್ ಜೋಶಿ ಸ್ಪಷ್ಟಪಡಿಸಿದ್ದಾರೆ.**

ಸಗಟು ವ್ಯಾಪಾರಿಗಳು ಹಾಗೂ ಮಾರುಕಟ್ಟೆಗಳಲ್ಲಿ ಇತರೆ ವರ್ತಕರು ಹೆಚ್ಚಿನ ಸಕ್ಕರೆ ದಾಸ್ತಾನು, ಕೃತಕ ಅಭಾವ ಹಾಗೂ ಊಹಾತ್ಮಕ ವಹಿವಾಟನ್ನು ತಡೆಯಬೇಕೆಂದು ಸಚಿವ ಜೋಶಿ ನಿರ್ದೇಶನ ನೀಡಿದ್ದಾರೆ. ಸಕ್ಕರೆ ಉತ್ಪಾದನೆ ಆರಂಭಿಸಲು ಸೂಚನೆ: ಸಕ್ಕರೆ ಕಾರ್ಖಾನೆಗಳು ತಮ್ಮ ವ್ಯಾಪ್ತಿಯಲ್ಲಿ ಕೃಷಿ, ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ಉತ್ಪಾದನೆ ಪ್ರಾರಂಭಿಸಲು ಈಗಾಗಲೇ ಸೂಚಿಸಲಾಗಿದೆ. ಅಲ್ಲದೆ, ಆಯಾ ರಾಜ್ಯ ಸರ್ಕಾರಗಳು ಸಹ ಕ್ಷೇತ್ರದ ಪರಿಸ್ಥಿತಿಗಳ ಆಧಾರದ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದಿದ್ದಾರೆ. ದೇಶದ ಕಬ್ಬು ಬೆಳೆಗಾರರು ಮತ್ತು ಗ್ರಾಹಕರು ಭಾರತದ ಸಕ್ಕರೆ ನೀತಿಯ ಎರಡು ಕೇಂದ್ರ ಸ್ತಂಭಗಳು. ಕಬ್ಬು ಬೆಳೆಗಾರರಿಗೆ ಲಾಭದಾಯಕ ಆದಾಯ ದೊರಕಿಸಿಕೊಡುವಲ್ಲಿ ಕೇಂದ್ರ ಸರ್ಕಾರ ಬದ್ಧವಾಗಿದೆ. ಅಂತೆಯೇ ಬೆಲೆ ಏರಿಕೆಯಿಂದ ಗ್ರಾಹಕರನ್ನು ರಕ್ಷಿಸಲು ಮತ್ತು ದೇಶಾದ್ಯಂತ ಸಾಕಷ್ಟು ಸಕ್ಕರೆ ಲಭ್ಯತೆ ಇರಿಸಲೂ ಬದ್ಧವಾಗಿದೆ ಎಂದು ಸಚಿವ ಪ್ರಲ್ಹಾದ್ ಜೋಶಿ ಪುನರುಚ್ಚರಿಸಿದ್ದಾರೆ.

## ಗುಡ್ಡಳ್ಳಿಯ ಸಮಗ್ರ ಅಭಿವೃದ್ಧಿಗೆ ಯೋಜನೆ ತಯಾರಿಸಿ ಪ್ರಸ್ತಾವನೆ ಸಲ್ಲಿಸಿ

**ಉದಯವಾಹಿನಿ, ಕಾರವಾರ**

ನಗರಸಭಾ ವ್ಯಾಪ್ತಿಯಲ್ಲಿದ್ದರೂ ಕೂಡ ಅಗತ್ಯ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರುವ ಕುಗ್ರಾಮ ಗುಡ್ಡಳ್ಳಿಯ ಸಮಗ್ರ ಅಭಿವೃದ್ಧಿಯ ಕುರಿತಂತೆ ವಿವರವಾದ ಯೋಜನೆ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಕರ್ನಾಟಕ ಲೋಕಾಯುಕ್ತದ ಉಪಲೋಕಾಯುಕ್ತರಾದ ಗೌರವಾನ್ವಿತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಗುರುವಾರ ಗುಡ್ಡಳ್ಳಿ ಗ್ರಾಮಕ್ಕೆ ಖುದ್ದು ಭೇಟಿ ನೀಡಿದ ಅವರು, ಅಲ್ಲಿನ ರಸ್ತೆ ಸೇರಿದಂತೆ ನಾನಾ ಮೂಲಭೂತ ಸಮಸ್ಯೆಗಳ ಕುರಿತು ಸಾರ್ವಜನಿಕರೊಂದಿಗೆ ಸಮಾಲೋಚನೆ ನಡೆಸಿ ಅಹವಾಲುಗಳನ್ನು ಸ್ವೀಕರಿಸಿದರು.

**ಉಪಲೋಕಾಯುಕ್ತ ನ್ಯಾ. ಕೆ.ಎನ್. ಫಣೀಂದ್ರ ಸೂಚನೆ**

**ರಸ್ತೆ ಸಂಪರ್ಕ ಮತ್ತು ಪ್ರಸ್ತಾವನೆ:** ಗ್ರಾಮದ ಜನತೆಯ ನೂರಾರು ವರ್ಷಗಳ ಪ್ರಮುಖ ಬೇಡಿಕೆಯಾಗಿರುವ ರಸ್ತೆ ಸಂಪರ್ಕ ಕಲ್ಪಿಸುವ ಕುರಿತಂತೆ ಲೋಕೋಪಯೋಗಿ, ಅರಣ್ಯ ಇಲಾಖೆ ಹಾಗೂ ನಗರಸಭೆಯ ಅಧಿಕಾರಿಗಳು ಒಟ್ಟಾಗಿ ಯೋಜನೆಯನ್ನು ಸಿದ್ಧಪಡಿಸಬೇಕು. ಅಂದಾಜು ವೆಚ್ಚದ ಮಾಹಿತಿಯೊಂದಿಗೆ 15 ದಿನಗಳ ಒಳಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅದರ ಪ್ರತಿಯನ್ನು ಲೋಕಾಯುಕ್ತ ಸಂಸ್ಥೆಗೆ ಕಳುಹಿಸುವಂತೆ ತಿಳಿಸಿದರು. ಸುಮೋಟೋ ಪ್ರಕರಣ ಹಾಗೂ ಮುಖ್ಯಮಂತ್ರಿಗಳ ಜೊತೆ ಚರ್ಚೆ: ಲೋಕಾಯುಕ್ತ ಸಂಸ್ಥೆಯಲ್ಲಿ ಈ ಪ್ರಕರಣವನ್ನು ಸುಮೋಟೋ (ಸ್ವಯಂ ಪ್ರೇರಿತ) ಆಗಿ ದಾಖಲಿಸಿಕೊಂಡು, ಗ್ರಾಮದ ಸಮಗ್ರ ಅಭಿವೃದ್ಧಿಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಅಗತ್ಯವಿದ್ದರೆ ಈ ಕುರಿತು ಖುದ್ದು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಇಲ್ಲಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವುದಾಗಿ ಉಪಲೋಕಾಯುಕ್ತರು ಭರವಸೆ ನೀಡಿದರು.

**ಕುಡಿಯುವ ನೀರು ಮತ್ತು ಸಾರಿಗೆ ವ್ಯವಸ್ಥೆ:** ಗ್ರಾಮದ ಜನತೆಗೆ ಶಾಶ್ವತ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಸೂಕ್ತ ಯೋಜನೆ ರೂಪಿಸಲು ಸೂಚಿಸಲಾಯಿತು. ಅಲ್ಲದೇ, ಇಲ್ಲಿನ ಮಕ್ಕಳು ಪ್ರತಿದಿನ ಶಿಕ್ಷಣಕ್ಕಾಗಿ ಕಡಿದಾದ ರಸ್ತೆಯಲ್ಲಿ 8 ಕಿ.ಮೀ ಗೂ ಅಧಿಕ ದೂರ ಅರಣ್ಯ ಪ್ರದೇಶದಲ್ಲಿ ಸಂಚರಿಸಬೇಕಿರುವುದರಿಂದ, ಇವರಿಗೆ ಅಗತ್ಯ ವಾಹನ ವ್ಯವಸ್ಥೆ ಕಲ್ಪಿಸಲು ತಿಳಿಸಿದರು.

## ಚಂಡಮಾರುತ ಕುರಿತ ಅಣಕು ಕಾರ್ಯಚರಣೆ ಯಶಸ್ವಿ

**ಉದಯವಾಹಿನಿ, ಕಾರವಾರ**

ಜಿಲ್ಲೆಯಲ್ಲಿ ಸಂಭವಿಸಬಹುದಾದ ಚಂಡಮಾರುತದಂತಹ ವಿಪತ್ತುಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ಸಾಮರ್ಥ್ಯವನ್ನು ಪರೀಕ್ಷಿಸುವ ಉದ್ದೇಶದಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಗುರುವಾರ ಆಯೋಜಿಸಿದ್ದ ಅಂತರರಾಜ್ಯ ಚಂಡಮಾರುತ ಅಣಕು ಕಾರ್ಯಾಚರಣೆ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ. ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಕಂದಾಯ, ಪೊಲೀಸ್, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಆರೋಗ್ಯ, ಎನ್‌ಡಿಆರ್‌ಎಫ್, ಬಂದರು, ಸ್ಥಳೀಯ ಸಂಸ್ಥೆಗಳು, ನೌಕಾ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಅಣಕು ಕಾರ್ಯಾಚರಣೆ ಆಯೋಜಿಸಿದ್ದು, ಚಂಡಮಾರುತದ ಸಂದರ್ಭದಲ್ಲಿ ಉಂಟಾಗಬಹುದಾದ ಬೃಹತ್ ಮಳೆ, ಬಿರುಗಾಳಿ, ಸಮುದ್ರದ ಅಬ್ಬರ, ಕಡಲ ಕೊರೆತ, ಪ್ರವಾಹ, ಮರಗಳ ಉರುಳುವಿಕೆ ಹಾಗೂ ವಿದ್ಯುತ್ ಕಂಬಗಳಿಗೆ ಹಾನಿ ಸೇರಿದಂತೆ ವಿವಿಧ ತುರ್ತು ಪರಿಸ್ಥಿತಿಗಳನ್ನು ಅಣಕು ಕಾರ್ಯಾಚರಣೆಯಲ್ಲಿ ಸೃಷ್ಟಿಸಿ, ಅವುಗಳನ್ನು ನಿಭಾಯಿಸುವ ಇಲಾಖೆಗಳ ಸಿದ್ಧತೆಯನ್ನು ಪರಿಶೀಲಿಸಲಾಯಿತು. ಜಿಲ್ಲೆಗೆ ಚಂಡಮಾರುತ ಅಪ್ಪಳಿಸಬಹುದಾದ ಸಂದರ್ಭವನ್ನು ಸೃಷ್ಟಿಸಿಕೊಂಡು ನಡೆಸಿದ ಈ ಕಾರ್ಯಚರಣೆಯಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಚಂಡಮಾರುತದ ಎಚ್ಚರಿಕೆಯ ಮಾಹಿತಿ ಸ್ವೀಕೃತಿಯಾದ ಕೂಡಲೇ, ಜಿಲ್ಲಾಧಿಕಾರಿಗಳು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ತುರ್ತು ಸಭೆ ನಡೆಸಿ, ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ತುರ್ತು ಅಗತ್ಯ ಕಾರ್ಯಚರಣೆ ಕೈಗೊಳ್ಳುವಂತೆ ಸೂಚನೆ ನೀಡಿದರು.

## ಮಾಂಜಾ ದಾರಕ್ಕೆ ವಿದ್ಯಾರ್ಥಿ ಬಲಿ: ಪರೀಕ್ಷೆಗೆ ಹೋದವ ಹೆಣವಾಗಿ ಮರಳಿದ

**ಉದಯವಾಹಿನಿ, ಬೆಳಗಾವಿ**

ಕುತ್ತಿಗೆಗೆ ಮಾಂಜಾ ದಾರ ಸಿಲುಕಿ, ಪರೀಕ್ಷೆಗೆ ಹೋಗಿದ್ದ ವಿದ್ಯಾರ್ಥಿಯೊಬ್ಬ ಮೃತಪಟ್ಟಿರುವ ದಾರುಣ ಘಟನೆ ಬೆಳಗಾವಿ ಗಾಂಧಿ ನಗರದ ಬಳಿಯ ಪುಣಾ – ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ನಿನ್ನೆ(ಅಕ್ಟೋಬರ್ 1) ಸಂಜೆ ನಡೆದಿದೆ.

ಬೆಳಗಾವಿ ಮಹಾಂತೇಶ ನಗರದ ಧ್ರುವ ಸಂತೋಷ ಕಾರ್ಜನಿಗಿ (16) ಮೃತ ವಿದ್ಯಾರ್ಥಿ. ಖಾಸಗಿ ಕಾಲೇಜಿನಲ್ಲಿ ಐಟಿಐ ವ್ಯಾಸಂಗ ಮಾಡುತ್ತಿದ್ದ ಧ್ರುವ, ಪರೀಕ್ಷೆ ಇರುವ ಹಿನ್ನೆಲೆಯಲ್ಲಿ ಸಂಬಂಧಿಕರೊಬ್ಬರ ಬೈಕ್ ತೆಗೆದುಕೊಂಡು ಕಾಲೇಜಿಗೆ ಹೋಗಿದ್ದ. ಪರೀಕ್ಷೆ ಬರೆದು ಬೈಕ್‌ನಲ್ಲಿ ವಾಪಸ್ ಮನೆಗೆ ಬರುವಾಗ, ಕುತ್ತಿಗೆಗೆ ಮಾಂಜಾ ದಾರ ಸಿಕ್ಕಿದೆ. ಇದರಿಂದ ತೀವ್ರ ರಕ್ತಸ್ರಾವದಿಂದ ಬೈಕ್ ಮೇಲೆಯೇ ಪ್ರಾಣ ಬಿಟ್ಟಿದ್ದಾನೆ. ಹೀಗೆ ಪರೀಕ್ಷೆ ಬರೆಯಲು ಕಾಲೇಜಿಗೆ ಹೋಗಿದ್ದ ಮಗ, ಮನೆಗೆ ಹೆಣವಾಗಿ ಮರಳಿರುವುದು ಕುಟುಂಬಸ್ಥರನ್ನು ಆಘಾತಗೊಳಿಸಿದ್ದು, ಆಕ್ರಂದನ ಮುಗಿಲು ಮುಟ್ಟಿದೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಈ ಬಗ್ಗೆ ಬೆಳಗಾವಿ ಉತ್ತರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಧ್ರುವ ಅವರ ಕುಟುಂಬಕ್ಕೆ ಆಧಾರವಾಗಿದ್ದ. ಹಗಲು ಕಾಲೇಜಿಗೆ ತೆರಳಿ, ರಾತ್ರಿ ಕೆಲಸಕ್ಕೆ ಹೋಗುತ್ತಿದ್ದ. ಕುಟುಂಬದ ನಿರ್ವಹಣೆಗೆ ನೆರವಾಗುತ್ತಿದ್ದ. ಈಗ



ಉದಯವಾಹಿನಿ ಚಿತ್ರ

ಅವನನ್ನು ಕಳೆದುಕೊಂಡ ಕುಟುಂಬಕ್ಕೆ ದಿಕ್ಕು ತೋಚದಂತೆ ಆಗಿದೆ. ಸಂಕಷ್ಟದಲ್ಲಿರುವ ಕುಟುಂಬಕ್ಕೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು. ಜೊತೆಗೆ ಈ ರೀತಿ ಘಟನೆಗಳು ಮರುಕಳಿದಂತೆ ಮಾಂಜಾ ದಾರವನ್ನು ಕಟ್ಟು ನಿಟ್ಟಾಗಿ ನಿಷೇಧಿಸಬೇಕು ಎಂದು ಸಂಬಂಧಿಕರು ಆಗ್ರಹಿಸಿದ್ದಾರೆ. ಬೆಳಗಾವಿಯಲ್ಲಿ ಮಾಂಜಾ ದಾರಕ್ಕೆ ವಿದ್ಯಾರ್ಥಿ ಮೃತಪಟ್ಟಿರುವ ವಿಚಾರಕ್ಕೆ ಮೇಯರ್ ಪ್ರೀತಿ ಕಾಮಕರ ಪ್ರತಿಕ್ರಿಯಿಸಿದ್ದು, ಮಾಂಜಾ ದಾರದಿಂದ ಧ್ರುವ ಎಂಬಾತನ ಸಾವಾಗಿದೆ. ಮಾಂಜಾ ದಾರ ಮಾರಾಟ ಮಾಡಿದರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ. ಅಂಗಡಿಯಲ್ಲಿ ಯಾರಾದರೂ ಮಾರಾಟ ಮಾಡಿದರೆ ಅಂತವರ ವಿರುದ್ಧ ಕಠಿಣ ಕ್ರಮ ನಿಶ್ಚಿತ. ಮಹಾನಗರ ಪಾಲಿಕೆಯಿಂದಲೂ ಬ್ಯಾನ್ ಮಾಡಲು ಸಭೆ ಮಾಡುತ್ತೇವೆ. ಪಾಲಿಕೆ ಆಯುಕ್ತರಿಗೆ ಅಂಗಡಿಗಳ ತಪಾಸಣೆ ನಡೆಸುವಂತೆ ಸೂಚನೆ ಕೊಡುತ್ತೇನೆ. ಜೊತೆಗೆ ಮೃತ ವಿದ್ಯಾರ್ಥಿ ಮನೆಗೆ ತೆರಳಿ ಕುಟುಂಬಸ್ಥರಿಗೆ ಸಾಂತ್ವನ ಹೇಳುತ್ತೇವೆ ಎಂದರು.

## ಕೊಡಲಿಯಿಂದ ಹೊಡೆದು ಮಗನ ಕೊಂದ ತಂದೆಗೆ ಜೀವಾವಧಿ ಶಿಕ್ಷೆ

**ಉದಯವಾಹಿನಿ, ಬಾಗಲಕೋಟೆ**

ಮಗನನ್ನೇ ಕೊಡಲಿಯಿಂದ ಹೊಡೆದು ಕೊಲೆ ಮಾಡಿದ ಪ್ರಕರಣದಲ್ಲಿ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ, ತಂದೆಗೆ ಬಾಗಲಕೋಟೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ 25 ಸಾವಿರ ರೂಪಾಯಿ ದಂಡ ವಿಧಿಸಿದೆ. ಬೀಳಗಿ ಪೊಲೀಸ್ ಠಾಣಾ ವ್ಯಾಪ್ತಿಯ ಬಿಸನಾಳ ಗ್ರಾಮದ ಡೊಂಗೆಪ್ಪ ಲಕ್ಕಪ್ಪ ಬೀಳಗಿ ಎಂಬಾತನೇ ತನ್ನ ಮಗ ಕರಿಯಪ್ಪ ಡೊಂಗೆಪ್ಪ ಬೀಳಗಿ (21)ಯನ್ನು ಕೊಲೆ ಮಾಡಿದ ಆರೋಪದ ಮೇಲೆ ಶಿಕ್ಷೆಗೆ ಗುರಿಯಾದ ವ್ಯಕ್ತಿ.

**ಘಟನೆ ಹಿನ್ನೆಲೆ:** 2024ರ ಮೇ 13ರಂದು ರಾತ್ರಿ ಸುಮಾರು 9:30ರ ವೇಳೆಗೆ ಕರಿಯಪ್ಪ ಮನೆಯಲ್ಲಿ ಊಟ ಮಾಡುತ್ತಿದ್ದಾಗ, ಆತ ಕೆಲಸ ಮಾಡುತ್ತಿಲ್ಲ ಎಂಬ ವಿಚಾರವಾಗಿ ತಂದೆ ಡೊಂಗೆಪ್ಪ ಆತನೊಂದಿಗೆ ಜಗಳವಾಡಿದ್ದ. ಬಳಿಕ ತಡರಾತ್ರಿ ಸುಮಾರು 11:50ರ ವೇಳೆಗೆ ಬಿಸನಾಳ ಗ್ರಾಮದ ಜಮೀನಿನ ಮನೆಯ ಮುಂದಿನ ಕಟ್ಟೆಯ ಮೇಲೆ ಕರಿಯಪ್ಪ ಮಲಗಿದ್ದ ಸಂದರ್ಭದಲ್ಲಿ, ಕೊಡಲಿಯಿಂದ ಆತನ ಕುತ್ತಿಗೆ, ಗಲ್ಲ, ಹಾಗೂ ಹಣೆಯ ಭಾಗಕ್ಕೆ ಹೊಡೆದು ಗಂಭೀರ ಗಾಯಗೊಳಿಸಿ ಡೊಂಗೆಪ್ಪ ಕೊಲೆ ಮಾಡಿದ್ದಾನೆ ಎಂದು ಪ್ರಕರಣ ದಾಖಲಾಗಿತ್ತು. ಈ ಕುರಿತು ಬೀಳಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ಪೊಲೀಸರು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ ಆರೋಪ ಸಾಬೀತಾಗಿದೆ ಎಂದು ತೀರ್ಮಾನಿಸಿದೆ. ತೀರ್ಪು ಪ್ರಕಟಿಸಿದ ನ್ಯಾಯಾಲಯ, ಡೊಂಗೆಪ್ಪ ಲಕ್ಕಪ್ಪ ಬೀಳಗಿಗೆ ಕಲಂ 302ರಡಿ ಜೀವಾವಧಿ ಶಿಕ್ಷೆ ಹಾಗೂ 25,000 ರೂ. ದಂಡ ವಿಧಿಸಿದೆ. ದಂಡದ ಮೊತ್ತದಲ್ಲಿ 20,000 ರೂ.ಗಳನ್ನು ದೂರುದಾರರಿಗೆ ಪರಿಹಾರವಾಗಿ ನೀಡುವಂತೆ ಆದೇಶಿಸಿದೆ.

## ಭೋಪಾಲ್‌ನಲ್ಲಿ ಗದಗ ಕೆಆರ್‌ಐಡಿಎಲ್ ಎಂಜಿನಿಯರ್ ಪರ್ವೇಜ್ ಸುಳಿವು ಪತ್ತೆ

**ಉದಯವಾಹಿನಿ, ಗದಗ**

ಕಳೆದ 18 ದಿನಗಳಿಂದ ನಾಪತ್ತೆಯಾಗಿರುವ ಗದಗ ಕೆಆರ್‌ಐಡಿಎಲ್‌ನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪರ್ವೇಜ್ ಧಾರವಾಡ ಅವರ ಪತ್ತೆ ಕಾರ್ಯದಲ್ಲಿ ಗದಗ ಪೊಲೀಸರಿಗೆ ಮಹತ್ವದ ಸುಳಿವು ಸಿಕ್ಕಿದೆ. ಭೋಪಾಲ್ ರೈಲು ನಿಲ್ದಾಣದ ಸಿಸಿಟಿವಿ ಕ್ಯಾಮರಾದಲ್ಲಿ ಪರ್ವೇಜ್ ಓಡಾಡುತ್ತಿರುವ ದೃಶ್ಯ ಪತ್ತೆಯಾಗಿದ್ದು, ಇದೀಗ ಪೊಲೀಸರು ಆ ಸುಳಿವಿನ ಆಧಾರದಲ್ಲಿ ಶೋಧ ಕಾರ್ಯ ಮುಂದುವರಿಸಿರುವುದಾಗಿ ಎಂದು ಪೊಲೀಸರು ತಿಳಿಸಿದ್ದಾರೆ. ಸೆ.13ರಂದು ಕಚೇರಿ ಸಭೆಯ ನಿಮಿತ್ತ ಗದಗದಿಂದ ಬೆಂಗಳೂರಿಗೆ ರೈಲಿನಲ್ಲಿ ತೆರಳಿದ್ದ ಪರ್ವೇಜ್, ಬಳಿಕ ಅಲ್ಲಿಂದ ವಿಜಯವಾಡಕ್ಕೆ ತೆರಳಿರುವ ಮಾಹಿತಿ ಪೊಲೀಸರಿಗೆ ಲಭ್ಯವಾಗಿತ್ತು. ವಿಜಯವಾಡದವರೆಗೆ ಅವರ ಚಲನವಲನವನ್ನು ಬೆನ್ನತ್ತಿದ ಪೊಲೀಸರು, ನಂತರದ ಪ್ರಯಾಣದ ಕುರಿತು ನಿರಂತರವಾಗಿ ರೈಲು ನಿಲ್ದಾಣಗಳ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸುತ್ತಿದ್ದ ಬಗ್ಗೆ ಪೊಲೀಸರು ಮಾಹಿತಿ ನೀಡಿದ್ದಾರೆ. ವಿಜಯವಾಡದ ಬಳಿಕ ಪರ್ವೇಜ್ ಭೋಪಾಲ್ ಕಡೆಗೆ ಪ್ರಯಾಣಿಸಿರುವ ಸುಳಿವು ಪೊಲೀಸರಿಗೆ ಸಿಕ್ಕಿದ್ದು, 1200 ಕಿ.ಮೀ. ದೂರದ ಪ್ರಯಾಣದ ಹಾದಿ ಪೊಲೀಸರು ಪತ್ತೆಹಚ್ಚಿದ್ದಾರೆ. ಮೊಬೈಲ್ ಫೋನ್ ಸ್ವಿಚ್‌ಆಫ್ ಆಗಿರುವುದರಿಂದ ನೇರ ಲೊಕೇಶನ್ ಪತ್ತೆಹಚ್ಚಲು ಸಾಧ್ಯವಾಗದಿದ್ದರೂ, ರೈಲು ನಿಲ್ದಾಣಗಳ ಸಿಸಿಟಿವಿ ದೃಶ್ಯಗಳ ಮೂಲಕ ಅವರ ಚಲನವಲನ ಗುರುತಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

### 600ಕ್ಕೂ ಅಧಿಕ ಹಸುಗಳು ದಾಂಗುಡಿ–ಮೇವಿಗಾಗಿ ಊರಿಂದ ಊರಿಗೆ ಅಲೆಯುತ್ತಿರುವ ಗೌಳಿಗರು!

# ಬರದ ಹಿನ್ನೆಲೆ ಹಾವೇರಿ ಜಿಲ್ಲೆಗೆ ಬಂದ ಗಂಗಾವತಿ ಹಸುಗಳು

**ಉದಯವಾಹಿನಿ, ಹಾವೇರಿ**

ರಾಜ್ಯಾದ್ಯಂತ ಬರಗಾಲದ ಛಾಯೆ ಆವರಿಸಿದೆ. ಮಳೆಗಾಗಿ ಜನರು ಆಕಾಶವನ್ನು ನೋಡುವಂತಾಗಿದೆ. ಈ ನಡುವೆ ಹಾವೇರಿ ಜಿಲ್ಲೆಯಲ್ಲಿ ಇದೀಗ ಗಂಗಾವತಿ ಹಸುಗಳ ಹಿಂಡೇ ಕಾಣಿಸಲಾರಂಭಿಸಿದೆ. ಹಾವೇರಿ ನಗರದ ಹೊರವಲಯ ಸೇರಿದಂತೆ ಮೇವಿಲ್ಲದ ಜಮೀನುಗಳಲ್ಲಿ 600ಕ್ಕೂ ಅಧಿಕ ಹಸುಗಳು ದಾಂಗುಡಿ ಇಟ್ಟಿದ್ದು, ಹುಲ್ಲಿದ್ದ ಕಡೆಯಲ್ಲೆಲ್ಲ ಮೇಯುತ್ತಿವೆ.

ಶ್ವೇತವರ್ಣದ ಈ ಹಸುಗಳೆಲ್ಲ ಜವಾರಿ ತಳಿಯಾದ ಖಿಲಾರಿ ಜಾತಿಗೆ ಸೇರಿವೆ. ಈ ಹಸುಗಳನ್ನು ಕಾಯಲು 10ಕ್ಕೂ ಅಧಿಕ ಗೌಳಿಗಳಿದ್ದು, ಬೆಳಗ್ಗೆ 9ರಿಂದ ಸಂಜೆ 7ರವರೆಗೆ ಮೇಯಿಸುತ್ತಾರೆ. ಈ ಹಸುಗಳು ಕೊಪ್ಪಳ ಜಿಲ್ಲೆ ಗಂಗಾವತಿಯ ತಾಲೂಕಿನವುಗಳಾಗಿವೆ. ಈ ಬಾರಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬರ ಆವರಿಸಿದೆ. ಪ್ರತಿವರ್ಷಕ್ಕಿಂತ ಅಂದರೆ ಸರಾಸರಿಗಿಂತ ತೀರಾ ಕಡಿಮೆ ಮಳೆ ಬಿದ್ದಿದೆ. ಇನ್ನು ಕೊಪ್ಪಳ ಜಿಲ್ಲೆಯೂ ಈ ಬಾರಿ ಭೀಕರ ಬರಗಾಲಕ್ಕೆ ತುತ್ತಾಗಿದೆ. ಗಂಗಾವತಿ ಸುತ್ತಮುತ್ತ ಹಸುಗಳಿಗೆ ಸರಿಯಾದ ಮೇವು, ಕುಡಿಯಲು ಸಮರ್ಪಕ ನೀರಿಲ್ಲದ ಕಾರಣ ಗೌಳಿಗರು ಇದೀಗ ಹಾವೇರಿ ಜಿಲ್ಲೆಗೆ ಹಸುಗಳೊಂದಿಗೆ ವಲಸೆ ಬಂದಿದ್ದಾರೆ.

1. ಈ ಬಾರಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬರ
2. ಹಸುಗಳಿಗೆ ಸರಿಯಾದ ಮೇವು, ಕುಡಿಯಲು ನೀರಿಲ್ಲ
3. ಕೊಪ್ಪಳ ಜಿಲ್ಲೆಯೂ ಈ ಬಾರಿ ಭೀಕರ ಬರಗಾಲ

ಪ್ರತಿ ಬಾರಿ ಬರಗಾಲ ಬಿದ್ದಾಗ ಕೊಪ್ಪಳ ಜಿಲ್ಲೆಯಲ್ಲಿ ಮೇವು ನೀರಿಗೆ ಕೊರತೆ ಉಂಟಾಗುತ್ತದೆ. ಅಂತಹ ಸಮಯದಲ್ಲಿ ಈ ಗೌಳಿಗರು ಬಳ್ಳಾರಿ ಜಿಲ್ಲೆ, ಪಕ್ಕದ ಆಂಧ್ರಪ್ರದೇಶದ ಜಿಲ್ಲೆಗಳಿಗೂ ಹಸುಗಳ ಜತೆ ಗುಳೆ ಹೊರಡುತ್ತಾರೆ. ಎಲ್ಲಿ ಹಸಿರು ಕಾಣುತ್ತದೆ ಅಲ್ಲೆಲ್ಲ ಮೇಯಿಸಿಕೊಂಡು ಮಳೆಗಾಲದವರೆಗೂ ಕಾಲ ದೂಡುತ್ತಾರೆ. ಮಳೆಗಾಲ ಆರಂಭವಾದ ತಕ್ಷಣ ಮತ್ತೆ ತಮ್ಮ ಊರಿಗೆ ಮರಳುತ್ತಾರೆ.

**15 ದಿನದಿಂದ ಜಿಲ್ಲೆಯಲ್ಲಿ ಓಡಾಟ:** ಕೊಪ್ಪಳ ಜಿಲ್ಲೆಯಲ್ಲಿ ವಿವಿಧೆಡೆ ಬರಗಾಲ ಇದೆ. ಇದರಿಂದಾಗಿ ಮೇವು ಹಾಗೂ ಕುಡಿಯುವ ನೀರಿನ ಕೊರತೆಯಾಗಿದ್ದರಿಂದ ಈ ಗೌಳಿಗರು ಹಸುಗಳನ್ನು ಹೊಡೆದುಕೊಂಡು ಬಂದಿದ್ದಾರೆ. ಆರಂಭದಲ್ಲಿ ಶಿಗ್ಗಾಂವ್, ಸವಣೂರು ತಾಲೂಕುಗಳಲ್ಲಿ ಕಾಣಿಸಿಕೊಂಡ ಗೌಳಿಗ ಕುಟುಂಬಗಳು ನಂತರ ಹಾನಗಲ್ ತಾಲೂಕಿನ ವಿವಿಧೆಡೆ ಹಸುಗಳನ್ನು ಮೇಯಿಸಿಕೊಂಡು ಬರುತ್ತಿದ್ದಾರೆ.



ಉದಯವಾಹಿನಿ ಚಿತ್ರ

> ನಮ್ಮೂರಲ್ಲಿ ಮಳೆಯಿಲ್ಲದ ಕಾರಣ ಇಲ್ಲಿಗೆ ಬಂದಿದ್ದೇವೆ. ಸುಮಾರು 500 ದನಕರುಗಳೊಂದಿಗೆ ಹಾವೇರಿ ಜಿಲ್ಲೆಗೆ ಆಗಮಿಸಿದ್ದೇವೆ. ಕೊಪ್ಪಳದಿಂದ ಕಪ್ಪತ್ತಗುಡ್ಡಕ್ಕೆ ಬಂದು ಅಲ್ಲಿ ಒಂದು ತಿಂಗಳು ಇದ್ವಿ. ಅಲ್ಲಿಂದ ಮೇಯಿಸಿಕೊಂಡು ಇಲ್ಲಿಗೆ ಆಗಮಿಸಿದ್ದೇವೆ. ಈ ವರ್ಷ ಕೊಪ್ಪಳದಲ್ಲಿ ಬರಗಾಲ ಬಂದಿದ್ದಕ್ಕೆ ಈ ಕಡೆ ಬಂದಿದ್ದೇವೆ. ಇಲ್ಲದಿದ್ದರೆ ಆಂಧ್ರಪ್ರದೇಶದ ಕಡೆ ಹೋಗುತ್ತಿದ್ದೆವು. ಎಲ್ಲ ಆಕಳುಗಳು ಜವಾರಿ ತಳಿಯ ಹಸುಗಳು. ಹೋರಿ ಕರುಗಳನ್ನು ಕೊಡುತ್ತೇವೆ. ಆಕಳು ಕರುಗಳನ್ನು ನಾವೇ ಇಟ್ಟುಕೊಳ್ಳುತ್ತೇವೆ.
>
> – ಮುದುಕಣ್ಣ, ಗೌಳಿಗ ಕುಟುಂಬದ ಸದಸ್ಯ

ಕಳೆದ ಎರಡ್ಮೂರು ದಿನಗಳಿಂದ ಹಾವೇರಿ ಹೊರವಲಯದಲ್ಲಿ ಬೀಡುಬಿಟ್ಟಿದ್ದಾರೆ. ಮೆಕ್ಕೆಜೋಳ ಬೆಳೆದ ಕಟಾವ್ ಮಾಡಿದ ಜಮೀನುಗಳಲ್ಲಿ ಮತ್ತು ಸೋಯಾಬಿನ್ ಕಟಾವ್ ಮಾಡಿದ ಜಮೀನುಗಳಲ್ಲಿ ಹಸುಗಳನ್ನು ಮೇಯಲು ಬಿಡುತ್ತಿದ್ದಾರೆ. ಹಸಿರು ಮೇವು ನದಿ ಗುಂಡಿಗಳಲ್ಲಿರುವ ನೀರು ಕುಡಿಸಿಕೊಂಡು ತಮ್ಮ ಹಸುಗಳ ಪಾಲನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ನಮ್ಮ ಜಿಲ್ಲೆಯಲ್ಲಿ ದನಗಳಿಗೆ ಮೇವಿಲ್ಲ, ನೀರಿಲ್ಲ. ಹೀಗಾಗಿ ನಾವು ಹಸುಗಳನ್ನು ಹೊಡೆದುಕೊಂಡು ಹಾವೇರಿ ಜಿಲ್ಲೆಗೆ ಆಗಮಿಸಿದ್ದೇವೆ. ನಮ್ಮ ದನಕರುಗಳನ್ನು ಉಳಿಸಿಕೊಳ್ಳುವುದು ದೊಡ್ಡ ಸಮಸ್ಯೆಯಾಗಿದೆ ಎನ್ನುತ್ತಾರೆ ಈ ಗೌಳಿಗರು.

### ಗೌಳಿಗರೇ ವೈದ್ಯರು

600ಕ್ಕೂ ಅಧಿಕ ಜವಾರಿ ಹಸುಗಳಿಗೆ ಗೌಳಿಗರೇ ವೈದ್ಯರು. ಯಾವುದಾದರೂ ರೋಗ ರುಜಿನ ಬಿದ್ದರೆ ತಾವೇ ಚಿಕಿತ್ಸೆ ನೀಡುತ್ತಾರೆ. ಜವಾರಿ ತಳಿಯ ಈ ದನಕರುಗಳು ಬಿಳಿ ಬಣ್ಣದಿಂದ ಕೂಡಿದ್ದು, ಗಟ್ಟಿಮುಟ್ಟಾಗಿವೆ. ಹೀಗಾಗಿ ಹೋರಿಗಳನ್ನು ರೈತರು ಕೃಷಿ ಕೆಲಸಕ್ಕೆ ಖರೀದಿಸುತ್ತಾರೆ. ಆದರೆ, ಯಾರಿಗೂ ಈ ಗೌಳಿಗರು ಹೆಣ್ಣು ಕರು ಮಾರುವುದಿಲ್ಲ. ನೀರು, ಮೇವು ಸಿಗುವ ಕಡೆ ರಾತ್ರಿ 8ರಿಂದ ಬೆಳಗ್ಗೆ 8ರವರೆಗೆ ದನಕರುಗಳನ್ನು ಒಂದೆಡೆ ಕೂಡಿಹಾಕುತ್ತೇವೆ. ಸಗಣಿ, ಗಂಜಳದಿಂದ ಕೃಷಿ ಭೂಮಿ ಫಲವತ್ತಾಗುತ್ತದೆ. ಈ ಕೊಪ್ಪಳದ ಹಸುಗಳನ್ನು ಸ್ಥಳೀಯರು ಆಚ್ಚರಿಯಿಂದ ನೋಡುತ್ತಿದ್ದಾರೆ. ನಮ್ಮಲ್ಲಿ ಕುರಿ ಕಾಯುವವರುಕುರಿಮಂದೆಗಳನ್ನು ಈ ರೀತಿ ಹೊಡೆದುಕೊಂಡು ಹೋಗುತ್ತಿದ್ದರು. ಇವರು ಸಾವಿರಾರು ಹಸುಗಳನ್ನೇ ಈ ರೀತಿ ಹೊಡೆದು ಕೊಂಡು ಹೋಗುತ್ತಿದ್ದಾರೆ ಎನ್ನುತ್ತಾರೆ ಗ್ರಾಮಸ್ಥರು.

**ಹಸು ನಿಲ್ಲಿಸಿಕೊಳ್ಳಲು ಹಣ:** ಈ ರೀತಿ ಹಸುಗಳನ್ನು ತಮ್ಮ ಗದ್ದೆಗಳಲ್ಲಿ ನಿಲ್ಲಿಸಿಕೊಳ್ಳಲು ಇಲ್ಲಿಯ ರೈತರು ಗೌಳಿಗರಿಗೆ ದಿನಕ್ಕೆ 5 ಸಾವಿರದಿಂದ 6 ಸಾವಿರ ರೂಪಾಯಿವರೆಗೆ ಹಣ ನೀಡುತ್ತಿದ್ದಾರೆ. ಇವೆಲ್ಲ ಜವಾರಿ ಹಸುಗಳು, ಇವುಗಳ ಸಗಣಿ ಮತ್ತು ಗೋಮೂತ್ರ ನಮ್ಮ ಜಮೀನಿಗೆ ಹೇಳಿಮಾಡಿಸಿದಂತಿದೆ. ಕಳೆದ ಹಲವು ವರ್ಷಗಳಿಂದ ರಾಸಾಯನಿಕ ಗೊಬ್ಬರ ಹಾಕಿ ನಮ್ಮ ಹೊಲಗಳಲ್ಲಿ ಶಕ್ತಿ ಇಲ್ಲದಂತಾಗಿದೆ. ಈ ರೀತಿ ಹಸುಗಳನ್ನು ಒಂದು ದಿನ ನಿಲ್ಲಿಸಿದರೆ ನಮ್ಮ ಜಮೀನುಗಳಿಗೆ ಫಲವತ್ತತೆ ಬರುತ್ತದೆ ಎನ್ನುತ್ತಾರೆ ಇಲ್ಲಿಯ ರೈತರು.

ಈ ಕುಟುಂಬಗಳು ಪ್ರತಿ ವರ್ಷ ಡಿಸೆಂಬರ್‌ನಿಂದ ಮೇ ತಿಂಗಳವರೆಗೆ ಕೊಪ್ಪಳ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಯ ಅರಣ್ಯ, ಹುಲ್ಲುಗಾವಲು, ಗೋಮಾಳಗಳಿಗೆ ಹೋಗಿ ದನಗಳನ್ನು ಮೇಯಿಸುತ್ತಿದ್ದರು. ಈ ಬಾರಿ ಕೊಪ್ಪಳದಲ್ಲಿ ಕಾಲುವೆಗಳಲ್ಲಿ ಸರಿಯಾಗಿ ನೀರು ಹರಿಯದೇ ಬೆಳೆಗಳು ಒಣಗಿವೆ. ದನಕರುಗಳು ಬೊಗಸೆ ನೀರಿಗೆ, ಹಿಡಿ ಮೇವಿಗೆ ಗೋಳಿಡುತ್ತಿವೆ. ಹೀಗಾಗಿ ಹಾವೇರಿ ಜಿಲ್ಲೆಗೆ ಆಗಮಿಸಿರುವುದಾಗಿ ಈ ಕುಟುಂಬಗಳು ತಿಳಿಸಿವೆ.

# ಮಿನಿ ನ್ಯೂಸ್

## ಕಂದಕಕ್ಕೆ ಉರುಳಿದ ಬಸ್: 12 ಮಂದಿಗೆ ಗಾಯ

**ಉದಯವಾಹಿನಿ, ಕಾರವಾರ**

ಕುಮಟಾ ತಾಲೂಕಿನ ದೇವಿಮನೆ ಘಟ್ಟದ ಮಾಸ್ತಿಹಳ್ಳದ ಬಳಿ ಕೆಎಸ್‌ಆರ್‌ಟಿಸಿ ಬಸ್ ಚಾಲಕನ ನಿಯಂತ್ರಣ ತಪ್ಪಿ ಆಳವಾದ ಕಂದಕಕ್ಕೆ ಉರುಳಿಬಿದ್ದ ಪರಿಣಾಮ 12 ಮಂದಿ ಪ್ರಯಾಣಿಕರು ಗಾಯಗೊಂಡಿರುವ ಘಟನೆ ಗುರುವಾರ ರಾತ್ರಿ ನಡೆದಿದೆ. ಬಾಗಲಕೋಟೆಯಿಂದ ಧರ್ಮಸ್ಥಳಕ್ಕೆ ತೆರಳುತ್ತಿದ್ದ ಬಸ್ ಇದಾಗಿದ್ದು, ಅದೃಷ್ಟವಶಾತ್ ಭಾರಿ ಪ್ರಾಣಹಾನಿ ಸಂಭವಿಸಿಲ್ಲ. ಬಾಗಲಕೋಟೆಯಿಂದ ಶಿರಸಿ ಮಾರ್ಗವಾಗಿ ದೇವಿಮನೆ ಘಟ್ಟದ ಮೂಲಕ ಧರ್ಮಸ್ಥಳದತ್ತ ಬಸ್ ತೆರಳುತ್ತಿತ್ತು. ಮಾಸ್ತಿಹಳ್ಳದ ಸಮೀಪದ ಕಡಿದಾದ ತಿರುವಿನಲ್ಲಿ ಸಾಗುತ್ತಿದ್ದ ವೇಳೆ ಏಕಾಏಕಿ ಚಾಲಕನ ನಿಯಂತ್ರಣ ತಪ್ಪಿದ ಬಸ್ ರಸ್ತೆ ಬದಿಯಿಂದ ಕೆಳಕ್ಕೆ ಉರುಳಿ ಕಂದಕಕ್ಕೆ ಬಿದ್ದಿದೆ. ಅಪಘಾತದ ರಭಸಕ್ಕೆ ಬಸ್‌ನಲ್ಲಿದ್ದ 12 ಪ್ರಯಾಣಿಕರು ಗಾಯಗೊಂಡಿದ್ದಾರೆ. ಬಸ್ ಚಾಲಕ ಅಪಾಯದಿಂದ ಪಾರಾಗಿದ್ದಾರೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಕುಮಟಾ ಪೊಲೀಸ್ ಠಾಣೆಯ ಪಿಎಸ್‌ಐ ಖಾದರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಕಂದಕಕ್ಕೆ ಬಿದ್ದಿದ್ದ ಬಸ್‌ನಲ್ಲಿದ್ದ ಗಾಯಾಳುಗಳನ್ನು ಸ್ಥಳೀಯರ ನೆರವಿನೊಂದಿಗೆ ಪೊಲೀಸರು ತಕ್ಷಣ ರಕ್ಷಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಕುಮಟಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಕುಮಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬಸ್‌ನ ತಾಂತ್ರಿಕ ದೋಷದಿಂದ ಅಪಘಾತ ಸಂಭವಿಸಿದೆಯೇ ಅಥವಾ ಚಾಲಕನ ಅಜಾಗರೂಕತೆಯಿಂದ ಘಟನೆ ನಡೆದಿದೆಯೇ ಎಂಬುದರ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.



ಉದಯವಾಹಿನಿ ಚಿತ್ರ

## ಉ.ಕ. ಇಬ್ಬರು ಪ್ರತಿಭೆಗಳಿಗೆ ರಾಜ್ಯಮಟ್ಟದಲ್ಲಿ ಗರಿ

**ಉದಯವಾಹಿನಿ, ಕಾರವಾರ**

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ತ್ಯಾರ್ಸಿ ಗ್ರಾಮದ ಪ್ರತಿಭಾನ್ವಿತ ವಿದ್ಯಾರ್ಥಿನಿ ರಚನಾ ಪ್ರಕಾಶ ಗೌಡರ್ ಅವರು ರಾಜ್ಯಪಾಲರಿಂದ ಪ್ರತಿಷ್ಠಿತ ಬಂಗಾರದ ಪದಕವನ್ನು ಪಡೆದು ಅಪರೂಪದ ಸಾಧನೆ ಮಾಡಿದ್ದಾರೆ. ದಾವಣಗೆರೆಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಡಸ್ಟ್ರಿಯಲ್ & ಪ್ರೊಡಕ್ಷನ್ ಎಂಜಿನಿಯರಿಂಗ್ ವಿಭಾಗದಲ್ಲಿ ಅಭ್ಯಾಸ ನಡೆಸಿದ್ದ ರಚನಾ, ಇಡೀ ವಿಶ್ವವಿದ್ಯಾಲಯಕ್ಕೆ ಪ್ರಥಮ ರ‍್ಯಾಂಕ್ ಗಳಿಸುವ ಮೂಲಕ ಕಾಲೇಜು ಹಾಗೂ ತಾಲೂಕಿಗೆ ಕೀರ್ತಿ ತಂದಿದ್ದಾರೆ. ಬೆಳಗಾವಿಯ ಜ್ಞಾನಸಂಗಮ ಆವರಣದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆದ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಹಾಗೂ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು ಪ್ರತಿಭಾವಂತೆ ರಚನಾ ಅವರಿಗೆ ಪದವಿ ಪ್ರಮಾಣಪತ್ರ ಹಾಗೂ ಚಿನ್ನದ ಪದಕ ಪ್ರದಾನ ಮಾಡಿ ಗೌರವಿಸಿದರು.

**ತೃಪ್ತಿ ಪಿ.ಗೌಡ ರಾಜ್ಯಮಟ್ಟಕ್ಕೆ ಆಯ್ಕೆ:** ಅಂಕೋಲಾದ ಸತ್ಯಾಗ್ರಹ ಸ್ಮಾರಕ ವಿದ್ಯಾಲಯದ ಮೈದಾನದಲ್ಲಿ ನಡೆದ 14 ವರ್ಷ ವಯೋಮಿತಿಯೊಳಗಿನ ಶಾಲಾ ಕ್ರೀಡಾಕೂಟದಲ್ಲಿ ತಾಲೂಕಿನ ಅಮದಳ್ಳಿಯ ಕೆಪಿಎಸ್ ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿನಿ ತೃಪ್ತಿ ಪಿ.ಗೌಡ ಗಮನಾರ್ಹ ಸಾಧನೆ ಮಾಡಿ ವೈಯಕ್ತಿಕ ವೀರಾಗ್ರಣಿ ಪ್ರಶಸ್ತಿ ಗಳಿಸುವುದರೊಂದಿಗೆ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾಳೆ.

## ಬಿಸಿಯೂಟ ಸೇವಿಸಿ 13ಕ್ಕೂ ಹೆಚ್ಚು ಮಕ್ಕಳು ಅಸ್ವಸ್ಥ

**ಉದಯವಾಹಿನಿ, ದಾವಣಗೆರೆ**

ಶಾಲೆಯಲ್ಲಿ ಮಧ್ಯಾಹ್ನದ ಊಟದ ಬಳಿಕ ಫುಡ್ ಪಾಯಿಸನ್ ಆಗಿ 13ಕ್ಕೂ ಹೆಚ್ಚು ಮಕ್ಕಳು ಅಸ್ವಸ್ಥರಾಗಿರುವ ಘಟನೆ ನಗರದ ಶ್ರೀರಾಮ್ ಬಡಾವಣೆಯ ಸರ್ಕಾರಿ ಶಾಲೆಯಲ್ಲಿ ಗುರುವಾರ ನಡೆದಿದೆ. ಹೊಟ್ಟೆ ನೋವಿನಿಂದ ಬಳಲುತ್ತಿರುವ ಸರ್ಕಾರಿ ಶಾಲಾ ಮಕ್ಕಳನ್ನು ದಾವಣಗೆರೆಯ ಟ್ರಾಮಾ ಕೇರ್ ಸೆಂಟರ್ (ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ)ಗೆ ದಾಖಲು ಮಾಡಲಾಗಿದೆ. ಅಡುಗೆಯವರು ಮಧ್ಯಾಹ್ನ ಬಿಸಿಯೂಟಕ್ಕೆ ಉಪ್ಪಿಟ್ಟು ಮಾಡಿದ್ದರು. ಉಪ್ಪಿಟ್ಟು ತಿಂದ ಬಳಿಕ ಇಬ್ಬರು ಮಕ್ಕಳಲ್ಲಿ ಮಾತ್ರ ಹೊಟ್ಟೆನೋವು ಕಾಣಿಸಿಕೊಂಡಿತ್ತು. ಈ ಇಬ್ಬರು ಮಕ್ಕಳನ್ನು ಗಮನಿಸಿ ಇತರೆ ಮಕ್ಕಳು ಭಯಭೀತರಾಗಿ ಅಸ್ವಸ್ಥರಾದರು. ಕೂಡಲೇ ಮಕ್ಕಳಿಗೆ ವಾಂತಿಯಾದ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಕರು ಆಸ್ಪತ್ರೆಗೆ ರವಾನೆ ಮಾಡಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರೆದಿದೆ. ವೈದ್ಯರು ಮಕ್ಕಳಿಗೆ ಚಿಕಿತ್ಸೆ ನೀಡುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವೈದ್ಯ ರಮೇಶ್ ತಿಳಿಸಿದರು. ಮಧ್ಯಾಹ್ನದ ಬಿಸಿಯೂಟ ಸೇವಿಸಿದ ಬಳಿಕ ಫುಡ್ ಪಾಯಿಸನ್ ಆಗಿದೆ. ಮೊದಲಿಗೆ ಇಬ್ಬರು ಮಕ್ಕಳಲ್ಲಿ ವಾಂತಿ ಶುರುವಾಗಿದೆ. ಜೊತೆಯಲ್ಲಿದ್ದ ಮಕ್ಕಳು ಅವರನ್ನು ಕಂಡು ಭಯಭೀತರಾಗಿ ವಾಂತಿ ಮಾಡಿಕೊಂಡು ಅಸ್ವಸ್ಥರಾಗಿದ್ದಾರೆ. 13 ಜನ ಮಕ್ಕಳಲ್ಲಿ ಒಂದು ಮಗು ಮಾತ್ರ ನಿರ್ಜಲೀಕರಣದಿಂದ ಸುಸ್ತು ಆಗಿದೆ. ಉಳಿದ ಮಕ್ಕಳು ಚೆನ್ನಾಗಿದ್ದಾರೆ. ಈಗಾಗಲೇ ಡ್ರಿಪ್ ಹಾಕಿ ಚಿಕಿತ್ಸೆ ನೀಡುತ್ತಿದ್ದೇವೆ. ಇನ್ನು ಮಕ್ಕಳು ಸೇವಿಸಿರುವ ಆಹಾರವನ್ನು ಪರಿಶೀಲನೆಗೆ ಕಳಿಸಲಾಗುವುದು. ಇದೇ ಆಹಾರ ಸೇವಿಸಿದ 43 ಮಕ್ಕಳು ಚೆನ್ನಾಗಿದ್ದಾರೆ ಎಂದು ಶಾಲಾ ಶಿಕ್ಷಕಿ ಮಾಹಿತಿ ನೀಡಿದ್ದಾರೆ. 'ಕಮ್ಯೂನಿಟಿ ಸೈಕೋಸಸ್' ಎಂಬುದು ಮಕ್ಕಳಲ್ಲಿ ಇರಲಿದೆ. ಒಂದು ಮಗು ವಾಂತಿ ಮಾಡಿಕೊಂಡ್ರೇ ಅದನ್ನು ನೋಡಿ ಬೇರೆ ಮಕ್ಕಳು ವಾಂತಿ ಮಾಡಿಕೊಳ್ಳುವುದು ಸಾಮಾನ್ಯ. ಇದನ್ನು ಟೆಸ್ಟ್‌ಗೆ ಕಳುಹಿಸಿದ ಬಳಿಕ ನಿಖರ ಕಾರಣ ಲಭ್ಯವಾಗಲಿದೆ" ಎಂದು ಅವರು ಹೇಳಿದರು.

## ಗಾಂಧೀಜಿ ಕಂಚಿನ ಪುತ್ಥಳಿಗೆ ಮಾಲಾರ್ಪಣೆ

**ಉದಯವಾಹಿನಿ, ಹಾವೇರಿ**

ಗಾಂಧೀಜಿ ವೃತ್ತದಲ್ಲಿ ಸ್ಥಾಪಿಸಲಾಗಿರುವ ಮಹಾತ್ಮ ಗಾಂಧೀಜಿ ಕಂಚಿನ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಜಿಲ್ಲಾಡಳಿತ ಗಾಂಧೀಜಿ ಜಯಂತಿಯನ್ನು ಆಚರಿಸಿತು. ಕಳೆದ ಎಪ್ರಿಲ್ 20ರಂದು ಮಹಾತ್ಮ ಗಾಂಧೀಜಿಯ ಸಿಮೆಂಟ್ ಪ್ರತಿಮೆಯನ್ನು ಮಾನಸಿಕ ಅಸ್ವಸ್ಥನೊಬ್ಬ ವಿಧ್ವಂಸಗೊಳಿಸಿದ್ದ. ಜಿಲ್ಲಾಡಳಿತ ನಗರಸಭೆ ಸೇರಿದಂತೆ ಅಧಿಕಾರಿಗಳು ಸಭೆ ನಡೆಸಿ ಮಹಾತ್ಮಾ ಗಾಂಧೀಜಿ ವೃತ್ತದಲ್ಲಿ ಕಂಚಿನ ಪುತ್ಥಳಿ ಸ್ಥಾಪಿಸುವ ಚಿಂತನೆ ಕೈಗೊಂಡಿದ್ದರು. ಅದರಂತೆ ಸುಮಾರು 7 ಲಕ್ಷ ರೂಪಾಯಿ ವೆಚ್ಚದಲ್ಲಿ ಕಂಚಿನ ಗಾಂಧೀಜಿ ಪುತ್ಥಳಿಯನ್ನು ಆಗಸ್ಟ್ 15 ರಂದು ಸ್ಥಾಪಿಸಲಾಗಿತ್ತು.

**ಸಂತಸ ತಂದ ಜಿಲ್ಲಾಡಳಿತದ ಕ್ರಮ:** ಎಂ.ಜಿ. ವೃತ್ತದಲ್ಲಿ ಕಂಚಿನ ಪುತ್ಥಳಿ ಸ್ಥಾಪಿಸಿ ಇದೇ ಪ್ರಥಮ ಬಾರಿಗೆ ಗಾಂಧೀಜಿ ಜಯಂತಿ ಆಚರಿಸುತ್ತಿರುವುದು ಗಾಂಧಿವಾದಿಗಳಿಗೆ ಸಂತಸ ತಂದಿದೆ. ಗಾಂಧೀಜಿ 1934ರ ಮಾರ್ಚ್ 1 ಮತ್ತು 2ರಂದು ಹಾವೇರಿಗೆ ಆಗಮಿಸಿದ್ದರು. ಅಂದು ಅವರು ಹಾವೇರಿಯ ರೈಲು ನಿಲ್ದಾಣದ ಬಳಿ ಧರ್ಮಶಾಲಾ ಅಡಿಗಲ್ಲ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಅದರ ನೆನಪಿಗಾಗಿ ಈಗ ಗಾಂಧಿ ಭವನ ಸ್ಥಾಪಿಸಲಾಗಿದೆ. ಈ ಕುರಿತಂತೆ ಮಾತನಾಡಿದ ಹಾವೇರಿ ನಗರಸಭೆ ಪೌರಾಯುಕ್ತ ಕೆ.ಕಾಂತರಾಜು, "ಹಾವೇರಿ ನಗರದ ಗಾಂಧೀಜಿ ವೃತ್ತದಲ್ಲಿರುವ ಗಾಂಧೀಜಿ ಪ್ರತಿಮೆಯನ್ನು ದುಷ್ಕರ್ಮಿಗಳು ವಿರೂಪಗೊಳಿಸಿದ್ದರು. ಆದಾದ ನಂತರ ಜಿಲ್ಲಾಡಳಿತ ಸ್ಥಳೀಯ ಶಾಸಕರು ಸಭೆ ನಡೆಸಿ ಸಿಮೆಂಟ್ ಪ್ರತಿಮೆ ಬದಲು ಕಂಚಿನ ಪ್ರತಿಮೆ ಸ್ಥಾಪಿಸಲು ತೀರ್ಮಾನ ಕೈಗೊಂಡಿದ್ದರು. ಪ್ರತಿಮೆ ನಿರ್ಮಾಣಗೊಂಡ ನಂತರ ಆಗಸ್ಟ್ 15 ರಂದು ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಉದ್ಘಾಟನೆ ಮಾಡಿದ್ದರು" ಎಂದು ತಿಳಿಸಿದರು.



## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** — ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸ ಮಾಡಲು ಒಂದು ಅದ್ಭುತ ದಿನ. ಹಣವನ್ನು ಹೂಡಿಕೆ ಮಾಡಿದ್ದರೆ, ಅದರ ಪ್ರಯೋಜನವನ್ನು ಇಂದು ನೀವು ಪಡೆಯಬಹುದು.

**ವೃಷಭ** — ಸೃಜನಶಿಲ ಕೆಲಸ ನಿಮ್ಮನ್ನು ಶಾಂತವಾಗಿರಿಸುತ್ತವೆ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ.

**ಮಿಥುನ** — ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ನಿಮ್ಮ ಅತಿಯಾದ ಜೀವನಶೈಲಿ ಮನೆಯಲ್ಲಿ ಆತಂಕ ಸೃಷ್ಟಿಸಬಹುದು

**ಕರ್ಕಾಟಕ** — ನಿಮ್ಮ ಸುತ್ತಲಿರುವವರು ನಿಮಗೆ ಬೆಂಬಲ ನೀಡುವುದರಿಂದ ನೀವು ಸಂತೋಷವಾಗಿರುವಿರಿ. ವ್ಯಾಪಾರ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ನಿಮ್ಮ ಮಕ್ಕಳ ಸಮಸ್ಯೆ ನಿಭಾಯಿಸಲು ಸ್ವಲ್ಪ ಸಮಯ ತೆಗೆದುಕೊಳ್ಳಿ

**ಸಿಂಹ** — ಇಂದು ನಿಮ್ಮನ್ನು ಆವರಿಸುವ ಭಾವನಾತ್ಮಕ ಮನಸ್ಥಿತಿಯಿಂದ ನೀವು ಹೊರಬರಲು ಬಯಸಿದರೆ ಹಿಂದಿನದ್ದೆಲ್ಲವನ್ನೂ ಮರೆತುಬಿಡಬೇಕು. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ

**ಕನ್ಯಾ** — ನಿಮ್ಮ ದೇಹದ ಪುನಃಶ್ಚೇತನಕ್ಕಾಗಿ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳದಿದ್ದರೆ ನೀವು ಆಯಾಸ, ನಿರಾಸೆಯಲ್ಲಿ ಸಿಲುಕುತ್ತೀರಿ. ನಿಮಗಾಗಿ ಹಣ ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು.

**ತುಲಾ** — ಕೆಲವರು ನಿಮಗೆ ಏನನ್ನಾದರೂ ಕಲಿಯಲು ಬಹಳ ವಯಸ್ಸಾಗಿದೆ ಎಂದು ಭಾವಿಸಬಹುದು. ಆದರೆ ಅದು ನಿಜವಲ್ಲ – ನಿಮ್ಮ ಪ್ರಖರ ಮತ್ತು ಸಕ್ರಿಯ ಮನಸ್ಸಿನಿಂದ ನೀವು ಹೊಸ ವಿಷಯ ಸುಲಭವಾಗಿ ಕಲಿಯುವಿರಿ.

**ವೃಶ್ಚಿಕ** — ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಹಣ ನಿಮಗೆ ಅಗತ್ಯವಾಗಿದೆ ಆದರೆ ನಿಮ್ಮ ಸಂಬಂಧಗಳನ್ನು ಹಾಳುಮಾಡುವಷ್ಟು ಹಣದ ಬಗ್ಗೆ ಗಂಭೀರವಾಗಬೇಡಿ.

**ಧನಸ್ಸು** — ಖಿನ್ನತೆಯನ್ನು ಹೊಡೆದೋಡಿಸಿ. ಇದು ನಿಮ್ಮನ್ನು ಆವರಿಸಿಕೊಳ್ಳುತ್ತಿದೆ ಮತ್ತು ನಿಮ್ಮ ಪ್ರಗತಿಗೆ ಅಡ್ಡಿಪಡಿಸುತ್ತಿದೆ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ.

**ಮಕರ** — ನಿಮ್ಮ ಅನಾರೋಗ್ಯದ ಬಗ್ಗೆ ಚರ್ಚಿಸುವುದನ್ನು ತಪ್ಪಿಸಿ. ಕಾಯಿಲೆಯಿಂದ ನಿಮ್ಮ ಗಮನ ತಿರುಗಿಸಲು ಏನಾದರೂ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಇಂದು ಮದ್ಯ ಸೇವಿಸಬೇಡಿ.

**ಕುಂಭ** — ಗಾಳಿಯಲ್ಲಿ ಮನೆ ಕಟ್ಟುವಲ್ಲಿ ನಿಮ್ಮ ಸಮಯ ವ್ಯರ್ಥ ಮಾಡಬೇಡಿ. ಬದಲಿಗೆ ಏನಾದರೂ ಅರ್ಥಪೂರ್ಣವಾದದ್ದನ್ನು ಮಾಡಲು ನಿಮ್ಮ ಶಕ್ತಿ ವ್ಯಯಿಸಿ. ನೀವು ಇತರರ ಮೇಲೆ ಹೆಚ್ಚು ಖರ್ಚು ಮಾಡಬಯಸುತ್ತೀರಿ.

**ಮೀನ** — ಎಲ್ಲರಿಗೂ ಸಹಾಯ ಮಾಡುವ ನಿಮ್ಮನ್ನು ದಣಿಸುತ್ತದೆ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ಥ್ಯರಾಗಿರುತ್ತೀರಿ. ಇಂದು ನಿಮ್ಮ ಖ್ಯಾತಿ ಹೆಚ್ಚುತ್ತದೆ.

ಘಟನೆಯನ್ನು ಖುದ್ದು ಕಂಡಿರುವುದಾಗಿ ಎಫ್‌ಐಆರ್‌ನಲ್ಲಿ ನಮೂದಿಸಲಾಗಿದೆ, ಅಲ್ಪಸಂಖ್ಯಾತ ಮತದಾರರನ್ನು ಡಿಲೀಟ್ ಮಾಡಿಸಲು ಯತ್ನ ಆರೋಪ

# ಬಿಜೆಪಿ ಮುಖಂಡ ರವಿ ಪಾಟೀಲ ಸೇರಿ 25 ಜನರ ವಿರುದ್ಧ ಕೇಸ್ ದಾಖಲು..!

**ಉದಯವಾಹಿನಿ, ಬೆಳಗಾವಿ**

ಎಸ್‌ಐಆರ್ ವಿಚಾರ ದೇಶ, ರಾಜ್ಯದಲ್ಲಿ ಆಡಳಿತ ಮತ್ತು ವಿಪಕ್ಷಗಳ ನಡುವಿನ ಕಿತ್ತಾಟಕ್ಕೆ ಕಾರಣವಾಗಿದೆ. ಬೆಳಗಾವಿಯಲ್ಲೂ ಒಬ್ಬರಿಗೊಬ್ಬರು ಆರೋಪ – ಪ್ರತ್ಯಾರೋಪದಲ್ಲಿ ತೊಡಗಿದ್ದು, ಇಲ್ಲಿನ ಹೊಸ ವೀರಭದ್ರ ನಗರದಲ್ಲಿನ ಕೆಲವು ಅಲ್ಪಸಂಖ್ಯಾತ ಮತದಾರರನ್ನು ಎಸ್‌ಐಆರ್‌ನಿಂದ ತೆಗೆದುಹಾಕುವಂತೆ ಫಾರ್ಮ್ ನಂಬರ್ 7 ಕೊಟ್ಟ ಆರೋಪದ ಮೇಲೆ ಬಿಜೆಪಿ ಮುಖಂಡ ಡಾ. ರವಿ ಪಾಟೀಲ ಸೇರಿದಂತೆ ಮೂವರು ಹಾಗೂ ಅಪರಿಚಿತ 25 ಮಂದಿಯ ವಿರುದ್ಧ ಮಾರ್ಕೆಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**1.** ಬೆಳಗಾವಿ ನಗರದ ಮಾರ್ಕೆಟ್ ಠಾಣೆಯಲ್ಲಿ ಪ್ರಕರಣ ದಾಖಲು
**2.** ವೀರಭದ್ರನಗರದ ನಿವಾಸಿ ಮೀರಾಸಾಬ್ ಸನದಿ ದೂರು ಕೊಟ್ಟವರು
**3.** ಅಪರಿಚಿತ 25 ಮಂದಿಯನ್ನೂ ಆರೋಪಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.

ಹೊಸ ವೀರಭದ್ರನಗರದ ನಿವಾಸಿ, ಆಟೋ ಚಾಲಕ ಮೀರಾಸಾಬ್ ಸನದಿ (52) ದೂರು ನೀಡಿದವರು. ಶಂಕರ ಬೀರಪ್ಪ ನಾಯ್ಕ, ಪ್ರಶಾಂತ ದೀಪಕ ಮುಂದಿನಮನಿ ಹಾಗೂ ಡಾ. ರವಿ ಅವರನ್ನು ಎಫ್‌ಐಆರ್‌ನಲ್ಲಿ ಕ್ರಮವಾಗಿ ಮೊದಲ, ಎರಡನೇ ಮತ್ತು ಮೂರನೇ ಆರೋಪಿಗಳಾಗಿ ಉಲ್ಲೇಖಿಸಲಾಗಿದೆ. ಡಾ. ರವಿ ಪಾಟೀಲ 2023ರ ವಿಧಾನಸಭೆ ಚುನಾವಣೆಯಲ್ಲಿ ಬೆಳಗಾವಿ ಉತ್ತರಕ್ಷೇತ್ರದ ಪರಾಜಿತ ಅಭ್ಯರ್ಥಿ. ಅಪರಿಚಿತ 20 ರಿಂದ 25 ಮಂದಿಯನ್ನೂ ಆರೋಪಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.

ಸೆ.22ರಂದು ಮಧ್ಯಾಹ್ನ 2.30ರ ಸುಮಾರಿಗೆ ಹೊಸ ವೀರಭದ್ರನಗರದ



ಏಳನೇ ಅಡ್ಡರಸ್ತೆಯಲ್ಲಿ ಘಟನೆ ನಡೆದಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ. ದೂರುದಾರರು ಘಟನೆಯನ್ನು ಖುದ್ದು ಕಂಡಿರುವುದಾಗಿ ಎಫ್‌ಐಆರ್‌ನಲ್ಲಿ ನಮೂದಿಸಲಾಗಿದೆ. ಲಿಖಿತ ದೂರಿನ ಆಧಾರದಲ್ಲಿ ಭಾರತೀಯ ನ್ಯಾಯ ಸಂಹಿತೆಯ ಕಲಂ 318(4), 336(3), 336(4), 353, 61(2), 3(5), 3(7), 192, 190 ಅಡಿ ಪ್ರಕರಣ ದಾಖಲಿಸಲಾಗಿದೆ.

198 ಮುಸ್ಲಿಂ ಮತದಾರರ ಗುರಿಯಾಗಿಸಿ ಡಿಲೀಟ್ ಮಾಡುವ ಒಳಸಂಚು ಮತ್ತು ನಕಲಿ ದಾಖಲಾತಿ, ಸುಳ್ಳು ಮಾಹಿತಿ ನೀಡಿದ ಆರೋಪ ಇವರ ವಿರುದ್ಧ ಕೇಳಿ ಬಂದಿದೆ. ಸೆ.22ರಂದು ವೀರಭದ್ರನಗರದ ಮತಗಟ್ಟೆ 195,196ರಲ್ಲಿ ಜೀವಂತವಾಗಿರುವ ಹಾಗೂ ಕಾನೂನುಬದ್ಧ ಇರುವ ಮತದಾರರ ಹೆಸರು ಡಿಲೀಟ್ ಮಾಡಿಸಲು ಆರೋಪಿಗಳು ಯತ್ನಿಸಿದ್ದಾರೆ ಎನ್ನಲಾಗಿದ್ದು, ಈ ವೇಳೆ, ರವಿ ಪಾಟೀಲ್ ಸೇರಿ ಮೂವರನ್ನು ಸ್ಥಳೀಯರು ಹಿಡಿದಿದ್ದರು. ಫಾರ್ಮ್ ನಂ.7ರ ಮೂಲಕ ಡಿಲೀಟ್ ಮಾಡಿಸಲು ಯತ್ನ ಆರೋಪ ಸಂಬಂಧ ಘಟನೆ ನಡೆದು ಎಂಟು ದಿನಗಳ ಬಳಿಕ ಎಸ್‌ಐಆರ್ ದಾಖಲಾಗಿದೆ.

ಸಂಸದ ಜಗದೀಶ ಶೆಟ್ಟರ್ ಈ ಕುರಿತು ಪ್ರತಿಕ್ರಿಯಿಸಿದ್ದು, "ಎಸ್‌ಐಆರ್ ಪ್ರಕ್ರಿಯೆ ಮುಗಿದ ಮೇಲೆ ನಡೆದ ಚುನಾವಣೆಯಲ್ಲಿ ನೀವು ಗೆದ್ದು ಬಂದಿದ್ದೀರಿ ಎಂಬುದನ್ನು ರಾಜ್ಯ ಕಾಂಗ್ರೆಸ್ ಮರೆಯಬಾರದು. ಬಿಎಲ್‌ಒ 1, ಬಿಎಲ್‌ಒ 2 ಇರುವ ನಮ್ಮ ಬಿಜೆಪಿ ಕಾರ್ಯಕರ್ತರು ತಕರಾರು ಅರ್ಜಿ ಸಲ್ಲಿಸಿದರೆ ಅದೊಂದು ಅಪರಾಧದಂತೆ ನೋಡಲಾಗುತ್ತಿದೆ. ಇಡೀ ರಾಜ್ಯದಲ್ಲಿ ಎಫ್‌ಐಆರ್ ದಾಖಲಿಸುವ ಕೆಲಸ ಆಗುತ್ತಿದೆ. ಬೆಳಗಾವಿಯಲ್ಲೂ ಡಾ. ರವಿ ಪಾಟೀಲ ಸೇರಿ ಮತ್ತಿತರ ಕಾರ್ಯಕರ್ತರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಇದೊಂದು ರೀತಿ ಅಧಿಕಾರ ದುರ್ಬಳಕೆ, ರಾಜಕೀಯ ವಿರೋಧಿಗಳನ್ನು ಹತ್ತಿಕ್ಕುವ ಕೆಲಸ. ರವಿ ಪಾಟೀಲ ಅವರು ಕೂಡ ಅರ್ಜಿ ಸಲ್ಲಿಸಿ, ಪರಿಶೀಲನೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದರು. ತಕರಾರು ಅರ್ಜಿಯನ್ನೂ ಸಲ್ಲಿಸಬಾರದು ಎಂದರೆ ಅದು ಸರ್ವಾಧಿಕಾರಿ ಧೋರಣೆ ಆಗುತ್ತದೆ" ಎಂದು ಆರೋಪಿಸಿದರು.



> ನಮ್ಮ ಮುಖಂಡರು, ಕಾರ್ಯಕರ್ತರು ಕೊಟ್ಟಿರುವ ತಕರಾರನ್ನು ಪರಿಶೀಲನೆ ನಡೆಸಬೇಕು. ಅದರಲ್ಲಿ ಏನಾದರೂ ಲೋಪ ಕಂಡು ಬಂದರೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಾರೆ. ಅದನ್ನು ಬಿಟ್ಟು ತಕರಾರು ಅರ್ಜಿ ಕೊಟ್ಟವರ ವಿರುದ್ಧವೇ ಎಫ್‌ಐಆರ್ ದಾಖಲಿಸುವುದನ್ನು ಬಿಡಬೇಕು. ಈ ಸಂಬಂಧ ಯಾವ ರೀತಿ ಹೋರಾಟ ಮಾಡಬೇಕು ಎಂಬುದನ್ನು ರಾಜ್ಯ ಬಿಜೆಪಿ ನಾಯಕರು ಚರ್ಚಿಸಿ ನಿರ್ಧಾರ ಪ್ರಕಟಿಸುತ್ತೇವೆ
> – ಜಗದೀಶ್ ಶೆಟ್ಟರ್, ಸಂಸದ

## ಕಾರಟಗಿ ಚರಂಡಿ ದುರವಸ್ಥೆ: ಮಕ್ಕಳಿಗೆ, ಸಾರ್ವಜನಿಕರಿಗೆ ದುರ್ವಾಸನೆ ಕಿರಿಕಿರಿ

**ಉದಯವಾಹಿನಿ, ಕಾರಟಗಿ**

ಪಟ್ಟಣದ 10ನೇ ವಾರ್ಡ್ ವ್ಯಾಪ್ತಿಯ ಶ್ರೀ ಶರಣಬಸವೇಶ್ವರ ವಿದ್ಯಾ ಸಂಸ್ಥೆಗೆ ಹೋಗುವ ಮುಖ್ಯ ರಸ್ತೆ ಹಾಗೂ ಶಾಲೆಯ ಮುಂಭಾಗದ ಚರಂಡಿ ಸಂಪೂರ್ಣ ಹೂಳು ತುಂಬಿ ನೀರು ಚಲಿಸದೇ ನಿಂತು, ದಾರಿಹೋಕರಿಗೆ ತೀವ್ರ ದುರ್ವಾಸನೆ ಬೀರುತ್ತಿದ್ದು, ಸಾರ್ವಜನಿಕರು ಹಾಗೂ ಶಾಲಾ ಮಕ್ಕಳು ಸಂಕಷ್ಟ ಅನುಭವಿಸುತ್ತಿದ್ದಾರೆ.

ನಿತ್ಯ ನೂರಾರು ಚಿಕ್ಕ ಮಕ್ಕಳು, ಶಾಲಾ ವಿದ್ಯಾರ್ಥಿಗಳು ಸಂಚರಿಸುವ ಪ್ರಮುಖ ರಸ್ತೆ ಇದಾಗಿದ್ದು, ನಿಂತ ಚರಂಡಿ ನೀರಿನಿಂದ ಕ್ರಿಮಿ–ಕೀಟಗಳು, ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಮಲೇರಿಯಾ, ಡೆಂಗ್ಯೂನಂತಹ ಸಾಂಕ್ರಾಮಿಕ ಹಾಗೂ ಮಾರಕ ರೋಗಗಳು ಹರಡುವ ಭೀತಿಯಲ್ಲಿ ವಾರ್ಡ್ ನಿವಾಸಿಗಳು ಇದ್ದಾರೆ. ಈಗಾಗಲೇ ಬಹಳಷ್ಟು ಚಿಕ್ಕ ಮಕ್ಕಳು ಚರಂಡಿಯಲ್ಲಿ ಬಿದ್ದ ಉದಾಹರಣೆಗಳಿವೆ. ಅಲ್ಲಿಯೇ ಸಣ್ಣಪುಟ್ಟ ಬಿಡಂಗಡಿ ಇಟ್ಟು ವ್ಯಾಪಾರ ಮಾಡುವವರೂ ಈ ದುರ್ವಾಸನೆಯಿಂದ ಬೇಸತ್ತಿದ್ದಾರೆ.

ಶಾಲೆಯವರು ಸಹ ಶಾಲಾ ಸುತ್ತಮುತ್ತ ಸ್ವಚ್ಛತೆಗೆ ಮುಂದಾಗಿಲ್ಲ. ಶಾಲಾ ಮುಂಭಾಗದಲ್ಲಿ ಚರಂಡಿ ನಿರ್ಮಾಣ ಮಾಡಿದ್ದರೂ ಸಮರ್ಪಕವಾಗಿ ನೀರು ಹರಿಯದಿರುವುದೇ ಇದಕ್ಕೆ ಕಾರಣ ಎಂದು ವಾರ್ಡ್ ನಿವಾಸಿಗಳು ಆರೋಪಿಸಿದ್ದಾರೆ.

10ನೇ ವಾರ್ಡ್ ಸದಸ್ಯ ಮಂಜುನಾಥ್ ಮೇಗೂರ್ ಅವರಿಗೆ ಈ ಹಿಂದೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಸಮಸ್ಯೆಗೆ ಸ್ಪಂದಿಸಿಲ್ಲ. "ಈ ಬಾರಿ ವಾರ್ಡ್ ಚುನಾವಣೆ ಬಂದಾಗ ಮಾತನಾಡುತ್ತೇವೆ" ಎಂದು ವಾರ್ಡ್ ನಿವಾಸಿ ಯಂಕಮ್ಮ ಉಪ್ಪಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈಗಲಾದರೂ ಪುರಸಭಾ ಸದಸ್ಯರು ಹಾಗೂ ಅಧಿಕಾರಿಗಳು ಎಚ್ಚೆತ್ತುಕೊಂಡು ಸಾರ್ವಜನಿಕರು ಮತ್ತು ಶಾಲಾ ಮಕ್ಕಳ ಹಿತದೃಷ್ಟಿಯಿಂದ ಸ್ವಚ್ಛತೆಗೆ ಮುಂದಾಗಬೇಕು ಹಾಗೂ ಚರಂಡಿ ಮೇಲೆ ಸಮರ್ಪಕವಾಗಿ ವಾಸನೆ ಬಾರದಂತೆ ಚಪ್ಪಡಿ (ಸ್ಲ್ಯಾಬ್) ನಿರ್ಮಿಸಬೇಕು ಎಂದು ನಿವಾಸಿಗಳು ಒತ್ತಾಯಿಸಿದ್ದಾರೆ.

**ನೀರಿನ ಟ್ಯಾಂಕ್ ಶಿಥಿಲ: ಅನಾಹುತದ ಭೀತಿ**



ಉದಯವಾಹಿನಿ ಚಿತ್ರ

> ಸಚಿವ ಶಿವರಾಜ್ ತಂಗಡಗಿ ಹಾಗೂ ಅಧಿಕಾರಿಗಳು ಇತ್ತ ಗಮನಹರಿಸಿ, ಸಾರ್ವಜನಿಕರು ಹಾಗೂ ಶಾಲಾ ಮಕ್ಕಳ ಹಿತದೃಷ್ಟಿಯಿಂದ ನೂತನ ನೀರಿನ ಟ್ಯಾಂಕ್ ನಿರ್ಮಾಣ ಹಾಗೂ ಸಮರ್ಪಕ ಸಿಸಿ ರಸ್ತೆ ಮತ್ತು ವೈಜ್ಞಾನಿಕ ಚರಂಡಿ ವ್ಯವಸ್ಥೆ ಕಲ್ಪಿಸಬೇಕು.
> – ಶರಣಪ್ಪ ಸಂಗಟಿ, ನಮ್ಮ ನಾಡ ರಕ್ಷಣಾ ವೇದಿಕೆ ಯುವ ಘಟಕದ ರಾಜ್ಯಾಧ್ಯಕ್ಷ

ಜೊತೆಗೆ ಎಪಿಎಂಸಿ ಒಳಗಡೆ ಇರುವ ನೀರಿನ ಟ್ಯಾಂಕ್ ಸಂಪೂರ್ಣ ಶಿಥಿಲಗೊಂಡಿದ್ದು, ಯಾವ ಸಂದರ್ಭದಲ್ಲಾದರೂ ಬಿದ್ದು ಅನಾಹುತ ಸಂಭವಿಸುವ ಆತಂಕ ಸಾರ್ವಜನಿಕರಲ್ಲಿ ಮನೆಮಾಡಿದೆ. ಅನಾಹುತ ಸಂಭವಿಸುವ ಮುನ್ನ ಎಚ್ಚೆತ್ತುಕೊಳ್ಳಬೇಕು ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಈ ಕುರಿತು ನಮ್ಮ ನಾಡ ರಕ್ಷಣಾ ವೇದಿಕೆ ಯುವ ಘಟಕದ ರಾಜ್ಯಾಧ್ಯಕ್ಷ ಶರಣಪ್ಪ ಸಂಗಟಿ. ಅವರಿಗೆ ಸಾರ್ವಜನಿಕರು ಮಾಹಿತಿ ನೀಡಿದ್ದಾರೆ. ಈ ವಿಷಯ ಕುರಿತು ಮಾತನಾಡಿದ ಅವರು, ಮಾಜಿ ಶಾಸಕ ಬಸವರಾಜ್ ಧಡೇಸೂಗೂರು"ಅವರ ಅವಧಿಯಲ್ಲಿ ನಿರ್ಮಾಣವಾದ ಸಿಸಿ ರಸ್ತೆಯು ಕೇವಲ ಆರು ತಿಂಗಳಲ್ಲೇ ಸಂಪೂರ್ಣ ಶಿಥಿಲಗೊಂಡಿದೆ. ಎಪಿಎಂಸಿಯಲ್ಲಿರುವ ನೀರಿನ ಟ್ಯಾಂಕ್ ಕೂಡ ಶಿಥಿಲಗೊಂಡಿದ್ದು, ದಿನನಿತ್ಯ ಅದೇ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರ ಮೇಲೆ ಬಿದ್ದು ಅನಾಹುತ ಸಂಭವಿಸಿದರೆ ಯಾರು ಹೊಣೆ? ಎಂದು ಪ್ರಶ್ನಿಸಿದ್ದಾರೆ.

## ಸತ್ಯ, ಅಹಿಂಸೆಯ ಪಾಠ ಬೋಧಿಸಿದ್ದ ಮಹಾತ್ಮ ಗಾಂಧೀಜಿ

**ಉದಯವಾಹಿನಿ, ಚಿಂಚೋಳಿ**

ಮಹಾತ್ಮ ಗಾಂಧೀಜಿಯವರು ಇಡೀ ವಿಶ್ವಕ್ಕೆ ಸತ್ಯ ಮತ್ತು ಅಹಿಂಸೆಯ ಪಾಠವನ್ನು ಕಲಿಸಿದ ಮಹಾನ್ ನಾಯಕರಾಗಿ ಬ್ರಿಟಿಷರ ಬಂದೂಕು ಫಿರಂಗಿಗಳ ಮುಂದೆ ಸತ್ಯಾಗ್ರಹವೆಂಬ ಅಸ್ತ್ರದಿಂದಲೇ ಸ್ವಾತಂತ್ರ್ಯ ತಂದುಕೊಟ್ಟರು ಎಂದು ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ ಹೇಳಿದರು. ಪಟ್ಟಣದ ಚಂದಾಪೂರದ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಅಂಗವಾಗಿ ಅವರ ಭಾವಚಿತ್ರಗಳಿಗೆ ಮಾಲಾರ್ಪಣೆ ಮಾಡಿ,ಪುಷ್ಪ ನಮನ ಸಲ್ಲಿಸಿ ಮಾತನಡಿದರು. ಈ ಸಂದರ್ಭದಲ್ಲಿ ಬಾಲಭವನ ಸೂಸೈಟಿ ರಾಜ್ಯ ಉಪಾಧ್ಯಕ್ಷ ಅನೀಲಕುಮಾರ ಜಮಾದಾರ,ಪುರಸಭೆ ಮಾಜಿ ಅಧ್ಯಕ್ಷ ಅಬ್ದುಲ್ ಬಾಷೀದ್,ಪ್ರಚಾರ ಸಮಿತಿ ಅಧ್ಯಕ್ಷ ಲಕ್ಷ್ಮಣ ಆವುಂಟಿ,ಪುರಸಭೆ ಮಾಜಿ ಉಪಾಧ್ಯಕ್ಷ ಶಬ್ಬೀರ ಅಹೇಮದ್,ಎಸ್ಸಿ ಘಟಕದ ಅಧ್ಯಕ್ಷ ಸಂತೋಷ ಗುತ್ತೇದಾರ,ನಾಗೇಶ ಗುಣಾಜೀ,ಖಲೀಲ್ ಪಟೇಲ್,ಸಂತೋಷ ರಾಠೋಡ,ಸುಭಾಶ್ಚಂದ್ರ ಪಾಟೀಲ,ಶಿವರಾಜ ಪಾಟೀಲ,ಹಣಮಂತ ಗೌರಿ,ಬಸವರಾಜ ಕಡಬೂರ,ಚಾಂದ್ ಮೋಮೀನ್ ಅನೇಕರಿದ್ದರು.



ಉದಯವಾಹಿನಿ ಚಿತ್ರ

## ಮಾಜಿ ಸಿಎಂ ಸಿದ್ದರಾಮಯ್ಯ ಮೂರ್ತಿ ಸ್ಥಾಪನೆ ಬೇಡ

**ಉದಯವಾಹಿನಿ, ಚಿತ್ತಾಪುರ**

ಕಲಬುರಗಿ ಹೈಕೋರ್ಟ್ ನ ಅಫಜಲಪುರ ರಸ್ತೆ ವೃತ್ತದಲ್ಲಿ ಕೋಲಿ, ಕಬ್ಬಲಿಗ ಸಮಾಜದ ನಾಯಕ ದಿ. ವಿಠ್ಠಲ್ ಹೇರೂರ್ ಅವರ ಹೆಸರಿನ ನಾಮಫಲಕ 2015 ರಲ್ಲೇ ಹಾಕಲಾಗಿದ್ದು, ಈ ವೃತ್ತದಲ್ಲಿ ಯಾವುದೇ ಕಾರಣಕ್ಕೂ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಮೂರ್ತಿ ಸ್ಥಾಪನೆ ಮಾಡಬಾರದು ಎಂದು ತಾಲೂಕು ಕೋಲಿ ಸಮಾಜ ಒತ್ತಾಯಿಸಿದೆ.

ತಾಲೂಕು ಕೋಲಿ ಸಮಾಜದ ಅಧ್ಯಕ್ಷ ನಿಂಗಣ್ಣ ಹೆಗಲೇರಿ ನೇತೃತ್ವದಲ್ಲಿ ಮುಖಂಡರು ಗುರುವಾರ ತಹಶೀಲ್ದಾರ್ ಅವರಿಗೆ ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರ ಸಲ್ಲಿಸಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ದಿ. ವಿಠ್ಠಲ್ ಹೇರೂರ್ ಅವರ ನಾಮಫಲಕ ಇರುವಾಗಲೂ ಕುರುಬ ಸಮಾಜದ ಕೆಲವರು ರಾತ್ರೋರಾತ್ರಿ ಸಿದ್ದರಾಮಯ್ಯ ಅವರ ಮೂರ್ತಿ ತಂದು ಇಟ್ಟಿದ್ದನ್ನು ಮಹಾನಗರ ಪಾಲಿಕೆ ತಕ್ಷಣ ತೆರವುಗೊಳಿಸಿದೆ. ಇದು ಕೋಲಿ ಸಮಾಜದ ಭಾವನೆಗಳಿಗೆ ಮತ್ತು ಹೇರೂರ್ ಅವರಿಗೆ ಮಾಡಿದ ಅವಮಾನವಾಗಿದ್ದು, ಇದನ್ನು ಸಹಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರವು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೂರ್ತಿ ಸ್ಥಾಪನೆಗೆ ಅವಕಾಶ ಮಾಡಿಕೊಡಬಾರದು. ಒಂದು ವೇಳೆ ಕೋಲಿ, ಕಬ್ಬಲಿಗ ಸಮಾಜದ ಮನವಿಯನ್ನು ಕಡೆಗಣಿಸಿದರೆ ಸಮಾಜವು ಬೀದಿಗಿಳಿದು ಹೋರಾಟ ಮಾಡುವುದು ಅನಿವಾರ್ಯ ಎಂದು ಹೇಳಿದರು. ಕೋಲಿ ಸಮಾಜದ ಗೌರವಾಧ್ಯಕ್ಷ ರಾಮಲಿಂಗ ಬಾನರ್, ಪ್ರಧಾನ ಕಾರ್ಯದರ್ಶಿ ಕರಣಕುಮಾರ ಅಲ್ಲೂರ, ನಗರಾಧ್ಯಕ್ಷ ಪ್ರಭು ಹಲಕರ್ಟಿ, ಮುಖಂಡರಾದ ಬಸವರಾಜ ಚಿನ್ನಮಳ್ಳಿ, ಮಲ್ಲಿಕಾರ್ಜುನ ಎಮ್ಮೆನೋರ, ಹಣಮಂತ ಸಂಕನೂರ್, ಲಕ್ಷ್ಮೀಕಾಂತ ಸಾಲಿ, ದೇವಿಂದ್ರ ಅರಣಕಲ್, ಭೀಮಣ್ಣ ಹೊತಿನಮಡಿ, ಶರಣಪ್ಪ ನಾಶಿ, ಮುನಿಯಪ್ಪ ಕೊಳ್ಳಿ, ಚಂದ್ರು ಕಾಳಗಿ, ದತ್ತು ಮೈನಾಳಕರ್, ರಾಜು ಮುಧೋಳ, ಶರಣಪ್ಪ ಸಿದ್ರಾಮಗೋಳ, ಮಾರುತಿ ಇವಣಿ, ಶಿವಪ್ಪ ದೊಡ್ಡಮನಿ, ದಶರಥ ದೊಡ್ಡಮನಿ, ಮಲ್ಲು ಕೊಳಕೋರ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

## ಅ.23ರಂದು ಚನ್ನಮ್ಮಾಜಿ ಜಯಂತಿ ಅದ್ದೂರಿ ಆಚರಣೆಗೆ ನಿರ್ಧಾರ

**ಉದಯವಾಹಿನಿ, ಚಿಂಚೋಳಿ**

ಚಿಂಚೋಳಿ ತಾಲೂಕು ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಭಾರತ ದೇಶದ ರಕ್ಷಣೆಗೆ ತನ್ನ ಪ್ರಾಣವನ್ನೇ ತ್ಯಾಗ ಮಾಡಿ ಬ್ರಿಟಿಷರ ವಿರುದ್ಧ ಹೋರಾಡಿದ ವೀರ ವನಿತೆ ಕಿತ್ತೂರು ರಾಣಿ ಚನ್ನಮ್ಮ ಅವರ 4ನೇ ವರ್ಷದ ಜಯಂತಿ ಕಾರ್ಯಕ್ರಮದ ಕುರಿತು ಚಂದಾಪುರ ಪಟ್ಟಣದ ಹನುಮಾನ ಮಂದಿರದಲ್ಲಿ ಪೂರ್ವಭಾವಿ ಸಭೆ ಜರುಗಿತು.

ಸಮಾಜದ ಗೌರವಾಧ್ಯಕ್ಷ ರಮೇಶ ಪಡಶೆಟ್ಟಿ ಮಾತನಾಡಿ, ವೀರ ವನಿತೆ ಕಿತ್ತೂರು ರಾಣಿ ಚನ್ನಮ್ಮ ಜಯಂತಿಯನ್ನು ಕರ್ನಾಟಕ ಸರ್ಕಾರವು ರಾಜ್ಯದಾದ್ಯಂತ ಆಚರಿಸುತ್ತಿದೆ. ನಮ್ಮ ತಾಲೂಕಿನಲ್ಲಿಯೂ ಅ.23ರಂದು ಬೆಳಿಗ್ಗೆ 10:30 ಗಂಟೆಗೆ ಚಂದಾಪುರದಲ್ಲಿರುವ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ಜಯಂತಿ ಕಾರ್ಯಕ್ರಮವನ್ನು ವಿಜೃಂಭಣೆಯಿಂದ



ಆಚರಿಸಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಸಂಜೀವಕುಮಾರ ಪಾಟೀಲ,ಮುಖಂಡರಾದ ಕೈಲಾಸ ಕಲಬುರಗಿ,ವೀರೇಶ ದೇಸಾಯಿ,ಜಗದೀಶ ಸಜ್ಜನ್ ಕಲ್ಲೂರ,ವೀರಣ್ಣ ಗಂಗಾಣಿ,ರೇವಣಸಿದ್ದಪ್ಪ ದಾದಾಪೂರ,ಚಂದ್ರಶೇಖರ ಪಾರ,ವಿಜಯಕುಮಾರ ಬಳಕೇರಿ,ಶಿವಶರಣಪ್ಪ ಡೇಂಗಿ,ರವೀಂದ್ರ ಬಂಡೆಪ್ಪನೂರ,ದಯಾನಂದ ಹಿತ್ತಲ,ಶಿವಕುಮಾರ ಪವಡಶೆಟ್ಟಿ ಕೊಳ್ಳೂರು,ನಾಗರಾಜ ಸೀಳಿನ, ಸುರೇಶ ಸುಂಕದ,ಸುನೀಲ ನಿಡಗುಂದ,ವಿವೇಕ ಪಾಟೀಲ ದೇಗಲಮಡಿ ಹಾಗೂ ಪವನ ಪಾಟೀಲ ದೇಗಲಮಡಿ ಇದ್ದರು.

## ಪುರಸಭೆ ಇಂಜಿನಿಯರ್ ಜ್ಯೋತಿಶ್ರೀಗೆ ಸನ್ಮಾನ

**ಉದಯವಾಹಿನಿ, ಕೆಂಭಾವಿ**

ಮಹಾನಾಯಕ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಕೆಂಭಾವಿಯ ದಲಿತ ಬಳಗದ ವತಿಯಿಂದ ಮಹಾತ್ಮ ಗಾಂಧೀಜಿ ಅವರ ಜಯಂತಿ ಹಾಗೂ 'ಸ್ವಚ್ಛ ಭಾರತ ಅಭಿಯಾನ' ಅಂಗವಾಗಿ ಪಟ್ಟಣದಾದ್ಯಂತ ನೈರ್ಮಲ್ಯ ಕಾಪಾಡಲು ಶ್ರಮಿಸುತ್ತಿರುವ ಮತ್ತು ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಿ ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪುರಸಭೆಯ ಪರಿಸರ ಅಭಿಯಂತರೆ ಜ್ಯೋತಿಶ್ರೀ ಅವರನ್ನು ಕೆಂಭಾವಿ ದಲಿತರ ಬಳಗ ಮುಖಂಡರು ಗೌರವಿಸಿ, ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶಿವಶರಣಪ್ಪ ವಾಡಿ,ಲಾಲಪ್ಪ ಹೊಸಮನಿ, ಧರ್ಮಣ್ಣ ಬಡಗೇರ್,ಮಲ್ಲಿಕಾರ್ಜುನ ಖರ್ಗೆ ಬಡಗೇರ್, ಬಸವಣ್ಣೆಪ್ಪ ಮಾಳಳ್ಳಿಕರ್,ಸಂಗಣ್ಣ ಗುಡಿಮನಿ,ಮರೆಪ್ಪ ಗೌಂಡಿ, ಅನೇಕರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

## ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾ ಉಪಾಧ್ಯಕ್ಷರಾಗಿ ಬಾಷಾ ಕಲ್ಮನಿ ಆಯ್ಕೆ

**ಉದಯವಾಹಿನಿ, ಮಸ್ಕಿ**

ಇಲ್ಲಿನ ಬಿಜೆಪಿ ಮಂಡಲ ಅಲ್ಪಸಂಖ್ಯಾತರ ಮೋರ್ಚಾದ ಉಪಾಧ್ಯಕ್ಷರಾಗಿ ಭಾಷಾ ಕಲ್ಮನಿ ಅವರು ನೇಮಕಗೊಂಡಿದ್ದಾರೆ. ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಅವರು ನೇಮಕ ಪತ್ರ ವಿತರಿಸಿದರು. ಬಳಿಕ ಮಾತನಾಡಿದ ಅವರು, ಅಲ್ಪಸಂಖ್ಯಾತರ ಏಳ್ಗೆಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಪರಿಶ್ರಮವನ್ನು ಕಂಡು ಪಕ್ಷದ ಜವಾಬ್ದಾರಿ ವಹಿಸಲಾಗಿದೆ. ಪಕ್ಷದ ತತ್ವ ಸಿದ್ಧಾಂತವನ್ನು ಅಳವಡಿಸಿಕೊಂಡು ಪಕ್ಷವನ್ನು ಬಲಪಡಿಸಲು ಮುಂದಾಗಬೇಕೆಂದು ಹೇಳಿದರು. ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಹಾಗೂ ಪಕ್ಷದ ಪದಾಧಿಕಾರಿಗಳು ಅಭಿನಂದನೆಗಳು ಸಲ್ಲಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಶರಣಬಸವ ಸೊಪ್ಪಿಮಠ ಸೇರಿದಂತೆ ಇನ್ನಿತರಿದ್ದರು.




ಉದಯವಾಹಿನಿ ಚಿತ್ರ

ತಪ್ಪಿತಸ್ಥರು ಗೊತ್ತಾದಾಗ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲೇಬೇಕು– ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಆಕ್ರೋಶ

# ಬಳ್ಳಾರಿಯಲ್ಲೂ ಮತದಾರರ ಹೆಸರು ಡಿಲೀಟ್ ಮಾಡಲು ಯತ್ನ

**ಉದಯವಾಹಿನಿ, ಬಳ್ಳಾರಿ**

ಎಸ್‌ಐಆರ್ ಪ್ರಕ್ರಿಯೆಯಡಿ ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ 7,561 ಮತದಾರರ ಹೆಸರುಗಳನ್ನು ಮರುಪರಿಶೀಲನೆಗೆ ಒಳಪಡಿಸಿರುವ ವಿಚಾರದಲ್ಲಿ ಅಕ್ರಮ ನಡೆದಿದೆ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಆರೋಪಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆಯು ಜೂ.29, ಆರಂಭಗೊಂಡಿದ್ದು, ಆ.24ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಕರಡು ಪಟ್ಟಿಯಲ್ಲಿ ಹೆಸರು ಸೇರ್ಪಡೆ, ಅಳಿಕೆ ಹಾಗೂ ಆಕ್ಷೇಪಣೆ ಸಲ್ಲಿಸಲು ಚುನಾವಣಾ ಆಯೋಗ ಅವಕಾಶ ನೀಡಿತ್ತು. ಇದೇ ಸಂದರ್ಭದಲ್ಲಿ ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ 7,561 ಮತದಾರರ ಹೆಸರುಗಳನ್ನು ಮರುಪರಿಶೀಲನೆ ಮಾಡುವಂತೆ ಮನವಿ ಸಲ್ಲಿಸಲಾಗಿದ್ದು, ಈ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ದೂರಿದರು.

ಎಸ್‌ಐಆರ್ ನಿಯಮಗಳ ಪ್ರಕಾರ ಒಬ್ಬ ಬಿಎಲ್‌ಎ ಗರಿಷ್ಠ 30 ಫಾರ್ಮ್–7ಗಳನ್ನು ಮಾತ್ರ ಸಲ್ಲಿಸಲು ಅವಕಾಶವಿದೆ. ಆದರೆ, 7,561 ಮತದಾರರ ಹೆಸರುಗಳ ಕುರಿತು ಫಾರ್ಮ್–7ಗಳನ್ನು ಸಲ್ಲಿಸಿರುವುದು ಹಾಗೂ ಅವುಗಳನ್ನು ಅಧಿಕಾರಿಗಳು ಸ್ವೀಕರಿಸಲಿಲ್ಲವೆಂದಾಗ ಸುಟ್ಟು ಸಾಕ್ಷ್ಯ ನಾಶ ಮಾಡಿದ್ದಾರೆ. ಪ್ರತ್ಯೇಕ ದೂರು ಸಲ್ಲಿಸಿ, ಮರು ಪರೀಲನೆಗೆ ಮುಂದಾಗಿರುವುದೇ ಹಲವು ಪ್ರಶ್ನೆಗಳಿಗೆ ಕಾರಣವಾಗಿದೆ ಎಂದು ಶಾಸಕರು ಹೇಳಿದರು.

ಫಾರ್ಮ್–7ಗಳನ್ನು ಬಲ್ಕ್‌ನಲ್ಲಿ ಪ್ರಿಂಟ್ ಮಾಡಿ, ಸಿದ್ಧಪಡಿಸಿ ಸಲ್ಲಿಸಲಾಗಿದೆ. ಇಷ್ಟೊಂದು ಪ್ರಮಾಣದ ಫಾರ್ಮ್–7ಗಳನ್ನು ಯಾರು ಪ್ರಿಂಟ್



**1.** ಎಸ್‌ಐಆರ್ ಪ್ರಕ್ರಿಯೆಯು ಜೂ.29ಕ್ಕೆ ಆರಂಭಗೊಂಡಿತ್ತು
**2.** ಆ.24ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿತ್ತು
**3.** ಕರಡು ಪಟ್ಟಿಯಲ್ಲಿ ಹೆಸರು ಸೇರ್ಪಡೆ, ಆಕ್ಷೇಪಣೆಗೆ ಅವಕಾಶ ನೀಡಿತ್ತು.

ಮಾಡಿಸಿದರು? ಯಾರು ಅವುಗಳನ್ನು ಸಿದ್ಧಪಡಿಸಿ ನೀಡಿದರು? ಇದರ ಹಿಂದೆ ಯಾರಿದ್ದಾರೆ? ಎಂಬುದನ್ನು ತನಿಖೆ ಮೂಲಕ ಪತ್ತೆಹಚ್ಚಬೇಕು. ಈ ಷಡ್ಯಂತ್ರದ ಹಿಂದೆ ನೋಂದಣಿಯಾಗದ ಸಂಸ್ಥೆ ಇದೆ ಎಂಬ ಮಾಹಿತಿ ಇದೆ. ಈ ವಿಚಾರದಲ್ಲಿ ತಪ್ಪಿತಸ್ಥರು ಯಾರೆಂಬುದು ಗೊತ್ತಾದಾಗ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲೇಬೇಕು. ಈಗ ಮತದಾರರೂ ಕೂಡ ಅಂಥವರ ವಿರುದ್ಧ ದೂರು ದಾಖಲಿಸಲು ಮುಂದಾಗಿದ್ದಾರೆ. ಅಂತಹ ನಾಗರಿಕರಿಗೆ ನಾನು ಕಾನೂನು ನೆರವು ನೀಡಲಿದ್ದೇನೆ ಎಂದು ನಾರಾ ಭರತ್ ರೆಡ್ಡಿ ತಿಳಿಸಿದರು. ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳ ಮತದಾರರ ಪಟ್ಟಿಯನ್ನು ಗುರಿಯಾಗಿಸಿಕೊಂಡು ಹೆಸರುಗಳನ್ನು ತೆಗೆದುಹಾಕುವ ಪ್ರಯತ್ನ ನಡೆದಿದೆ ಎಂಬ ಅನುಮಾನವಿದೆ. ಈ ಅರ್ಜಿಗಳಲ್ಲಿನ ಸುಮಾರು ಶೇ.98.08ರಷ್ಟು ಮತದಾರರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಬೂತ್‌ನಿಂದ ಬೂತ್‌ಗೆ ಮತದಾರರ ಪಟ್ಟಿಯನ್ನು ಪರಿಶೀಲಿಸುವ ಮೂಲಕ ಹೆಸರುಗಳನ್ನು ಡಿಲೀಟ್ ಮಾಡುವ ಪ್ರಕ್ರಿಯೆ ನಡೆದಿದ್ದು, ಜನರ ಮತದಾನದ ಹಕ್ಕನ್ನು ಕಸಿದುಕೊಂಡು ಅವರಿಗೆ ಸರ್ಕಾರದ ಗ್ಯಾರಂಟಿ ಯೋಜನೆಗಳು ಸೇರಿದಂತೆ ಸೌಲಭ್ಯಗಳು ದೊರೆಯದಂತೆ ಹಾಗೂ ಅವರು ಮುಂದೆ ಬರಬಾರದು ಎನ್ನುವ ಉದ್ದೇಶದಿಂದ ಈ ಅಕ್ರಮ ನಡೆದಿದೆ ಎಂಬ ಅನುಮಾನವಿದೆ' ಎಂದು ಶಾಸಕರು ಆರೋಪಿಸಿದರು. ಮತದಾರರ ಹೆಸರನ್ನು ಅಕ್ರಮವಾಗಿ ಡಿಲೀಟ್ ಮಾಡುವುದು ಅಪರಾಧ. ಈ ವಿಚಾರದಲ್ಲಿ ಸಂಬಂಧಪಟ್ಟ ಚುನಾವಣಾ ಅಧಿಕಾರಿಗಳ ಜವಾಬ್ದಾರಿಯನ್ನೂ ಪರಿಶೀಲಿಸಬೇಕು ಎಂದು ಆಗ್ರಹಿಸಿದರು. ಬಿಎಲ್‌ಒ ಒಬ್ಬರು ಪೊಲೀಸ್ ಠಾಣೆಗೆ ತೆರಳಿದ ಸಂದರ್ಭದಲ್ಲಿ ಪ್ರಕರಣ ದಾಖಲಿಸುವ ವಿಚಾರದಲ್ಲಿ ಉಂಟಾದ ಗೊಂದಲ ಬಗ್ಗೆಯೂ ಪ್ರಶ್ನಿಸಿದ ಅವರು, ಪ್ರಕರಣ ದಾಖಲಿಸುವ ಅಧಿಕಾರ ಯಾರಿಗಿದೆ ಎಂಬುದನ್ನು ಎಸ್‌ಪಿ ಅವರು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

### ಎಫ್‌ಐಆರ್‌ಗೆ ಹೆದರುವ ಪ್ರಶ್ನೆಯೇ ಇಲ್ಲ

ಎಫ್‌ಐಆರ್ ವಿಚಾರದಲ್ಲಿ ಕಾಂಗ್ರೆಸ್‌ನವರ ಎಫ್‌ಐಆರ್‌ಗೆ ನಾವ್ಯಾರು ಹೆದರುವ ಪ್ರಶ್ನೆಯೇ ಇಲ್ಲ. ನ್ಯಾಯಾಂಗದ ಮೇಲೆ ಸಂಪೂರ್ಣ ನಂಬಿಕೆ ಇದೆ. ಕಾನೂನು ಹೋರಾಟ ಮಾಡುತ್ತೇವೆ ಎಂದು ಮಾಜಿ ಶಾಸಕ ಸೋಮಶೇಖರ್ ರೆಡ್ಡಿ ಕಾಂಗ್ರೆಸ್ ನಾಯಕರ ವಿರುದ್ಧ ಕಿಡಿಕಾರಿದ್ದಾರೆ.

ಪೈಲಟ್‌ಗೆ ಗೌರವ ಸಲ್ಲಿಸುವುದಾಗಿ ಇಸ್ರೇಲ್ ಘೋಷಣೆ!– ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರಿಗೆ ಎಲ್ಲೆಡೆಯಿಂದಲೂ ಪ್ರಶಂಸೆ

# ಸ್ಮಿತ್ ಮಚ್ಚರ್‌ಗೆ ಗುಜರಾತ್ ಪ್ರಶಸ್ತಿ: ಸೌದಿ ಅರೇಬಿಯಾದಿಂದ ಯುಎಇಗೆ ಏರ್‌ಲಿಫ್ಟ್

**ಅಹಮದಾಬಾದ್:** ಪ್ರಾಣಾಪಾಯದ ಸಂದರ್ಭದಲ್ಲೂ ತಮ್ಮ ಕರ್ತವ್ಯದಿಂದ ವಿಮುಖರಾಗದೇ, ಸಾವು – ಬದುಕಿನ ನಡುವಿನ ಹೋ ರಾಟದಲ್ಲೂ ಪ್ರಯಾಣಿಕರ ಜೀವ ಉಳಿಸಿದ ನಿಜವಾದ ನಾಯಕ, ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರಿಗೆ ಎಲ್ಲೆಡೆಯಿಂದಲೂ ಪ್ರಶಂಸೆ ವ್ಯಕ್ತವಾಗುತ್ತಿದೆ.

**1.** ಪೈಲಟ್‌ಗೆ 'ವಿಶಿಷ್ಟ ಗುಜರಾತ್ ಗರಿಮಾ ಪ್ರಶಸ್ತಿ ಘೋಷಣೆ
**2.** ತಮ್ಮ ಶೌರ್ಯದ ಮೂಲಕ ರಾಜ್ಯ ಮತ್ತು ರಾಷ್ಟ್ರದ ಗೌರವವನ್ನು ಹೆಚ್ಚಿಸಿದೆ
**3.** 174 ಪ್ರಯಾಣಿಕರ ಜೀವ ಉಳಿಸಲು ಅವರು ತೋರಿದ ಸಾಟಿ ಕಮ್ಮಿ ಏನಲ್ಲ

ಅವರ ಧೈರ್ಯ ಹಾಗೂ ಸಾಹಸವನ್ನು ಗುರುತಿಸಿ, ಗುಜರಾತ್ ಸರ್ಕಾರವು ಅವರಿಗೆ ಪ್ರಶಸ್ತಿಯನ್ನು ಘೋಷಿಸಿದೆ. ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಪೈಲಟ್‌ಗೆ 'ವಿಶಿಷ್ಟ ಗುಜರಾತ್ ಗರಿಮಾ ಪ್ರಶಸ್ತಿ'ಯನ್ನು ಘೋಷಿಸಿದ್ದಾರೆ. ತಮ್ಮ ಶೌರ್ಯದ ಮೂಲಕ ರಾಜ್ಯ ಮತ್ತು ರಾಷ್ಟ್ರದ ಗೌರವವನ್ನು ಹೆಚ್ಚಿಸಿದ ಗುಜರಾತ್‌ನ ಈ ಧೈರ್ಯಶಾಲಿ ಪುತ್ರನನ್ನು ಅವರು ಶ್ಲಾಘಿಸಿದ್ದಾರೆ. ತೀವ್ರವಾಗಿ ಗಾಯಗೊಂಡು ರಕ್ತಸಿಕ್ತರಾಗಿದ್ದರೂ 174 ಪ್ರಯಾಣಿಕರ ಜೀವ ಉಳಿಸುವಲ್ಲಿ ಸ್ಮಿತ್ ತೋರಿದ ಅಸಾಧಾರಣ ಧೈರ್ಯವನ್ನು ಪರಿಗಣಿಸಿ ಸರ್ಕಾರವು ಈ ವಿಶೇಷ ಪ್ರಶಸ್ತಿ ನೀಡಲಿದೆ ಎಂದು ತಿಳಿಸಿದ್ದಾರೆ. "ಇಡೀ ಜಗತ್ತು ಗುಜರಾತ್‌ನ ಧೈರ್ಯಶಾಲಿ ಪುತ್ರ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರಿಗೆ ನಮನ ಸಲ್ಲಿಸುತ್ತದೆ. ತೀವ್ರ ಗಾಯಗಳಾಗಿದ್ದರೂ ಮತ್ತು ರಕ್ತಸಿಕ್ತರಾಗಿದ್ದರೂ, 174 ಪ್ರಯಾಣಿಕರ ಜೀವ ಉಳಿಸಲು ಅವರು ತೋರಿದ ಸಾಟಿಯಿಲ್ಲದ ಧೈರ್ಯ ಮತ್ತು ಶೌರ್ಯ ನಿಜಕ್ಕೂ ಸ್ಫೂರ್ತಿದಾಯಕ ಮತ್ತು ಶ್ಲಾಘನೀಯ. ಅವರ ರಕ್ತದಲ್ಲಿ ಹರಿಯುತ್ತಿರುವ ಗುಜರಾತಿ ಮನೋಭಾವವು ನಮಗೆಲ್ಲರಿಗೂ ಅಪಾರ ಹೆಮ್ಮೆಯ ವಿಷಯವಾಗಿದೆ. ಅವರ ಧೈರ್ಯ ಮತ್ತು ಮಾನವೀಯ ಗುಣವನ್ನು ಗುರುತಿಸಿ, ನಮ್ಮ ಸರ್ಕಾರವು ಅವರಿಗೆ ವಿಶಿಷ್ಟ ಗುಜರಾತ್ ಗರಿಮಾ ಪ್ರಶಸ್ತಿ'ಯನ್ನು



ನೀಡಲಿದೆ. ಇಡೀ ರಾಜ್ಯವು ಅವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತದೆ" ಎಂದು ಭೂಪೇಂದ್ರ ಪಟೇಲ್ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. ಪೈಲಟ್ ಗುಜರಾತ್ ಮೂಲದವರಾಗಿದ್ದರೂ ಅವರ ಕುಟುಂಬವು ಬಹಳ ಹಿಂದೆಯೇ ಮುಂಬೈಗೆ ಸ್ಥಳಾಂತರಗೊಂಡಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಸೋಮನಾಥದಲ್ಲಿ ಸ್ಮಿತ್ ಮಚ್ಚರ್ ಚೇತರಿಕೆಗೆ ಪೂಜೆ:** ಏತನ್ಮಧ್ಯೆ, ಪ್ರಸಿದ್ಧ ಸೋಮನಾಥ ದೇವಾಲಯದ ಅರ್ಚಕರು ಸ್ಮಿತ್ ಮಚ್ಚರ್ ಅವರ ಶೀಘ್ರ ಚೇತರಿಕೆಗಾಗಿ ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸಿದ್ದಾರೆ. ಅವರು ಮಹಾಮೃತ್ಯುಂಜಯ ಮಂತ್ರ ಪಠಣದ ಮೂಲಕ ಅವರ ಚೇತರಿಕೆಗೆ ಹಾರೈಸುತ್ತಿದ್ದಾರೆ. ರಾಷ್ಟ್ರದ ಹೆಮ್ಮೆಯಾಗಿರುವ ಧೈರ್ಯಶಾಲಿ ಪೈಲಟ್ ಸ್ಮಿತ್ ಮಚ್ಚರ್ ಅವರ ಆರೋಗ್ಯ ಮತ್ತು ದೀರ್ಘಾಯುಷ್ಯಕ್ಕಾಗಿ ಸೋಮನಾಥ ದೇವಾಲಯದ ಟ್ರಸ್ಟ್ ವಿಶೇಷ ಮಹಾ ಪೂಜೆಯನ್ನು ನಡೆಸಿತು ಎಂದು ದೇವಾಲಯದ ಆಡಳಿತ ಮಂಡಳಿಯು ಹೇಳಿದೆ. ಈ ಬಗ್ಗೆ ಪ್ರಾರ್ಥನೆಯ ವಿಡಿಯೋವನ್ನು 'X' ನಲ್ಲಿ ಹಂಚಿಕೊಂಡಿದೆ.

**ಸೌದಿಯಿಂದ ದುಬೈಗೆ ಮಚ್ಚರ್ ಸ್ಥಳಾಂತರ:** ಫ್ಲೈದುಬೈ ವಿಮಾನ ಘಟನೆಯ ಸಂದರ್ಭದಲ್ಲಿ ಅಸಾಧಾರಣ ಧೈರ್ಯ ಪ್ರದರ್ಶಿಸಿ ಗಾಯಗೊಂಡಿದ್ದ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರನ್ನು ಸೌದಿ ಅರೇಬಿಯಾದಿಂದ ದುಬೈನ ಆಸ್ಪತ್ರೆಗೆ ವಿಮಾನದ ಮೂಲಕ ಸ್ಥಳಾಂತರಿಸಲಾಗಿದೆ. ಅವರು ಈ ಹಿಂದೆ ಸೌದಿ ಅರೇಬಿಯಾದ ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಹೆಚ್ಚಿನ ವೈದ್ಯಕೀಯ ಆರೈಕೆಗಾಗಿ ಅವರನ್ನು ಯುಎಇಗೆ ಕರೆತರಲಾಯಿತು. ಸೌದಿ ಅರೇಬಿಯಾದಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಅವರ ಆರೋಗ್ಯ ಸ್ಥಿತಿ ಸದ್ಯ ಸ್ಥಿರವಾಗಿದೆ ಎಂದು ತಿಳಿಸಿದೆ. ರಿಯಾದ್ ಮತ್ತು ಜೆಡ್ಡಾದಲ್ಲಿರುವ ಭಾರತೀಯ ಅಧಿಕಾರಿಗಳು ಅವರ ಪರಿಸ್ಥಿತಿಯನ್ನು ಗಮನಿಸುತ್ತಿದ್ದು, ಅವರಿಗೆ ಅಗತ್ಯ ವೈದ್ಯಕೀಯ ಚಿಕಿತ್ಸೆ ಸಿಗುವಂತೆ ನೋಡಿಕೊಳ್ಳುತ್ತಿದ್ದಾರೆ. ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರಿಗೆ ಇಸ್ರೇಲ್‌ನಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ. ಇಸ್ರೇಲ್‌ನ ನಾಗರಿಕರು ಸಾಮಾಜಿಕ ಜಾಲತಾಣಗಳಲ್ಲಿ ಕೃತಜ್ಞತೆಯ ಸಂದೇಶಗಳನ್ನು ಹಂಚಿಕೊಳ್ಳುತ್ತಿದ್ದು, ಅವರನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾದ ನಿಜವಾದ ನಾಯಕ (ಹೀರೋ) ಎಂದು ಕೊಂಡಾಡುತ್ತಿದ್ದಾರೆ.

### ಮಚ್ಚರ್ ಗೌರವಿಸಲು ಇಸ್ರೇಲ್ ನಿರ್ಧಾರ

ಏತನ್ಮಧ್ಯೆ, ಭಾರತದಲ್ಲಿರುವ ಇಸ್ರೇಲ್ ರಾಯಭಾರಿ ರೂವೆನ್ ಅಜರ್ ಅವರು ಮಾಧ್ಯಮ ಸಂದರ್ಶ ನವೊಂದರಲ್ಲಿ, ಸ್ಮಿತ್ ಮಚ್ಚರ್ ಅವರನ್ನು ಗೌರವಿಸಲು ಇಸ್ರೇಲ್ ಉದ್ದೇಶಿಸಿದೆ ಎಂದು ಘೋಷಿಸಿದರು. ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಪ್ರದರ್ಶಿಸಿದ ಅಸಾಧಾರಣ ಧೈರ್ಯದಿಂದಾಗಿ 180 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾದರು. ಸಹ–ಪೈಲಟ್‌ನಿಂದ ಚಾಕುವಿನಿಂದ ಇರಿತಕ್ಕೊಳಗಾಗಿದ್ದರೂ ಅವರು ಕಾಕ್‌ಪಿಟ್‌ನ ಬಾಗಿ ಲನ್ನು ತೆರೆಯುವಲ್ಲಿ ಯಶಸ್ವಿಯಾದರು. ಇದರಿಂದಾಗಿ ಪ್ರಯಾಣಿಕರು ಧೈರ್ಯದಿಂದ ಒಳಗೆ ಬಂದು ಅಪಾಯವನ್ನು ತಡೆಯಲು ಸಾಧ್ಯವಾಯಿತು. ಅವರು ಮಧ್ಯಪ್ರವೇಶಿಸದಿದ್ದರೆ, ಮತ್ತೊಂದು 9/11 ಮಾದರಿಯ ದುರಂತ ಸಂಭವಿಸುತ್ತಿತ್ತು ಮತ್ತು ದಾಳಿಕೋರ ವಿಮಾನದ ನಿಯಂತ್ರಣವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಸಾಧ್ಯತೆಯಿತ್ತು ಎಂದು ನನಗೆ ಅನ್ನಿಸುತ್ತದೆ. ಆದರೆ, ಭಾರತೀಯ ಪೈಲಟ್‌ನ ಸಮಯಪ್ರಜ್ಞೆಯು ಪರಿಸ್ಥಿತಿಯನ್ನೇ ಬದಲಿಸಿತು ಮತ್ತು ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿ ಬದುಕಿ ಬಂದರು ಎಂದು ಅವರು ಹೇಳಿದ್ದಾರೆ.

## ಅನಿಶ್ಚಿತತೆ, ಸುಂಕದ ಬಿಸಿ ನಡುವೆ ಭಾರತಕ್ಕೆ ಭೇಟಿ ನೀಡಿದ ಅಮೆರಿಕದ ಕಾಂಗ್ರೆಸ್ ನಿಯೋಗ

**ನವದೆಹಲಿ:** ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನ ಉಭಯ ಪಕ್ಷೀಯ ನಿಯೋಗವೊಂದು ಭಾರತಕ್ಕೆ ಭೇಟಿ ನೀಡಿದ್ದು, ಇದು ಭಾರತ ಮತ್ತು ಅಮೆರಿಕ ನಡುವಿನ ನಿರಂತರ ಬಾಂಧವ್ಯವನ್ನು ತೋರಿಸಿದೆ.

ಭೇಟಿಯಲ್ಲಿ ಉಭಯ ದೇಶಗಳ ನಡುವಿನ ಸಂಬಂಧಗಳ ಭವಿಷ್ಯದ ದಿಕ್ಕಿನ ಕುರಿತು ಚರ್ಚೆಗಳು ಸಾಗುತ್ತಿವೆ. ಎರಡು ದೇಶಗಳ ನಡುವಿನ ಅನಿಶ್ಚಿತತೆ, ಭಾರತದ ಮೇಲೆ ಹೆಚ್ಚುವರಿ ಸುಂಕ ವಿಧಿಸುವ ಭೀತಿ ನಡುವೆಯೂ ಭೇಟಿ ಸಾಗಿದೆ. ಜೊತೆಗೆ ಅಮೆರಿಕವು ಒಂದೆಡೆ ಚೀನಾ ಮತ್ತು ಇನ್ನೊಂದೆಡೆ ಪಾಕಿಸ್ತಾನ ದೊಂದಿಗಿನ ತನ್ನ ಸಂಬಂಧಗಳನ್ನು ಮರುರೂಪಿಸಿಕೊಳ್ಳುತ್ತಿದೆ. ಇದು ಭಾರತ ಅಮೆರಿಕ ಸಂಬಂಧಗಳಲ್ಲಿನ ಅಲ್ಪಾವಧಿಯ ಬಿಕ್ಕಟ್ಟು, ಚೀನಾದ ವಿರುದ್ಧದ ತಡೆಗೋಡೆಯಾಗಿ ಭಾರತದೊಂದಿಗಿನ ಅಮೆರಿಕದ ಸಂಬಂಧದ ಮೂಲಭೂತ ಅಂಶವೇ ಬದಲಾಗುತ್ತಿದೆಯೇ ಎಂಬ ಪ್ರಶ್ನೆಗೂ ಕಾರಣವಾಗಿದೆ.



ಈ ಎಲ್ಲ ಅನಿಶ್ಚಿತತೆಯ ನಡುವೆಯೂ ದ್ವಿಪಕ್ಷೀಯ ಸಂಬಂಧಗಳ ನಡುವೆ ರಕ್ಷಣಾ ಸಹಕಾರವು ಬಲವಾಗಿಯೇ ಉಳಿದಿದೆ. ಹೌಸ್ ವಿದೇಶಾಂಗ ವ್ಯವಹಾರಗಳ ಸಮಿತಿಯ ಅಧ್ಯಕ್ಷರಾದ ಪ್ರತಿನಿಧಿ ಬ್ರೈನ್ ಮಾಸ್ಟ್ ನೇತೃತ್ವದ ನಿಯೋಗವು ಸೋಮವಾರ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರನ್ನು ಭೇಟಿ ಮಾಡಿತು. ಈ ವೇಳೆ, ರಕ್ಷಣಾ ಕೈಗಾರಿಕಾ ಮತ್ತು ತಾಂತ್ರಿಕ ಸಹಕಾರಕ್ಕೆ ವಿಶೇಷ ಒತ್ತು ನೀಡುವ ಮೂಲಕ ವಿಕಸನಗೊಳ್ಳುತ್ತಿರುವ ಸಮಗ್ರ ಕಾರ್ಯತಂತ್ರ ಪಾಲುದಾರಿಕೆಯ ಕುರಿತು ಚರ್ಚಿಸಲಾಯಿತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಎರಡು ದೇಶಗಳ ನಡುವೆ ರಕ್ಷಣಾ ಸಂಬಂಧಗಳು ಬಲಗೊಳ್ಳುತ್ತಿದ್ದರೂ, ಅತಿದೊಡ್ಡ ಒತ್ತಡದ ಮೂಲವಾದ ವ್ಯಾಪಾರ'ದ ಪರಿಣಾಮಗಳಿಂದ ಸಂಪೂರ್ಣವಾಗಿ ಮುಕ್ತವಾಗಿಲ್ಲ. ಟ್ರಂಪ್ ಆಡಳಿತದಲ್ಲಿ, ಭೌಗೋಳಿಕ ರಾಜಕೀಯ ಒತ್ತಡ ಹೇರಲು ಸುಂಕಗಳು ಮತ್ತು ನಿರ್ಬಂಧಗಳು ಅಮೆರಿಕದ ಆದ್ಯತೆಯ ಸಾಧನವಾಗಿದೆ. ಇದರ ಪರಿಣಾಮವಾಗಿ ಅಮೆರಿಕದ ಪ್ರತಿಸ್ಪರ್ಧಿಗಳು ಹಾಗೂ ಮಿತ್ರರಾಷ್ಟ್ರಗಳು ಸುಂಕದ ಬೆದರಿಕೆಗಳು ಮತ್ತು ಸುಂಕ ಏರಿಕೆಯನ್ನು ಎದುರಿಸಬೇಕಾಗಿದೆ. ಭಾನುವಾರ, ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನ ನಿಯೋಗವು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಭೇಟಿಯಾಗಿದ್ದು, ರಷ್ಯಾದ ತೈಲವನ್ನು ಖರೀದಿಸುವುದರ ಮೇಲೆ ಶೇ 100ರಷ್ಟು ಸುಂಕವನ್ನು ವಿಧಿಸುವ ಅಧಿಕಾರ ಅಮೆರಿಕದ ಅಧ್ಯಕ್ಷರಿಗೆ ನೀಡುವ ರಷ್ಯಾ ಮತ್ತು ಇರಾನ್ ಮೇಲಿನ ನಿರ್ಬಂಧಗಳ ಕಾಯ್ದೆ – 2026 ಕುರಿತು ಚರ್ಚೆಗಳು ನಡೆಸಿದರು. ಭಾರತಕ್ಕೆ ತೆರಳಿದ್ದ ನಿಯೋಗದ ನೇತೃತ್ವ ವಹಿಸಿದ್ದ ಮಾಸ್ಟ್ ಮತ್ತು ಅವರ ಐವರು ಸದಸ್ಯರ ನಿಯೋಗದ ಬಹುಪಾಲು ಸದಸ್ಯರು ನಿರ್ಬಂಧಗಳ ಮಸೂದೆಯನ್ನು ಬೆಂಬಲಿಸಿದರು. ಈ ಮಸೂದೆಯು ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನಲ್ಲಿ 262 ರ ವಿರುದ್ಧ 159 ಮತಗಳ ದ್ವಿಪಕ್ಷೀಯ ಬೆಂಬಲದೊಂದಿಗೆ ಅಂಗೀಕಾರಗೊಂಡು ಕಾನೂನನ್ನಾಗಿ ಜಾರಿಗೆ ತಂದರು. ಈ ಹಿನ್ನೆಲೆಯಲ್ಲಿ ಮಿಸ್ರಿ ಮತ್ತು ಅಮೆರಿಕದ ನಿಯೋಗದ ನಡುವಿನ ಸಭೆಯಲ್ಲಿ ಈ ಮಸೂದೆಯ ಕುರಿತು ಚರ್ಚೆ ನಡೆದಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

## ಸಿಇಸಿ ರಾಜೀನಾಮೆಗೆ ಆಗ್ರಹಿಸಿ ದೆಹಲಿ, ಮುಂಬೈಯಲ್ಲಿ ಪ್ರತಿಭಟನೆ

**ದೆಹಲಿ/ಮುಂಬೈ:** ದೆಹಲಿ ಮತ್ತು ಮುಂಬೈನಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿವೆ. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಹಾಗೂ ಮತದಾರರ ಹೆಸರುಗಳ ನಿರ್ವಹಣೆಯಲ್ಲಿ ಅಕ್ರಮ ನಡೆದಿರುವ ಆರೋಪದ ಹಿನ್ನೆಲೆಯಲ್ಲಿ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಬಿಗಿ ಭದ್ರತೆ, ವಶಕ್ಕೆ ಪಡೆಯುವಿಕೆ ಮತ್ತು ನಿರ್ಬಂಧಗಳನ್ನು ವಿಧಿಸಲಾಗಿದೆ. ಮುಂಬೈನಲ್ಲಿ, ಕಾಕ್ರೋಚ್ ಜನತಾ ಪಾರ್ಟಿಯು SIR ಪ್ರಕ್ರಿಯೆಯಲ್ಲಿನ ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ, ಛತ್ರಪತಿ ಶಿವಾಜಿ ಮಹಾರಾಜ್ ಪಾರ್ಕ್‌ನ ಗೇಟ್ ಸಂಖ್ಯೆ 6ರ ಬಳಿ ಪ್ರತಿಭಟನೆ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ, ಶಿವಾಜಿ ಪಾರ್ಕ್ ಮತ್ತು ದಾದರ್ ನಿಲ್ದಾಣದ ಸುತ್ತಮುತ್ತ ಭದ್ರತೆಯನ್ನು ಹೆಚ್ಚಿಸಲಾಗಿದೆ.



## ಫಾರ್ಮ್–6 ನಿಯಮ ಸರಳಗೊಳಿಸಿದ ಚುನಾವಣಾ ಆಯೋಗ

**ನವದೆಹಲಿ:** ಇತ್ತೀಚೆಗೆ ನಡೆದ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲಾದ ಅರ್ಹ ನಾಗರಿಕರನ್ನು ಮರುಸೇರ್ಪಡೆ ಮಾಡಲು ಭಾರತೀಯ ಚುನಾವಣಾ ಆಯೋಗವು ದೇಶಾದ್ಯಂತ ವಿಶೇಷ ಅಭಿಯಾನ ನಡೆಸಲು ಆದೇಶ ಹೊರಡಿಸಿದೆ.

ದೇಶದ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು 13 ಕೋಟಿ ಮತದಾರರ ಹೆಸರುಗಳನ್ನು ಕರಡು ಪಟ್ಟಿಯಿಂದ ತೆಗೆದುಹಾಕಲಾಗಿತ್ತು. ಇದು ದೇಶಾದ್ಯಂತ ಭಾರಿ ರಾಜಕೀಯ ವಿವಾದ ಹಾಗೂ ಸಾರ್ವಜನಿಕ ಆಕ್ರೋಶಕ್ಕೆ ಕಾರಣವಾದ ಬೆನ್ನಲ್ಲೇ ಚುನಾವಣಾ ಆಯೋಗವು ಈ ಸರಿಪಡಿಸುವ ಕ್ರಮಕ್ಕೆ ಮುಂದಾಗಿದೆ. ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪೂರ್ಣಗೊಂಡ ಬಳಿಕ ಮತದಾರರ ಪಟ್ಟಿಯಿಂದ ಹೊರಗುಳಿದಿರುವ ಅರ್ಹ ಮತದಾರರನ್ನು ಗುರುತಿಸಿ, ಮತ್ತೆ ಪಟ್ಟಿಗೆ ಸೇರ್ಪಡೆಗೊಳಿಸಲು ವಿಶೇಷ ಅಭಿಯಾನ ಕೈಗೊಳ್ಳುವಂತೆ ಭಾರತದ ಚುನಾವಣಾ ಆಯೋಗವು ಮುಖ್ಯ ಚುನಾವಣಾಧಿಕಾರಿಗಳು, ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಮತದಾರರ ನೋಂದಣಿ ಅಧಿಕಾರಿಗಳಿಗೆ ಸೂಚಿಸಿದೆ. ಎಸ್‌ಐಆರ್‌ಗೂ ಮುನ್ನದ ಮತದಾರರ ಪಟ್ಟಿಯಲ್ಲಿ ಹೆಸರು ಇದ್ದರೂ ಪ್ರಸ್ತುತ ಪಟ್ಟಿಯಲ್ಲಿ ಕಾಣಿಸದಿರುವ ಮತದಾರರು, ಇದೇ ವೇಳೆ ಇನ್ನೂ ನೋಂದಣಿಯಾಗದ ಮೊದಲ ಬಾರಿಗೆ ಮತ ಚಲಾಯಿಸಲಿರುವವರು ಹಾಗೂ ಯುವ ಮತದಾರರನ್ನು ಈ ವಿಶೇಷ ಅಭಿಯಾನದಡಿ ಗುರುತಿಸಿ




ಪಟ್ಟಿಯಿಂದ ಹೊರಗುಳಿದವರ ಸೇರ್ಪಡೆಗೆ ವಿಶೇಷ ಅಭಿಯಾನಕ್ಕೆ ಸೂಚನೆ..!

ನೋಂದಾಯಿಸಲಾಗುತ್ತದೆ.

ಅಕ್ಟೋಬರ್ 1ರಂದು ಎಲ್ಲಾ ರಾಜ್ಯಗಳ ಮುಖ್ಯ ಚುನಾವಣಾಧಿಕಾರಿಗಳೊಂದಿಗೆ ಚುನಾವಣಾ ಆಯೋಗ ನಡೆಸಿದ ಸಭೆಯ ಬಳಿಕ ಈ ನಿರ್ದೇಶನ ನೀಡಲಾಗಿದೆ. ಮತದಾರರ ನೋಂದಣಿ ನಿರಂತರ ಪ್ರಕ್ರಿಯೆಯಾಗಿದ್ದು, ಎಸ್‌ಐಆರ್ ಸಂದರ್ಭದಲ್ಲಿ ನೋಂದಣಿಯಾಗದ ಕಾರಣಕ್ಕೆ ಯಾವುದೇ ಅರ್ಹ ನಾಗರಿಕರಿಗೆ ನೋಂದಣಿ ಅವಕಾಶ ನಿರಾಕರಿಸ ಬಾರದು ಎಂದು ಆಯೋಗ ತಿಳಿಸಿದೆ. ಈ ಅಭಿಯಾನದಡಿ ಬೂತ್ ಮಟ್ಟದ ಅಧಿಕಾರಿಗಳು ಪ್ರಸ್ತುತ ಮತದಾರರ ಪಟ್ಟಿಯನ್ನು ಎಸ್‌ಐಆರ್‌ಗೂ ಮುನ್ನದ ಪಟ್ಟಿಯೊಂದಿಗೆ ಹೋಲಿಕೆ ಮಾಡಿ, ಹಿಂದಿನ ಪಟ್ಟಿಯಲ್ಲಿ ಹೆಸರು ಇದ್ದು ಈಗ ಕಾಣೆಯಾಗಿರುವ ಮತದಾರರ ಬೂತ್‌ವಾರು ಪಟ್ಟಿಯನ್ನು ಸಿದ್ಧಪಡಿಸಲಿದ್ದಾರೆ. ಬಳಿಕ ಮನೆಮನೆಗೆ ತೆರಳಿ ಅಂತಹ ಮತದಾರರ ಪ್ರಸ್ತುತ ಸ್ಥಿತಿಯನ್ನು ಪರಿಶೀಲಿಸಿ, ಅರ್ಹರಾಗಿರುವವರಿಗೆ ನಮೂನೆ–6 ಮೂಲಕ ಮತ್ತೆ ನೋಂದಣಿ ಮಾಡಿಕೊಳ್ಳಲು ನೆರವಾಗಲಿದ್ದಾರೆ.

ಕಾನೂನು–ಸುವ್ಯವಸ್ಥೆ ಮತ್ತು ಸಾರ್ವಜನಿಕ ಸುರಕ್ಷತೆ ಹಿನ್ನೆಲೆ, ಸಾರ್ವಜನಿಕ ಸಭೆ ನಡೆಸಿದರೆ ಕ್ರಮ ಎಂದ ದೆಹಲಿ ಪೊಲೀಸ್

# ಸಿಇಸಿ ವಿರುದ್ಧ ಜಂತರ್ ಮಂತರ್‌ನಲ್ಲಿ ಪ್ರತಿಭಟನೆಗಿಲ್ಲ ಅನುಮತಿ: ಸೆಕ್ಷನ್ 163 ಜಾರಿ

**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ತೆಗೆದುಹಾಕಬೇಕು ಮತ್ತು ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ನಿಲ್ಲಿಸಬೇಕು ಎಂದು ಒತ್ತಾಯಿಸಿ ವಿವಿಧ ಸಂಘಟನೆಗಳು ಇಂದು ನಡೆಸಲು ಉದ್ದೇಶಿಸಿರುವ ಪ್ರತಿಭಟನೆಗಳ ಹಿನ್ನೆಲೆಯಲ್ಲಿ, ದೆಹಲಿ ಪೊಲೀಸ್ ಆಡಳಿತವು ಕಠಿಣ ಕ್ರಮಗಳನ್ನು ಕೈಗೊಂಡಿದೆ.

**1.** ಗಾಂಧಿ ಜಯಂತಿಯ ದಿನವಾದ ಶುಕ್ರವಾರ ಜಂತರ್ ಮಂತರ್‌ನಲ್ಲಿ ಪ್ರತಿಭಟನೆಗೆ ನಿಷೇಧ
**2.** ನವದೆಹಲಿಯ ಸುತ್ತಮುತ್ತ ಹೆಚ್ಚುವರಿ ಭದ್ರತಾ ಸಿಬ್ಬಂದಿ ನಿಯೋಜನೆ
**3.** ಸಿಇಸಿ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯ, ಪ್ರತಿಭಟನೆ

ರಾಷ್ಟ್ರ ರಾಜಧಾನಿಯ ಅತ್ಯಂತ ಸೂಕ್ಷ್ಮ ಮತ್ತು ಜನನಿಬಿಡ ಪ್ರದೇಶ ಎಂದು ಪರಿಗಣಿಸಲಾದ ಸಂಸತ್ ಭವನದ ರಸ್ತೆ ಪ್ರದೇಶದಲ್ಲಿ ಕಾನೂನು–ಸುವ್ಯವಸ್ಥೆ ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಕಾಪಾಡಲು ಈ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಗಾಂಧಿ ಜಯಂತಿಯ ದಿನವಾದ ಇಂದು ಜಂತರ್ ಮಂತರ್‌ನಲ್ಲಿ ನಡೆಸುವ ಪ್ರತಿಭಟನೆಗೆ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ ಮತ್ತು ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯಲು ನವದೆಹಲಿಯ ಸುತ್ತಮುತ್ತ ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್, ರಾಜ್ಯಸಭಾ ಸಂಸದ ಮನೋಜ್ ಝಾ ಮತ್ತು ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ್ ಭೂಷಣ್ ಅವರು ಕರೆ ನೀಡಿರುವ ಈ ಪ್ರತಿಭಟನೆಯು ಶುಕ್ರವಾರ ಬೆಳಗ್ಗೆ 11 ಗಂಟೆಯಿಂದ ಪ್ರಾರಂಭವಾಗಿದೆ.

ಮತದಾರರ ಪಟ್ಟಿ ಮತ್ತು ಚುನಾವಣೆಗಳ ನಿರ್ವಹಣೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿರುವ ಸಂಘಟಕರು, ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ ಅಥವಾ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಅಲ್ಲದೇ, ಚುನಾವಣಾ ಆಯೋಗವು ಮತದಾರರ ಪಟ್ಟಿ ಮತ್ತು ಎಸ್‌ಐಆರ್ ಪ್ರಕ್ರಿಯೆಯನ್ನು ನಿರ್ವಹಿಸುತ್ತಿರುವ ರೀತಿಯ ಬಗ್ಗೆಯೂ ಅವರು ಕಳವಳ ವ್ಯಕ್ತಪಡಿಸಿದ್ದು, ಇದು ನಾಗರಿಕರ ಮತದಾನದ




ಹಕ್ಕಿನ ರಕ್ಷಣೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದು ಪ್ರತಿಪಾದಿಸಿದ್ದಾರೆ.

ಈ ಪ್ರತಿಭಟನೆಯಲ್ಲಿ ಎಎಪಿ ನಾಯಕರು ಮತ್ತು ಕಾರ್ಯಕರ್ತರು, ಇಂಡಿಯನ್ ಯೂತ್ ಕಾಂಗ್ರೆಸ್‌ನ ಸದಸ್ಯರು ಮತ್ತು ಇತರರು ಕೂಡ ಭಾಗವಹಿಸುವ ಸಾಧ್ಯತೆಗಳಿವೆ.

ದೆಹಲಿ ಪೊಲೀಸ್ ಕಾಯಿದೆ, 1978ರ ಸೆಕ್ಷನ್ 70ರ ಉಪ–ವಿಭಾಗ (1)ರ ಖಂಡ (ಬಿ) ಅಡಿ ನೀಡಲಾದ ಅಧಿಕಾರವನ್ನು ಬಳಸಿಕೊಂಡು, ಸಂಸತ್ ಭವನದ ರಸ್ತೆಯ ಸಹಾಯಕ ಪೊಲೀಸ್ ಆಯುಕ್ತ ಅಜಯ್ ಶರ್ಮಾ ಅವರು ಈ ಪ್ರದೇಶದಲ್ಲಿ ಭಾರತೀಯ ನಾಗರಿಕ ಸುರಕ್ಷತಾ ಸಂಹಿತೆ, 2023ರ ಸೆಕ್ಷನ್ 163ರ ನಿಬಂಧನೆಗಳನ್ನು ಜಾರಿಗೊಳಿಸುವ ಅಧಿಕೃತ ಲಿಖಿತ ಆದೇಶವನ್ನು ಈ ಹಿಂದೆ ಹೊರಡಿಸಿದ್ದರು. ಆಗಸ್ಟ್ 23 ರಂದು ಜಾರಿಗೆ ಬಂದ ಈ ಆದೇಶವು 60 ದಿನಗಳವರೆಗೆ, ಅಂದರೆ ಅಕ್ಟೋಬರ್ 21 ರವರೆಗೆ ಜಾರಿಯಲ್ಲಿರುತ್ತದೆ.

ಇದನ್ನೇ ಪುನರುಚ್ಚರಿಸಿರುವ ದೆಹಲಿ ಪೊಲೀಸರು, ಸಾರ್ವಜನಿಕ ಸುರಕ್ಷತೆ, ಸಾರ್ವಜನಿಕ ಸುವ್ಯವಸ್ಥೆ ಮತ್ತು ಸುಗಮ ಸಂಚಾರವನ್ನು ಖಚಿತಪಡಿಸಿಕೊಳ್ಳಲು ನವದೆಹಲಿ ಜಿಲ್ಲೆಯಲ್ಲಿ BNSS, 2023ರ ಸೆಕ್ಷನ್ 163ರ ಅಡಿ ನಿಷೇಧಾಜ್ಞೆ ಜಾರಿಯಲ್ಲಿದೆ ಎಂದು ಶುಕ್ರವಾರ ಬೆಳಗ್ಗೆ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಪೂರ್ವಾನುಮತಿಯಿಲ್ಲದೇ ಸಾರ್ವಜನಿಕ ಸಭೆಗಳು ಅಥವಾ ಐದು ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪುಗೂಡುವಿಕೆ, ಮೆರವಣಿಗೆಗಳು, ಪ್ರತಿಭಟನೆಗಳು, ಪಿಕೆಟಿಂಗ್ ಅಥವಾ ಧರಣಿಗಳು, ಘೋಷಣೆ ಕೂಗುವುದು ಅಥವಾ ಭಾಷಣ ಮಾಡುವುದು; ಹಾಗೂ ಬಂದೂಕುಗಳು, ಬ್ಯಾನರ್‌ಗಳು, ಫಲಕಗಳು, ಲಾಠಿಗಳು, ಕತ್ತಿಗಳು, ಕೋಲುಗಳು, ಇಟ್ಟಿಗೆ ಚೂರುಗಳು ಅಥವಾ ಅಂತಹ ವಸ್ತುಗಳನ್ನು ಒಯ್ಯುವುದನ್ನು ನಿಷೇಧಿಸಲಾಗಿದೆ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

### ಭಾರಿ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಆದ್ಯತೆ

**ಭಾರಿ ಸಂಚಾರ ದಟ್ಟಣೆ ಮತ್ತು ಭದ್ರತಾ ಕಾರಣಗಳಿಂದಾಗಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಸಂಸತ್ ಭವನದ ರಸ್ತೆ (ಪಾರ್ಲಿಮೆಂಟ್ ಸ್ಟ್ರೀಟ್) ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ವಾಹನ ಹಾಗೂ ಪಾದಚಾರಿಗಳ ದಟ್ಟಣೆಯಿಂದ ಕೂಡಿದ ಅತ್ಯಂತ ಜನನಿಬಿಡ ಪ್ರದೇಶಗಳಾಗಿವೆ ಎಂದು ಆಡಳಿತ ಮಂಡಳಿ ಹೊರಡಿಸಿದ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.**

ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಹಾಗೂ ಯಾವುದೇ ಅನಧಿಕೃತ ಸಭೆ ಅಥವಾ ನಿಷೇಧಿತ ಚಟುವಟಿಕೆಯಿಂದ ದೂರವಿರುವಂತೆ ನಾಗರಿಕರು, ಸಂದರ್ಶಕರು ಮತ್ತು ಸಂಬಂಧಪಟ್ಟ ಎಲ್ಲರಿಗೂ ಪೊಲೀಸರು ಸಲಹೆ ನೀಡಿದ್ದಾರೆ. ಆದೇಶ ಉಲ್ಲಂಘಿಸಿದರೆ 'ಬಿಎನ್‌ಎಸ್ 2023'ರ ಸೆಕ್ಷನ್ 223 ಮತ್ತು ಕಾನೂನಿನ ಇತರ ಅನ್ವಯವಾಗುವ ನಿಬಂಧನೆಗಳ ಅಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಈ ಪ್ರದೇಶದಲ್ಲಿ ಸಾರ್ವಜನಿಕ ಸಭೆಗಳು, ಮೆರವಣಿಗೆಗಳು ಮತ್ತು ಪ್ರತಿಭಟನೆಗಳನ್ನು ಅನಿಯಂತ್ರಿತವಾಗಿ ನಡೆಸುವುದರಿಂದ ಸಂಚಾರಕ್ಕೆ ತೀವ್ರ ಅಡಚಣೆಯಾಗಬಹುದು ಎಂದು ಗುಪ್ತಚರ ಮತ್ತು ಆಡಳಿತಾತ್ಮಕ ವರದಿಗಳು ಸೂಚಿಸುತ್ತವೆ. ಅಲ್ಲದೇ, ನಾಗರಿಕರ ಸುರಕ್ಷತೆಗೆ ಅಪಾಯ ಮತ್ತು ಸಾರ್ವಜನಿಕ ಶಾಂತಿಗೆ ಭಂಗ ಉಂಟಾಗುವ ಆತಂಕವೂ ಇದೆ ಎಂದು ಮೂಲಗಳು ತಿಳಿಸಿವೆ.

ತಮ್ಮ ಹಿಂದಿನ ಆದೇಶದಲ್ಲಿ, ದೆಹಲಿ ಪೊಲೀಸ್ ಆಡಳಿತವು ಈ ನಿಷೇಧಾಜ್ಞೆಯಿಂದ 'ಜಂತರ್ ಮಂತರ್ ರಸ್ತೆ'ಯ ನಿರ್ದಿಷ್ಟ ಮತ್ತು ಗುರುತಿಸಲಾದ ಪ್ರದೇಶಕ್ಕೆ ವಿನಾಯಿತಿ ನೀಡಲಾಗಿದೆ ಎಂದು ಸ್ಪಷ್ಟಪಡಿಸಿತ್ತು. ಆದಾಗ್ಯೂ, ಜಂತರ್ ಮಂತರ್‌ನಲ್ಲಿ ನಡೆಯುವ ಕಾರ್ಯಕ್ರಮಗಳ ಸಮಯ ಮಿತಿಯನ್ನು, ಪೂರ್ವ ಲಿಖಿತ ಅನುಮತಿ ಇದ್ದರೂ ಸಹ, ಸಂಜೆ 5 ಗಂಟೆಯ ನಂತರ ವಿಸ್ತರಿಸುವಂತಿಲ್ಲ. ಈ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ದೆಹಲಿ ಪೊಲೀಸರು ತಿಳಿಸಿದ್ದರು.

## ಮಿನಿ ನ್ಯೂಸ್

### ಅರಬ್ಬಿ ಸಮುದ್ರದಲ್ಲಿ ಮುಳುಗಿ 8 ಮಂದಿ ಸಾವು

**ರಾಯಗಡ:** ಪುಣೆ ಸಮೀಪದ ಆಲಂದಿಯ ಎಂಟು ವಿದ್ಯಾರ್ಥಿಗಳು ಗುರುವಾರ ಕರಾವಳಿಯ ದಿವ್ಯಾಗರ್‌ಗೆ ಪ್ರವಾಸಕ್ಕೆ ತೆರಳಿದ್ದಾಗ ದುರಂತವೊಂದು ಸಂಭವಿಸಿದೆ. ನೀರಿನ ಆಳವನ್ನು ತಿಳಿಯದ ಈ ವಿದ್ಯಾರ್ಥಿಗಳು ಅರಬ್ಬಿ ಸಮುದ್ರದಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೃತ ವಿದ್ಯಾರ್ಥಿಗಳು ಆಲಂದಿಯ 'ವಿನ್ನರ್ಸ್ ಅಕಾಡೆಮಿ' ಎಂಬ ಖಾಸಗಿ ತರಬೇತಿ ಕೇಂದ್ರದಲ್ಲಿ ವ್ಯಾಸಂಗ ಮಾಡುತ್ತಿದ್ದು, ಪ್ರವಾಸಕ್ಕೆಂದು ದಿವ್ಯಾಗರ್‌ಗೆ ಬಂದಿದ್ದರು. ಘಟನೆಯ ಬಗ್ಗೆ ತಿಳಿದ ತಕ್ಷಣ, ಸ್ಥಳೀಯ ನಿವಾಸಿಗಳು ಮತ್ತು 'ಮಹಾಕಾಳಿ ಸ್ಪೋರ್ಟ್ಸ್'ನ ಸಿಬ್ಬಂದಿ ತಕ್ಷಣವೇ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಎಂಟು ಮೃತದೇಹಗಳನ್ನು ಸಮುದ್ರದಿಂದ ಹೊರತೆಗೆಯಲಾಗಿದೆ. ಮೃತರೆಲ್ಲರೂ ಸುಮಾರು 17ರಿಂದ 18 ವರ್ಷ ವಯಸ್ಸಿನವರಾಗಿದ್ದಾರೆ. ದುರಂತದಿಂದಾಗಿ ಆ ಪ್ರದೇಶದಲ್ಲಿ ಶೋಕದ ಛಾಯೆ ಆವರಿಸಿದೆ. ವದಂತಿಗಳನ್ನು ನಂಬದಂತೆ ಅಧಿಕಾರಿಗಳು ಪೋಷಕರಿಗೆ ಮನವಿ ಮಾಡಿದ್ದಾರೆ. ಘಟನೆಯ ಬಗ್ಗೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಿಎಂ ಫಡ್ನವೀಸ್, ಆಲಂದಿಯ ವಿನ್ನರ್ಸ್ ಅಕಾಡೆಮಿಯ ಎಂಟು ವಿದ್ಯಾರ್ಥಿಗಳು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆಯು ಅತ್ಯಂತ ನೋವಿನ ಮತ್ತು ದುಃಖಕರ ಸಂಗತಿಯಾಗಿದೆ. ಅವರಿಗೆ ನಾನು ಸಂತಾಪ ಸೂಚಿಸುತ್ತೇನೆ. ಈ ದುಃಖದ ಸಮಯದಲ್ಲಿ ನಾವು ಅವರ ಕುಟುಂಬಗಳೊಂದಿಗೆ ಇದ್ದೇವೆ. ಮೃತಪಟ್ಟವರೆಲ್ಲರೂ ಆಲಂದಿಯವರಾಗಿದ್ದು, ಮೃತದೇಹಗಳನ್ನು ಅವರ ಊರಿಗೆ ಕೊಂಡೊಯ್ಯಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

### ವಿಮಾನ ದುರಂತಕ್ಕೆ ಯತ್ನ, ಇದರ ಹಿಂದೆ ಇರಾನ್ ಕೈವಾಡವಿದ್ರೆ ತೀವ್ರ ದಾಳಿ ಎಚ್ಚರಿಕೆ

ದುಬೈನಿಂದ ಇಸ್ರೇಲ್‌ಗೆ ಹೋಗುತ್ತಿದ್ದ FlyDubai ವಿಮಾನವನ್ನು ಪತನಗೊಳಿಸಲು ಯತ್ನಿಸಿದ ಸಹ–ಪೈಲಟ್ ಹಿಂದೆ ಇರಾನ್ ಕೈವಾಡವಿದ್ದರೆ ಆ ದೇಶದ ಮೇಲೆ ಅತ್ಯಂತ ಕಠಿಣ ದಾಳಿ ನಡೆಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. 180ಕ್ಕೂ ಹೆಚ್ಚು ಪ್ರಯಾಣಿಕರಿದ್ದ ವಿಮಾನದಲ್ಲಿ ಸಹ – ಪೈಲಟ್ ಪೈಲಟ್‌ಗೆ ಚಾಕುವಿನಿಂದ ಇರಿದು ವಿಮಾನವನ್ನು ಕೆಳಕ್ಕೆ ಬೀಳಿಸಲು ಯತ್ನಿಸಿದ ಘಟನೆ ಇಡೀ ಜಗತ್ತನ್ನೇ ಬೆಚ್ಚಿಬೀಳಿಸಿದೆ. ಈ ಘಟನೆಗೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿರುವಾಗಲೇ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ. ಶ್ವೇತಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಈ ದಾಳಿಯ ಹಿಂದೆ ಇರಾನ್ ಇದೆಯಾ ಎಂಬ ಬಗ್ಗೆ ನಿಮಗೆ ಮಾಹಿತಿ ಸಿಕ್ಕಿದೆಯಾ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ್ದಾರೆ. "ನಾವು ಈಗ ಅದರ ಬಗ್ಗೆ ಕೆಲಸ ಮಾಡುತ್ತಿದ್ದೇವೆ. ನಾನು ಕೇಳುತ್ತಿರುವ ಮಾಹಿತಿಯ ಪ್ರಕಾರ ಉತ್ತರ ಹೌದು, ಆದರೆ ನಾವು ಇನ್ನೂ ತನಿಖೆ ಮಾಡುತ್ತಿದ್ದೇವೆ," ಎಂದು ಟ್ರಂಪ್ ಹೇಳಿದ್ದಾರೆ. ಇರಾನ್ ಭಾಗಿಯಾಗಿರಬಹುದು ಎಂದು ತಾವು ಏಕೆ ಶಂಕಿಸುತ್ತಿದ್ದೇವೆ ಎಂಬ ಬಗ್ಗೆ ಅವರು ಹೆಚ್ಚಿನ ವಿವರಣೆ ನೀಡಲಿಲ್ಲ. ಒಂದು ವೇಳೆ ಇರಾನ್ ಈ ದಾಳಿಯ ಹಿಂದೆ ಇದ್ದರೆ ಅಮೆರಿಕ ಪ್ರತೀಕಾರ ತೀರಿಸಿಕೊಳ್ಳುತ್ತದೆಯಾ ಎಂದು ಕೇಳಿದಾಗ, "ಓಹ್, ಅವರ ಮೇಲೆ ತೀವ್ರವಾಗಿ ದಾಳಿ ನಡೆಯುತ್ತದೆ, ಚಿಂತಿಸಬೇಡಿ. ನೀವು ಅವರನ್ನೇ ಕೇಳಿ. ಏನಾಯಿತು ಎಂದು ಅವರಿಗೆ ಗೊತ್ತು. ಅವರ ಮೇಲೆ ತೀವ್ರ ದಾಳಿ ನಡೆಯುತ್ತದೆ," ಎಂದು ಟ್ರಂಪ್ ಖಡಕ್ ಎಚ್ಚರಿಕೆ ನೀಡಿದ್ದಾರೆ.

### ತಾಂತ್ರಿಕ ದೋಷದಿಂದ ಒಮ್ಮೆಯೂ ಮಾಡಿರಲಿಲ್ಲವಂತೆ ತುರ್ತು ಭೂಸ್ಪರ್ಶ

**ನವದೆಹಲಿ:** ಯುಎಇಯ ದುಬೈನಿಂದ ಇಸ್ರೇಲ್‌ಗೆ ತೆರಳುತ್ತಿದ್ದ ಈಚ1073 ಫ್ಲೈದುಬೈ ವಿಮಾನದ ಪೈಲಟ್ ಆಗಿದ್ದ ಕ್ಯಾಪ್ಟನ್ ಸ್ಮಿತ್ ಸಹ ಪೈಲಟ್ ಜೊತೆಗಿನ ಸಂಘರ್ಷದಲ್ಲಿ ಗಾಯಗೊಂಡಿದ್ದರೂ ಸಹ ವಿಮಾನವನ್ನು ಸೌದಿ ಅರೇಬಿಯಾದ ತಬುಕ್ ಏರ್ ಪೋರ್ಟ್‌ನಲ್ಲಿ ತುರ್ತು ಭೂ ಸ್ಪರ್ಶ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಮೂಲಕ ನೂರಾರು ಪ್ರಯಾಣಿಕರ ಪ್ರಾಣ ಉಳಿಸಿದ್ದಾರೆ. ಪ್ರಧಾನಿ ಮೋದಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸೇರಿದಂತೆ ಅನೇಕರು ಅವರನ್ನು ಹೀರೋ ಎಂದು ಕೊಂಡಾಡಿದ್ದಾರೆ. ಭಾರತೀಯ ಮೂಲದ ಕ್ಯಾಪ್ಟನ್ ಸ್ಮಿತ್ ಕುರಿತು ವ್ಯಕ್ತವಾಗುತ್ತಿರುವ ಶ್ಲಾಘನೆ ಬೆನ್ನಲ್ಲೇ ಅವರ ಕುರಿತ ಸಂಕ್ಷಿಪ್ತ ಮಾಹಿತಿಯನ್ನು ತಿಳಿಯೋಣ.. ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರು 13 ವರ್ಷಗಳಿಗೂ ಹೆಚ್ಚು ಕಾಲ ಹಾಗೂ ಸುಮಾರು 9,750 ಗಂಟೆಗಳ ಹಾರಾಟದ ಅನುಭವ ಹೊಂದಿರುವ ಭಾರತೀಯ ಮೂಲದ ಕಮರ್ಷಿಯಲ್ ಪೈಲಟ್ ಆಗಿದ್ದಾರೆ. ಇದರ ಜೊತೆಗೆ ಲೈನ್ ಟ್ರೈನಿಂಗ್ ಕ್ಯಾಪ್ಟನ್ ಆಗಿಯೂ ಕಾರ್ಯ ನಿರ್ವಹಿಸಿದ ಅನುಭವ ಹೊಂದಿದ್ದಾರೆ. ಅವರ ಲಿಂಕ್ಡ್‌ಇನ್ ಪ್ರೊಫೈಲ್ ಪ್ರಕಾರ, ಅವರು ಬೋಯಿಂಗ್ 737–800 ಮತ್ತು ಬೋಯಿಂಗ್ 737 ಮ್ಯಾಕ್ಸ್ 8/9 ವಿಮಾನಗಳನ್ನು ಚಲಾಯಿಸಿದ ಅನುಭವದೊಂದಿಗೆ ಸುಮಾರು 9,750 ಗಂಟೆಗಳ ಹಾರಾಟದ ಅನುಭವ ಅವರಿಗಿದೆ.

### ಮಹಾರಾಷ್ಟ್ರದಲ್ಲಿ ಭೀಕರ ರಸ್ತೆ ಅಪಘಾತ: ದುರ್ಗಾ ಮೂರ್ತಿ ಹೊತ್ತೊಯ್ಯುತ್ತಿದ್ದ 7 ಭಕ್ತರ ಸಾವು, 21 ಮಂದಿಗೆ ಗಂಭೀರ ಗಾಯ

**ಅಮರಾವತಿ:** ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ಸಮೃದ್ಧಿ ಎಕ್ಸ್‌ಪ್ರೆಸ್‌ವೇನಲ್ಲಿ ಟ್ರಕ್ ಮತ್ತು ಬೊಲೆರೊ ಟೆಂಪೋ ಪಿಕಪ್ ವಾಹನದ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ 7 ಮಂದಿ ಭಕ್ತರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಮತ್ತು 21 ಜನರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

**ಏನಿದು ಘಟನೆ?:** ಅಮರಾವತಿ ಜಿಲ್ಲೆಯ ಧಮನ್‌ಗಾಂವ್ ರೈಲ್ವೆ ಸಮೀಪದ ಚಾನೆಲ್ 97 ಬಳಿ ಈ ಭೀಕರ ಅಪಘಾತ ಸಂಭವಿಸಿದೆ. ಬುಲ್ಧಾನಾ ಜಿಲ್ಲೆಯ ಶೇಗಾಂವ್‌ನಿಂದ



ವಾರ್ಧಾ ಜಿಲ್ಲೆಗೆ ದುರ್ಗಾ ದೇವಿಯ ಮೂರ್ತಿಯನ್ನು ಭಕ್ತರು ಬೊಲೆರೊ ಟೆಂಪೋ ಪಿಕಪ್ ವಾಹನದಲ್ಲಿ ತರುತ್ತಿದ್ದರು. ಅಕ್ಟೋಬರ್ 1, 2026 ರ ಮಧ್ಯರಾತ್ರಿ 12:45 ರ ಸುಮಾರಿಗೆ ಧಮನ್‌ಗಾಂವ್ ರೈಲ್ವೆ ಸ್ಟೇಷನ್ ಸಮೀಪದ ಹೆದ್ದಾರಿಯಲ್ಲಿ, ಅತಿ ವೇಗವಾಗಿ ಬಂದ ಟ್ರಕ್‌ವೊಂದು ಪಿಕಪ್ ವಾಹನಕ್ಕೆ ಹಿಂಬದಿಯಿಂದ ಬಲವಾಗಿ ಡಿಕ್ಕಿ ಹೊಡೆದಿದೆ. ಇನ್ನು, ಡಿಕ್ಕಿಯ ರಭಸಕ್ಕೆ ಟೆಂಪೋ ಸಂಪೂರ್ಣವಾಗಿ ಜಖಂಗೊಂಡಿದ್ದು, ಅದರಲ್ಲಿದ್ದ ಏಳು ಮಂದಿ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಅದರಂತೆ, ಅಪಘಾತಕ್ಕೆ ಟ್ರಕ್ ವೇಗವಾಗಿ ಬಂದು ಟೆಂಪೋದ ಟ್ರಾಲಿಗೆ ಹಿಂಬದಿಯಿಂದ ಬಲವಾಗಿ ಡಿಕ್ಕಿ ಹೊಡೆದಿದೆ ಕಾರಣ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ. ಮುಂದುವರೆದು, ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿರುವ 21 ಮಂದಿಯನ್ನು ರಕ್ಷಿಸಿ ತಕ್ಷಣವೇ ಸ್ಥಳೀಯ ಗ್ರಾಮೀಣ ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ, ಗಾಯಾಳುಗಳಲ್ಲಿ ಮೂವರ ಸ್ಥಿತಿ ಚಿಂತಾಜನಕವಾಗಿದ್ದು ಅವರಿಗೆ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ ಎಂದು ಅಮರಾವತಿ ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ನಿಕೇತನ್ ಕದಂ ತಿಳಿಸಿದ್ದಾರೆ.

# ಅಜ್ಜನ ಜನ್ಮದಿನದಂದು 'ಐಕಾನ್ಸಾ' ಸಾಮ್ರಾಜ್ಯ ಸ್ಥಾಪನೆ



ಭಾರತೀಯ ಚಿತ್ರರಂಗದಲ್ಲಿ ತಮ್ಮದೇ ಆದ ವಿಭಿನ್ನ ಸ್ಟೈಲ್‌ನಿಂದಲೇ ಐಕಾನ್ ಸ್ಟಾರ್ ಆಗಿ ಗುರುತಿಸಿಕೊಂಡಿರುವ ನಟ ಅಲ್ಲು ಅರ್ಜುನ್ ಅವರೀಗ ತಮ್ಮ ವೃತ್ತಿಜೀವನದಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯಿಟ್ಟಿದ್ದಾರೆ. ಹೌದು, ತಮ್ಮ ಅಜ್ಜ, ಹಿರಿಯ ನಟ ಹಾಗೂ ಪದ್ಮಶ್ರೀ ಪುರಸ್ಕೃತ ದಿ.ಅಲ್ಲು ರಾಮಲಿಂಗಯ್ಯ ಅವರ ಜನ್ಮವಾರ್ಷಿಕೋತ್ಸವದ ವಿಶೇಷ ಸಂದರ್ಭದಲ್ಲಿ, ಅವರು ತಮ್ಮ ನೂತನ ಕ್ರಿಯೇಟಿವ್ ಆಫೀಸ್ ಐಕಾನ್ಸಾಗೆ ಅಧಿಕೃತವಾಗಿ ಚಾಲನೆ ನೀಡಿದ್ದಾರೆ.

ಕುಟುಂಬದ ಆಪ್ತರು ಹಾಗೂ ಹಿತೈಷಿಗಳ ಸಮ್ಮುಖದಲ್ಲಿ ಸಾಂಪ್ರದಾಯಿಕ ಪೂಜಾ ವಿಧಿವಿಧಾನಗಳೊಂದಿಗೆ ಈ ಕಚೇರಿ ಉದ್ಘಾಟಿಸಲಾಗಿದೆ. ಈ ಮೂಲಕ ಅಲ್ಲು ಅರ್ಜುನ್ ಕೇವಲ ನಟನೆಯಷ್ಟೇ ಅಲ್ಲದೇ ಸಿನಿಮಾ ನಿರ್ಮಾಣ ಮತ್ತು ಸೃಜನಶೀಲ ವಿನ್ಯಾಸಗಳತ್ತ ತಮ್ಮ ಕಾರ್ಯವ್ಯಾಪ್ತಿ ವಿಸ್ತರಿಸಿದ್ದಾರೆ.

ತಮ್ಮ ಹೊಸ ಆರಂಭದ ಕ್ಷಣಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವ ನಟ, ಈ ಕಚೇರಿಯನ್ನು ತಮ್ಮ ಅಜ್ಜನ ಅಚ್ಚಳಿಯದ ಕಲಾ ಪರಂಪರೆಗೆ ಭಕ್ತಿಪೂರ್ವಕವಾಗಿ ಅರ್ಪಿಸಿದ್ದಾರೆ. ಭಾರತೀಯ ಚಿತ್ರರಂಗದಲ್ಲಿ ಸುಮಾರು ಐದು ದಶಕಗಳ ಕಾಲ ಗುರುತಿಸಿಕೊಂಡು, ಬರೋಬ್ಬರಿ 1,000ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಅಭಿನಯಿಸಿ ಇತಿಹಾಸ ನಿರ್ಮಿಸಿದ್ದ ಅಲ್ಲು ರಾಮಲಿಂಗಯ್ಯ ಅವರ ಸಿನಿಯಾತ್ರೆ ಇಡೀ ಕುಟುಂಬಕ್ಕೆ ಸದಾ ಪ್ರೇರಣೆಯಾಗಿದೆ. ಅವರ ಜನ್ಮದಿನದಂದೇ ಈ ವಿನೂತನ ಪಯಣವನ್ನು ಶುರು ಮಾಡುವ ಮೂಲಕ, ಆ ಪರಂಪರೆಯನ್ನು ಮುಂದಿನ ಪೀಳಿಗೆಗೂ ಕೊಂಡೊಯ್ಯುವ ಬದ್ಧತೆಯನ್ನು ಅಲ್ಲು ಅರ್ಜುನ್ ಮೆರೆದಿದ್ದಾರೆ.'

ಐಕಾನ್ಸಾ ಕಚೇರಿಯನ್ನು ಕೇವಲ ಒಂದು ಆಡಳಿತಾತ್ಮಕ ಕಚೇರಿಯನ್ನಾಗಿ ರೂಪಿಸದೇ, ನವೀನ ಆಲೋಚನೆಗಳು, ಸೃಜನಶೀಲ ಪ್ರಯೋಗಗಳು ಮತ್ತು ಕಲಾತ್ಮಕ ಸಹಯೋಗಗಳಿಗೆ ಮುಕ್ತ ವೇದಿಕೆಯಾಗುವಂತೆ ವಿನ್ಯಾಸಗೊಳಿಸಲಾಗಿದೆ. ಚಿತ್ರಕಥೆಗಳ ಚರ್ಚೆ, ಹೊಸ ತಂತ್ರಜ್ಞಾನಗಳ ಬಳಕೆ ಹಾಗೂ ಸಿನಿಮಾ ರಂಗದ ಪ್ರತಿಭಾವಂತರನ್ನು ಒಗ್ಗೂಡಿಸಿ ಹೊಸ ಪ್ರಾಜೆಕ್ಟ್‌ಗಳಿಗೆ ಜೀವ ತುಂಬುವ ಮಹತ್ವಾಕಾಂಕ್ಷೆಯ ಕೇಂದ್ರವಾಗಿ ಇದು ಕಾರ್ಯ ನಿರ್ವಹಿಸಲಿದೆ. ಕೇವಲ ನಟನಾಗಿ ಉಳಿಯದೇ ಸೃಜನಶೀಲ ನಾಯಕನಾಗಿ ಬೆಳೆಯುತ್ತಿರುವ ಅಲ್ಲು ಅರ್ಜುನ್ ಅವರ ಪಯಣದಲ್ಲಿ ಈ ಐಕಾನ್ಸಾ ಒಂದು ಮಹತ್ವದ ಹೆಜ್ಜೆಯಾಗಿ ಗುರುತಿಸಿಕೊಂಡಿದೆ.

ಇನ್ನೂ ನಟನ ಸಿನಿಮಾಗಳ ವಿಚಾರಕ್ಕೆ ಬಂದರೆ, ಅಲ್ಲು ಅರ್ಜುನ್ ಅವರ ಮುಂದಿನ ಪ್ರಾಜೆಕ್ಟ್‌ಗಳು ಅಭಿಮಾನಿಗಳಲ್ಲಿ ಭಾರಿ ಕುತೂ ಹಲ ಮೂಡಿಸಿದೆ. ಇತ್ತೀಚೆಗಷ್ಟೇ ಗಿನ್ನೆಸ್ ವಿಶ್ವ ದಾಖಲೆ ಬರೆದ ಯಶಸ್ವಿ ನಿರ್ದೇಶಕ ಅಟ್ಲೀ ಅವರ ಬಹುನಿರೀಕ್ಷಿತ ರಾಕಾ ಚಿತ್ರಕ್ಕಾಗಿ ಅವರು ಭರ್ಜರಿ ಸಿದ್ಧತೆ ನಡೆಸುತ್ತಿದ್ದಾರೆ. ಇದರ ಬೆನ್ನಲ್ಲೇ ತಮಿಳಿನ ಖ್ಯಾತ ನಿರ್ದೇಶಕ ಲೋಕೇಶ್ ಕನಕರಾಜ್ ನಿರ್ದೇಶನದಲ್ಲಿ ಮೂಡಿಬರಲಿರುವ ೦೦23 ಹಾಗೂ ವಿಶ್ವದಾದ್ಯಂತ ನಿರೀಕ್ಷೆ ಹುಟ್ಟುಹಾಕಿರುವ ಪುಷ್ಪ 3 ಚಿತ್ರಗಳು ಸೇರಿದಂತೆ ಹಲವು ಪ್ಯಾನ್-ಇಂಡಿಯಾ ಪ್ರಾಜೆಕ್ಟ್‌ಗಳಲ್ಲಿ ರಾಷ್ಟ್ರಪ್ರಶಸ್ತಿ ವಿಜೇತ ನಟ ಬ್ಯುಸಿಯಾಗಲಿದ್ದಾರೆ.



# '5 ವರ್ಷ, 2 ಕಥೆ, 1 ಕನಸು, ಮರೆಯಲಾಗದ ಪಯಣ

## ನಿಮ್ಮೆಲ್ಲರ ಪ್ರೀತಿಗೆ ನಾನೆಂದೂ ಆಭಾರಿ: ರಿಷಬ್ ಶೆಟ್ಟಿ



ಕಾಂತಾರ ಮತ್ತು ರಿಷಬ್ ಶೆಟ್ಟಿ ವಿಶೇಷ ಪರಿಚಯ ಬೇಕೆನಿಸದು. ಇಡೀ ಭಾರತೀಯ ಚಿತ್ರರಂಗ ಕನ್ನಡದತ್ತ ತಿರುಗಿ ನೋಡುವಂತೆ ಮಾಡಿದ ಡಿವೋಷನಲ್ ಸಿನಿಮಾ. 2025ರ ಅಕ್ಟೋಬರ್ 2ರಂದು ಅದ್ದೂರಿಯಾಗಿ ಬಿಡುಗಡೆಯಾದ ಸಿನಿಮಾವಿಂದು ಒಂದು ವರ್ಷ ಪೂರೈಸಿದ ಖುಷಿಯಲ್ಲಿದೆ. ಈ ಹಿನ್ನೆಲೆ, ಚಿತ್ರದ ಬರಹಗಾರ, ನಿರ್ದೇಶಕ ಮತ್ತು ನಾಯಕ ನಟ ರಿಷಬ್ ಶೆಟ್ಟಿ ಸರ್ವರಿಗೂ ಕೃತಜ್ಞತೆ ಅರ್ಪಿಸುವ ಹೃದಯಸ್ಪರ್ಶಿ ಪೋಸ್ಟ್ ಅನ್ನು ಹಂಚಿಕೊಂಡಿದ್ದಾರೆ.

**ರಿಷಬ್ ಶೆಟ್ಟಿ ಪೋಸ್ಟ್‌ನಲ್ಲೇನಿದೆ? :** "ಕಾಂತಾರ ಚಾಪ್ಟರ್ 1 – ಒಂದು ವರ್ಷ. 'ಕಾಂತಾರ' ಚಿತ್ರದ ಮೇಲೆ ಈಗಾಗಲೇ ಅಪಾರ ಪ್ರೀತಿಯನ್ನು ತೋರಿದ್ದ ಪ್ರೇಕ್ಷಕರ ಮುಂದೆ ಅದರ ಪ್ರಿಕ್ವೆಲ್ ಅನ್ನು ತರುವುದು ಅತ್ಯಂತ ದೊಡ್ಡ ಸವಾಲಾಗಿತ್ತು. ಕಥೆಯ ಮುನ್ನುಡಿಯನ್ನು ಒದಗಿಸುವುದು, ಅದರ ಮೂಲವನ್ನು ಆಳವಾಗಿ ಪರಿಶೋಧಿಸುವುದು ಮತ್ತು ಆ ನೆಲದ ಆತ್ಮವನ್ನು ಪ್ರತಿಬಿಂಬಿಸುವ ಕಥೆಯನ್ನು ಹೇಳುವುದು ಒಂದು ಜವಾಬ್ದಾರಿಯೂ ಹೌದು, ಹಾಗೆಯೇ ಅದೊಂದು ಸೌಭಾಗ್ಯವೂ ಹೌದು. ಕಾಂತಾರ ಚಾಪ್ಟರ್ 1 ತೆರೆಕಂಡು ಒಂದು ವರ್ಷ ಕಳೆದಿದೆ. ಆದರೂ ಪ್ರೇಕ್ಷಕರ ಪ್ರೀತಿ, ಮೆಚ್ಚುಗೆ ಮತ್ತು ಆಶೀರ್ವಾದಗಳು ನಿರಂತರವಾಗಿ ಹರಿದುಬರುತ್ತಲೇ ಇದೆ".

"ಕಾಡಿನ ಸಂಸ್ಕೃತಿ ನಾಡಿಗೆ ಬಂದ ಕಥೆಯನ್ನು ಹೇಳುವ ಈ ಪ್ರಯತ್ನದಲ್ಲಿ, ನನ್ನ ಬೆನ್ನೆಲುಬಾಗಿ ನಿಂತ ನನ್ನ ತಂಡದ ಪ್ರತಿಯೊಬ್ಬರಿಗೂ ಹೃದಯಪೂರ್ವಕ ಧನ್ಯವಾದಗಳು. ಪ್ರೇಕ್ಷಕರ ಮೊಗದಲ್ಲಿ ನಾನು ಕಂಡ ತೃಪ್ತಿಯ ಭಾವನೆ ಇನ್ನೂ ನನ್ನ ಮನಸ್ಸಿನಲ್ಲಿ ಹಸಿರಾಗಿದೆ. ಆ ಕ್ಷಣ, ಆ ನಿಶ್ಯಬ್ದ, ಆ ಚಪ್ಪಾಳೆ, ತದನಂತರ ವ್ಯಕ್ತವಾದ ಪ್ರೀತಿ – ಇವೆಲ್ಲವೂ ನನ್ನ ಮನಸ್ಸಿನಲ್ಲಿ ಸದಾ ವಿಶೇಷವಾಗಿ ಉಳಿದುಕೊಳ್ಳುತ್ತವೆ".

"ನಮ್ಮ ಮುಂದಿನ ಎಲ್ಲ ಪ್ರಯತ್ನಗಳಿಗೂ ನಿಮ್ಮ ಪ್ರೀತಿ, ಆಶೀರ್ವಾದ ಮತ್ತು ಬೆಂಬಲ ಹೀಗೆಯೇ ಇರಲಿ ಎಂದು ಆಶಿಸುತ್ತೇನೆ. ಐದು ವರ್ಷ, ಎರಡು ಕಥೆ, ಒಂದು ಕನಸು ಮರೆಯಲಾಗದ ಪಯಣ. ನಿಮ್ಮೆಲ್ಲರ ಪ್ರೀತಿಗೆ ನಾನೆಂದೂ ಆಭಾರಿ" ಎಂದು ಬರೆದುಕೊಂಡಿದ್ದಾರೆ.

**'ಕಾಂತಾರ'ಕ್ಕೆ 4 ವರ್ಷಗಳ ಸಂಭ್ರಮ:** ಮೂಲ ಚಿತ್ರ ಕಾಂತಾರ 2022ರ ಸೆಪ್ಟೆಂಬರ್ 30ಕ್ಕೆ ತೆರೆಕಂಡು ನಿರೀಕ್ಷೆಗೂ ಮೀರಿದ ಯಶಸ್ಸು ಕಂಡಿತು. ಚಿತ್ರ 4 ವರ್ಷ ಪೂರೈಸಿದ ಹಿನ್ನೆಲೆ, ಕಳೆದ ತಿಂಗಳು ಸೆಪ್ಟೆಂಬರ್ 30ರಂದು ಡಿವೈನ್ ಸ್ಟಾರ್ ವಿಶೇಷ ಪೋಸ್ಟ್ ಹಂಚಿಕೊಂಡಿದ್ದರು.

"ಕಾಂತಾರ – ಒಂದು ದಂತಕಥೆ. ಬೆಳ್ಳಿಪರದೆ ಮೇಲೆ 'ಕಾಂತಾರ' ಮೂಡಿಬಂದು ನಾಲ್ಕು ವರ್ಷಗಳೇ ಕಳೆದಿವೆ, ಉಳಿದಿದ್ದೆಲ್ಲವೂ ಇತಿಹಾಸ. ಎಲ್ಲೆಡೆಯಿಂದಲೂ ಪ್ರಶಸ್ತಿಗಳು ಹಾಗೂ ಮೆಚ್ಚುಗೆಯ ಮಹಾಪೂರವೇ ಹರಿದುಬಂದಿತು, ಆದರೆ, ನೀವೆಲ್ಲರೂ ಈ ಚಿತ್ರದ ಮೇಲೆ ತೋರಿದ ಪ್ರೀತಿ ಮಾತ್ರ ಸಾಟಿಯಿಲ್ಲದ್ದು. ಇದು ಕೇವಲ ನಾನು ನಿರ್ಮಿಸಿದ ಒಂದು ಚಲನಚಿತ್ರವಾಗಿರಲಿಲ್ಲ. ಇದೊಂದು ಜಗತ್ತು, ಅದರಲ್ಲಿ ನಾನು ಬದುಕಿದೆ. ಇದೊಂದು ಕಥೆ, ಅದನ್ನು ನಾನು ನನ್ನೊಳಗೆ ಹೊತ್ತುಕೊಂಡಿದ್ದೆ ಮತ್ತು ಇದೊಂದು ನಂಬಿಕೆ, ಅದು ನನ್ನ ವ್ಯಕ್ತಿತ್ವವನ್ನು ರೂಪಿಸಿತು".

"ಮನದಾಳದ ಕಥೆಯನ್ನು ಪರದೆ ಮೇಲೆ ತರಲು ನನ್ನೊಂದಿಗೆ ಹೆಜ್ಜೆ ಹಾಕಿದ, ಹಗಲಿರುಳು ಶ್ರಮಿಸಿದ ಪ್ರತಿಯೊಬ್ಬರಿಗೂ ಹೃದಯಪೂರ್ವಕ ಧನ್ಯವಾದಗಳು. ನಿಮ್ಮ ಪರಿಶ್ರಮ, ನಂಬಿಕೆ ಮತ್ತು ಪ್ರೀತಿಯೇ ಕಾಂತಾರವನ್ನು ನನಗಿಂತ ದೊಡ್ಡದಾಗಿಸಿತು. ನನ್ನ ಈ ಪ್ರಯತ್ನವನ್ನು ಕೊಂಡಾಡಿ, ಅದನ್ನು ಗಡಿದಾಟಿಸಿ, ಕನ್ನಡದ ಹೆಮ್ಮೆಯ ಸಿನಿಮಾವಾಗಿ ಇಡೀ ಪ್ರಪಂಚಕ್ಕೆ ತಲುಪಿಸಿದ ಪ್ರತಿಯೊಬ್ಬ ಪ್ರೇಕ್ಷಕನಿಗೂ ನಾನು ಎಂದೆಂದಿಗೂ ಚಿರಋಣಿ".

"ನಾಲ್ಕು ವರ್ಷಗಳ ನಂತರವೂ, ಆ ಪ್ರೀತಿ ಅಷ್ಟೇ ಗಾಢವಾಗಿ ಹಾಗೂ ಹೃದಯಸ್ಪರ್ಶಿಯಾಗಿ ಭಾಸವಾಗುತ್ತಿದೆ. 'ಕಾಂತಾರ' ಚಿತ್ರವನ್ನು ನಂಬಿದ, ಅದನ್ನು ಸಂಭ್ರಮಿಸಿದ ಮತ್ತು ನಮ್ಮ ನೆಲದಿಂದ ಜಗತ್ತಿನಾದ್ಯಂತ ಕೊಂಡೊಯ್ದ ಪ್ರತಿಯೊಬ್ಬರಿಗೂ ನಾನು ಸದಾ ಋಣಿಯಾಗಿದ್ದೇನೆ. ಈ ದಂತಕಥೆಯು ನಿಮ್ಮೆಲ್ಲರಿಗೂ ಸೇರಿದ್ದು" ಎಂದು ಬರೆದುಕೊಂಡಿದ್ದರು. ಅಮೋಘ ಅಭಿನಯಕ್ಕೆ ರಾಷ್ಟ್ರಪ್ರಶಸ್ತಿ ಪಡೆದ ರಿಷಬ್ ಶೆಟ್ಟಿ 'ಕಾಂತಾರ'ವೆಂಬ ಅದ್ಭುತ ಸಿನಿಮಾದ ಸಾರಥ್ಯ ವಹಿಸಿದ್ದ ರಿಷಬ್ ಶೆಟ್ಟಿ 2024ರಲ್ಲಿ 'ಅತ್ಯುತ್ತಮ ನಟ' ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಪ್ರಶಸ್ತಿ ಘೋಷಣೆ ಬಳಿಕ ಖುಷಿ ಹಂಚಿಕೊಂಡಿದ್ದ ಡಿವೈನ್ ಸ್ಟಾರ್, "ಕಾಂತಾರಕ್ಕೆ ಸಿಕ್ಕಿರುವ ರಾಷ್ಟ್ರೀಯ ಪ್ರಶಸ್ತಿಯ ಗೌರವಕ್ಕೆ ನಾನು ನಿಜವಾಗಿಯೂ ಆಭಾರಿಯಾಗಿದ್ದೇನೆ. ನನ್ನ ಈ ಪಯಣದಲ್ಲಿ ಭಾಗಿಯಾದ ಪ್ರತಿಯೊಬ್ಬ ಕಲಾವಿದರು, ತಂತ್ರಜ್ಞರು ಮತ್ತು ವಿಶೇಷವಾಗಿ ಹೊಂಬಾಳೆ ಫಿಲ್ಮ್ಸ್ ತಂಡಕ್ಕೆ ನಾನು ನನ್ನ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ. ಪ್ರೇಕ್ಷಕರು ಈ ಚಿತ್ರಕ್ಕೆ ಕೊಟ್ಟಿರುವ ಬೆಂಬಲವು ನನ್ನಲ್ಲಿ ಇನ್ನಷ್ಟು ಜವಾಬ್ದಾರಿ ತುಂಬಿದೆ. ನಮ್ಮ ವೀಕ್ಷಕರಿಗೆ ಇನ್ನೂ ಉತ್ತಮ ಚಿತ್ರ ನೀಡಲು ಇನ್ನೂ ಹೆಚ್ಚು ಶ್ರಮಿಸಲು ನಾನು ಬದ್ಧನಾಗಿದ್ದೇನೆ. ಅತ್ಯಂತ ಗೌರವದಿಂದ ನಾನು ಈ ಪ್ರಶಸ್ತಿಯನ್ನು ಕನ್ನಡ ಪ್ರೇಕ್ಷಕರು, ದೈವ ನರ್ತಕರು, ಅಪ್ಪು ಸರ್‌ಗೆ ಅರ್ಪಿಸುತ್ತೇನೆ. ದೈವದ ಆಶೀರ್ವಾದದಿಂದ ನಾವು ಈ ಕ್ಷಣ ತಲುಪಿದ್ದೇವೆ" ಎಂದು ತಿಳಿಸಿದ್ದರು.

# ದಸರಾದಲ್ಲಿ ಕನ್ನಡ ಚಿತ್ರರಂಗ ಭಾಗಿ, 2 ದಿನ ಶೂಟಿಂಗ್ ಇರುವುದಿಲ್ಲ, ಕಲಾವಿದರಿಗೆ ಅರಮನೆ ವೀಕ್ಷಣೆಗೆ ವ್ಯವಸ್ಥೆ

ವಿಶ್ವವಿಖ್ಯಾತ ನಾಡಹಬ್ಬ ದಸರಾಗೆ ದಿನಗಣನೆ ಆರಂಭವಾಗಿದೆ. ಈ ಬಾರಿಯ ಉತ್ಸವದಲ್ಲಿ ಇಡೀ ಕನ್ನಡ ಚಿತ್ರರಂಗವೇ ಭಾಗವಹಿಸಲಿದೆ. ಈ ಕುರಿತು ಮಾಹಿತಿ ನೀಡಲು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಪತ್ರಿಕಾಗೋಷ್ಠಿ ಆಯೋಜಿಸಲಾಗಿತ್ತು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಡಾ.ಜಯಮಾಲಾ ಮಾತನಾಡಿ, "ಈ ಸಾಲಿನ ದಸರಾದಲ್ಲಿ – ಅಕ್ಟೋಬರ್ 19, 20ರಂದು ಕಲಾವಿದರು ಸೇರಿದಂತೆ ಕನ್ನಡ ಚಿತ್ರರಂಗದ ಎಲ್ಲರೂ ಭಾಗವಹಿಸುತ್ತಿದ್ದೇವೆ. ದಸರಾ ರಂಗು ತರುತ್ತಿದೆ. ಇದೇ ಮೊಟ್ಟಮೊದಲ ಬಾರಿಗೆ ಈ ಸಂಭ್ರಮ ನಡೆಯುತ್ತಿದೆ. ಎಲ್ ಇಡಿ'ಯಲ್ಲಿ ಚಿತ್ರರಂಗ ನಡೆದು ಬಂದ ಹಾದಿಯನ್ನು ತೋರಿಸಲಾಗುತ್ತದೆ. ಎರಡು ಬಸ್‌ಗಳು ಸಹ ಇರಲಿದೆ.



2 ದಿನಗಳ ಕಾಲ ಚಿತ್ರೀಕರಣ ಇರುವುದಿಲ್ಲ. ರಾಕ್ಲೈನ್ ವೆಂಕಟೇಶ್ ಅವರಿಗೆ ಈ ಜವಾಬ್ದಾರಿಗಳನ್ನು ವಹಿಸಲಾಗಿದೆ. ಎಲ್ಲ ವ್ಯವಸ್ಥೆಯನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾಡಲಿದೆ. ಕನ್ನಡ ಚಿತ್ರರಂಗದ ಎಲ್ಲರ ಪರವಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಧನ್ಯವಾದ ಅರ್ಪಿಸುತ್ತೇವೆ" ಎಂದರು. ಇದು 416ನೇ ದಸರಾ. ಈ ಬಾರಿ ಅಂಬಾರಿ ಬಸ್‌ನಲ್ಲಿ ಕಲಾವಿದರಿಗೆ ಅರಮನೆ ವೀಕ್ಷಣೆ ಮಾಡಿಸುತ್ತೇವೆ. ಅರಮನೆಯಲ್ಲಿ 150 ಕಲಾವಿದರಿಗೆ ಆಸನ ವ್ಯವಸ್ಥೆ ಇರಲಿದೆ. ಅರಮನೆ ಮುಂಭಾಗದಲ್ಲೂ ಕಲಾವಿದರಿಗೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗುತ್ತಿದೆ. ಕಲಾವಿದರ ಭದ್ರತೆಗೆ ಹೆಚ್ಚಿನ ವ್ಯವಸ್ಥೆ ಇರಲಿದೆ. 15 ಲಕ್ಷ ಜನರು ಸೇರುವ ನಿರೀಕ್ಷೆಯಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಕಟ್ಟೆಚ್ಚರ ವಹಿಸಲಾಗಿದೆ. 45 ವರ್ಷಗಳಿಂದ ನಡೆಯುತ್ತಿದ್ದ ಚಲನಚಿತ್ರೋತ್ಸವ ಈ ಬಾರಿ ಇರುವುದಿಲ್ಲ. ಅದರ ಬದಲು ಕಲಾವಿದರಿಗೆ ಸಹಾಯಧನ ನೀಡಲು ಸಲಹೆ ನೀಡಲಾಗಿದೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರಾದ ಅನಂತ್ ನಾಗ್ ಅವರಿಂದ ದಸರಾ ಉದ್ಘಾಟನೆ ಮಾಡಿಸುವ ಆಶಯ ಸಹ ಇದ್ದು, ಮುಂದಿನ ದಿನಗಳಲ್ಲಿ ಮಾತುಕತೆ ನಡೆಸುತ್ತೇವೆ ಎಂದು ಮಂಡಳಿಯ ಮಾಜಿ ಅಧ್ಯಕ್ಷರಾದ ಸಾರಾ ಗೋವಿಂದು ಮಾಹಿತಿ ನೀಡಿದರು. ನಿರ್ಮಾಪಕ ರಾಕ್ಲೈನ್ ವೆಂಕಟೇಶ್ ಮಾತನಾಡಿ, "ದಸರಾ ಸಂಭ್ರಮದಲ್ಲಿ ಭಾಗಿಯಾಗಲು ಚಿತ್ರರಂಗಕ್ಕೆ ವಿಶೇಷ ಆಹ್ವಾನ ನೀಡಲಾಗಿದೆ. ಚಿತ್ರರಂಗದ ಎಲ್ಲರೂ ದಸರಾದಲ್ಲಿ ಭಾಗಿಯಾಗಲು ಮುಖ್ಯಮಂತ್ರಿಗಳು ಆಹ್ವಾನಿಸಿದ್ದಾರೆ. ನಟ, ನಟಿಯರು, ನಿರ್ದೇಶಕರು, ನಿರ್ಮಾಪಕರಿಗೆ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ಜಯಮಾಲ ಅವರೇ ಕರೆ ಮಾಡಿ ಆಹ್ವಾನಿಸುತ್ತಿದ್ದಾರೆ. ಈ ಬಾರಿ ದಸರಾ, ಚಿತ್ರರಂಗಕ್ಕೂ ಹಬ್ಬದ ಸಂಭ್ರಮವೇ. ಚಿತ್ರರಂಗಕ್ಕೆ ಇಷ್ಟು ಮಹತ್ವ ಹಿಂದೆ ಸಿಕ್ಕಿರಲಿಲ್ಲ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಧನ್ಯವಾದ ತಿಳಿಸುತ್ತೇನೆ" ಎಂದರು.

# ಕಾರವಾರದ ಮಣ್ಣಿನಿಂದ ಕರ್ನಾಟಕದ ರಣಜಿ ತಂಡದವರೆಗೆ: ರಿತೇಶ್ ಹೆಮ್ಮೆಯ ಪಯಣ!

ಅಕ್ಟೋಬರ್ 11 ರಿಂದ ಪ್ರಾರಂಭಗೊಳ್ಳಲಿರುವ ಪ್ರತಿಷ್ಠಿತ ರಣಜಿ ಟ್ರೋಫಿಗೆ ಕರ್ನಾಟಕ ತಂಡಕ್ಕೆ ಆಯ್ಕೆಯಾಗುವ ಮೂಲಕ ಕಾರವಾರದ ಪ್ರತಿಭಾವಂತ ಕ್ರಿಕೆಟಿಗ ರಿತೇಶ್ ಭಟ್ಕಳ್ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಬಾಲ್ಯದ ಕಠಿಣ ಪರಿಶ್ರಮ ಮತ್ತು ಛಲದಿಂದ ಈ ಹಂತಕ್ಕೇರಿರುವ ರಿತೇಶ್ ಅವರಿಗೆ ಕ್ರೀಡಾವಲಯದಿಂದ ಅಭಿನಂದನೆಗಳ ಮಹಾಪೂರವೇ ಹರಿದುಬರುತ್ತಿದೆ.

**ಶಿಕ್ಷಣ ಮತ್ತು ಕ್ರಿಕೆಟ್ ಮೇಲಿನ ಒಲವು:** ಕಾರವಾರದ ಸೇಂಟ್ ಜೋಸೆಫ್ಸ್ ಶಾಲೆ ಹಾಗೂ ನಂತರ ಹಿಂದೂ ಹೈಸ್ಕೂಲ್‌ನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪೂರೈಸಿದ ರಿತೇಶ್, ಬಾಲ್ಯದಿಂದಲೂ ಕ್ರಿಕೆಟ್ ಕ್ರೀಡೆಯ ಮೇಲೆ ವಿಶೇಷ ಆಸಕ್ತಿ ಹೊಂದಿದ್ದರು. ಮೈದಾನದಲ್ಲಿ ನಿರಂತರ ಅಭ್ಯಾಸ, ಶಿಸ್ತು ಮತ್ತು ಆಟದ ಮೇಲಿನ ಸಮರ್ಪಣಾ ಭಾವವೇ ಇಂದು ಅವರನ್ನು ಈ ಮಹತ್ವದ ಮೈಲಿಗಲ್ಲು ತಲುಪುವಂತೆ ಮಾಡಿದೆ.

**ಕ್ರೀಡಾ ಹಿನ್ನೆಲೆ ಮತ್ತು ಬೆಂಬಲ:** ರಿತೇಶ್ ಅವರ ಈ ಸಾಧನೆಯ ಹಿಂದೆ ಕುಟುಂಬದ ಪ್ರೋತ್ಸಾಹ ದೊಡ್ಡದಿದೆ. ಇವರ ತಂದೆಯವರು ಕಾರವಾರದ ಸರ್ಕಾರಿ ಪಾಲಿಟೆಕ್ನಿಕ್ (ಡಿಪ್ಲೊಮಾ) ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ವಿದ್ಯೆ ಹಾಗೂ ಮೌಲ್ಯಗಳ ಜೊತೆಗೆ ಮಗನ ಕ್ರೀಡಾ ಆಸಕ್ತಿಗೂ ಉತ್ತೇಜನ ನೀಡಿದ ಕುಟುಂಬದವರ ಬೆಂಬಲ ರಿತೇಶ್ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದೆ.

**ಕಾರವಾರದಿಂದ ರಾಜ್ಯ ತಂಡದವರೆಗೆ:** ಒಂದು ಕಾಲದಲ್ಲಿ ಕಾರವಾರದ ಸ್ಥಳೀಯ ಮೈದಾನಗಳಲ್ಲಿ ತಮ್ಮ ಆಟದ ಮೂಲಕ ಗಮನ ಸೆಳೆದಿದ್ದ ರಿತೇಶ್, ಇಂದು ಕರ್ನಾಟಕ ರಣಜಿ ತಂಡದ ಜೆರ್ಸಿ ಧರಿಸುವ ಅವಕಾಶ ಪಡೆದಿರುವುದು ಕರಾವಳಿ ಭಾಗದ ಕ್ರೀಡಾಪ್ರೇಮಿಗಳಿಗೆ ಅತ್ಯಂತ ಸಂತಸದ ಕ್ಷಣವಾಗಿದೆ. ಇದು




ಕೇವಲ ರಿತೇಶ್ ಅವರ ವೈಯಕ್ತಿಕ ಸಾಧನೆಯಷ್ಟೇ ಅಲ್ಲ, ಅವರ ಗುರುಗಳು, ಸ್ನೇಹಿತರು ಮತ್ತು ಬೆಂಬಲಿಸಿದ ಪ್ರತಿಯೊಬ್ಬರಿಗೂ ಹೆಮ್ಮೆಯ ವಿಷಯವಾಗಿದೆ.

ರಣಜಿ ಟ್ರೋಫಿ 2026–27ರ ಸೀಸನ್‌ಗೆ ಸಜ್ಜಾಗುತ್ತಿರುವ ರಿತೇಶ್ ಭಟ್ಕಳ್ ಅವರು ಈ ಅವಕಾಶವನ್ನು ಅತ್ಯುತ್ತಮವಾಗಿ ಬಳಸಿಕೊಂಡು ಇನ್ನಷ್ಟು ಎತ್ತರಕ್ಕೆ ಬೆಳೆಯಲಿ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಮಿಂಚಿ ಮುಂದೊಂದು ದಿನ ಭಾರತೀಯ ಕ್ರಿಕೆಟ್ ತಂಡವನ್ನು ಪ್ರತಿನಿಧಿಸುವಂತಾಗಲಿ ಎಂದು ಕಾರವಾರದ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ದೀಪಕ್ ಹನೆಹಳ್ಳಿ ಶುಭಾಶಯ ಕೋರಿದ್ದಾರೆ.

**ರಣಜಿ ಟ್ರೋಫಿಗೆ ಕರ್ನಾಟಕ ತಂಡ:** ಮಯಾಂಕ್ ಅಗರ್ವಾಲ್, ರಾಹುಲ್ ಕೆಎಲ್, ಅನೀಶ್ವರ್ ಗೌತಮ್, ಕರುಣ್ ನಾಯರ್, ಸ್ಮರಣ್ ಆರ್, ಅನೀಶ್ ಕೆವಿ, ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ, ಶಿಖರ್ ಶೆಟ್ಟಿ, ಪ್ರಸಿದ್ಧ್ ಎಂ ಕೃಷ್ಣ, ಅಭಿಲಾಷ್ ಶೆಟ್ಟಿ, ಮನ್ವಂತ್ ಕುಮಾರ್ ಎಲ್, ಕುಮಾರ್ ಎಲ್ ಆರ್, ರಿತೇಶ್ ಭಟ್ಕಳ್, ಶ್ರೀಜಿತ್ ಕೆಎಲ್.

# ಮಂಗಳೂರು ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಜಮೀನು ಮಂಜೂರಿಗೆ ಮೂಡಾಗೆ ಕೆಎಸ್‌ಸಿಎ ಪತ್ರ

ಕರಾವಳಿ ಭಾಗದ ಕ್ರಿಕೆಟ್ ಪ್ರತಿಭೆಗಳಿಗೆ ಜಾಗತಿಕ ಮಟ್ಟದ ಮೂಲಸೌಕರ್ಯ ಹಾಗೂ ವೇದಿಕೆ ಒದಗಿಸುವ ಮಹತ್ವದ ಹೆಜ್ಜೆಯಾಗಿ, ಮಂಗಳೂರಿನಲ್ಲಿ ಸುಸಜ್ಜಿತ ಕ್ರಿಕೆಟ್ ಕ್ರೀಡಾಂಗಣ ಹಾಗೂ ಸಂಕೀರ್ಣ ನಿರ್ಮಾಣ ಮಾಡಲು 50 ಎಕರೆ ಸರ್ಕಾರಿ ಭೂಮಿಯನ್ನು ಒದಗಿಸುವಂತೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಧಿಕೃತ ಪ್ರಸ್ತಾವನೆ ಸಲ್ಲಿಸಿದೆ.



ಕೆಎಸ್‌ಸಿಎ ಅಧ್ಯಕ್ಷರಾದ ಬಿ.ಕೆ. ವೆಂಕಟೇಶ್ ಪ್ರಸಾದ್ ಅವರು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಮೂಡಾ) ಅಧ್ಯಕ್ಷರಾದ ಸಂತೋಷ್ ಕುಮಾರ್ ಶೆಟ್ಟಿ ಅವರಿಗೆ ಅಕ್ಟೋಬರ್ 1, 2026ರಂದು ಈ ಕುರಿತು ಪತ್ರ ಬರೆದಿದ್ದಾರೆ.

**ಪತ್ರದಲ್ಲಿರುವ ಪ್ರಮುಖ ಅಂಶಗಳು ಹಾಗೂ ವಿವರಗಳು:** 50 ಎಕರೆ ಜಮೀನಿಗೆ ಮನವಿ: ಮಂಗಳೂರು ಭಾಗದಲ್ಲಿ ಕ್ರಿಕೆಟ್ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸುಮಾರು 50 ಎಕರೆ ಸರ್ಕಾರಿ ಭೂಮಿಯನ್ನು ನೇರ ಖರೀದಿ ಅಥವಾ 50 ವರ್ಷಗಳ ದೀರ್ಘಾವಧಿ ಗುತ್ತಿಗೆ ಆಧಾರದ ಮೇಲೆ ಕೆಎಸ್‌ಸಿಎಗೆ ಮಂಜೂರು ಮಾಡುವಂತೆ ಕೋರಲಾಗಿದೆ. ಶಿಕ್ಷಣ ಮತ್ತು ಕ್ರೀಡಾ ಸಂಸ್ಥೆಗಳಿಗೆ ಸಾಮಾನ್ಯವಾಗಿ ನೀಡಲಾಗುವ ಕನಿಷ್ಠ/ರಿಯಾಯಿತಿ ದರದಲ್ಲೇ ಈ ಜಮೀನು ಮಂಜೂರು ಮಾಡಬೇಕೆಂದು ಮನವಿ ಮಾಡಲಾಗಿದೆ. ಮಂಗಳೂರು ವ್ಯಾಪ್ತಿಯಲ್ಲಿ ಕ್ರಿಕೆಟ್ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಇತ್ತೀಚೆಗೆ ಮೂಡಾ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ ಅವರು ಕೆಎಸ್‌ಸಿಎ ಕಚೇರಿಗೆ ಭೇಟಿ ನೀಡಿ ಆಡಳಿತ ಮಂಡಳಿಯೊಂದಿಗೆ ನಡೆಸಿದ ಮಹತ್ವದ ಚರ್ಚೆ ಹಾಗೂ ಪ್ರಶಂಸನೀಯ ಕಾಳಜಿಯನ್ನು ಪತ್ರದಲ್ಲಿ ಸ್ಮರಿಸಲಾಗಿದೆ.

# ರಿಕರ್ವ್ ಆರ್ಚರಿಯಲ್ಲಿ ಚಿನ್ನ ಗೆದ್ದು ಇತಿಹಾಸ ಸೃಷ್ಟಿಸಿದ ಭಾರತ

ಏಷ್ಯನ್ ಗೇಮ್ಸ್‌ನಲ್ಲಿಂದು ಮಹಿಳಾ ರಿಕರ್ವ್ ಆರ್ಚರಿಯಲ್ಲಿ ಭಾರತ ತಂಡವು ಅತ್ಯುತ್ತಮ ಪ್ರದರ್ಶನ ನೀಡಿ ಏಷ್ಯನ್ ಕ್ರೀಡಾಕೂಟದಕಲ್ಲಿ ಚೊಚ್ಚಲ ಬಾರಿಗೆ ಚಿನ್ನದ ಪದಕವನ್ನು ಗೆದ್ದುಕೊಂಡಿದೆ. ಅಂಕಿತಾ ಭಕತ್, ಕೀರ್ತಿ ಶರ್ಮಾ ಮತ್ತು ಕುಂಕುಮ್ ಮೊಹೋದ್ ಅವರನ್ನೊಳಗೊಂಡ ಭಾರತೀಯ ತಂಡವು 10 ಬಾರಿಯ ಒಲಿಂಪಿಕ್ ಚಾಂಪಿಯನ್ ದಕ್ಷಿಣ ಕೊರಿಯಾವನ್ನು 5–3 ಅಂತರದಿಂದ ಸೋಲಿಸಿತು. ಇದರೊಂದಿಗೆ 2026 ಏಷ್ಯನ್ ಗೇಮ್ಸ್‌ನಲ್ಲಿ ಭಾರತಕ್ಕೆ ಸಿಕ್ಕ 11ನೇ ಚಿನ್ನದ ಪದಕ ಇದಾಗಿದೆ.

ಈ ಪಂದ್ಯದಲ್ಲಿ ಮೊದಲ ಎರಡು ಸೆಟ್‌ಗಳು ಸಮಬಲಗೊಂಡವು. ಎರಡೂ ತಂಡಗಳು ಕ್ರಮವಾಗಿ 54 ಮತ್ತು 56 ಅಂಕಗಳನ್ನು ಗಳಿಸಿ ತಲಾ ಒಂದು ಅಂಕಗಳನ್ನು ಕಲೆಹಾಕಿದವು. ವಿಶ್ವ ಚಾಂಪಿಯನ್‌ಗಳಾದ ಕಾಂಗ್ ಚೆಯೌಂಗ್, ಓಹ್ ಯೆಜಿನ್ ಮತ್ತು ಲೀ ಯುಂಜಿ ಅವರ ಕೊರಿಯಾ ತಂಡವು ಮೂರನೇ ಸೆಟ್‌ನಲ್ಲಿ ಎಡವಿತು. ಸತತ ಮೂರು ಬಾರಿ ಎಂಟು ಪಾಯಿಂಟ್‌ಗಳನ್ನು ಗಳಿಸಿ ಒಟ್ಟು 52 ಅಂಕಗಳನ್ನು ಕಲೆಹಾಕಿದರು. ಭಾರತ 55 ಅಂಕಗಳೊಂದಿಗೆ ಮೂರನೇ ಸೆಟ್ ಅನ್ನು ಗೆದ್ದುಕೊಂಡಿತು.

ನಾಲ್ಕನೇ ಸೆಟ್‌ನಲ್ಲಿ ದಕ್ಷಿಣ ಕೊರಿಯಾ 54 ಅಂಕ ಗಳಿಸಿತು. ಭಾರತ ಸಹ 54 ಅಂಕಗಳನ್ನು ಕಲೆಹಾಕಿ ಸಮಬಲಗೊಳಿಸಿತು. ಈ ಸ್ಪರ್ಧೆಯಲ್ಲಿ ಸೆಟ್ ಗೆಲುವಿಗೆ




2 ಅಂಕಗಳನ್ನು ನೀಡಲಾಗುತ್ತದೆ. ಅಂಕಗಳು ಸಮಬಲಗೊಂಡರೆ ತಲಾ ಒಂದು ಅಂಕಗಳನ್ನು ಹಂಚಿಕೆ ಮಾಡಲಾಗುತ್ತದೆ. ಭಾರತ ಒಂದು ಸೆಟ್ ಗೆದ್ದ ಕಾರಣ 2 ಅಂಕಗಳನ್ನು ಪಡೆದುಕೊಂಡಿತು. ಇದು ಚಿನ್ನದ ಗೆಲುವಿಗೆ ಕಾರಣವಾಯ್ತು.

ಇದಕ್ಕೂ ಮೊದಲು, ಭಾರತ ಸೆಮಿಫೈನಲ್‌ನಲ್ಲಿ ಚೀನಾವನ್ನು 5–1 ಅಂತರದಿಂದ ಸೋಲಿಸುವ ಮೂಲಕ ಮೊದಲ ಬಾರಿಗೆ ಏಷ್ಯನ್ ಕ್ರೀಡಾಕೂಟದಲ್ಲಿ ಫೈನಲ್ ತಲುಪಿತ್ತು. 2023ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯ ಮಹಿಳಾ ಕಾಂಪೌಂಡ್ ತಂಡ ಕಂಚಿನ ಪದಕವನ್ನು ಗೆದ್ದುಕೊಂಡಿತು ಎಂಬುದು ಗಮನಾರ್ಹ. ಈ ಗೆಲುವು ಭಾರತೀಯ ಮಹಿಳಾ ತಂಡ ಪ್ರದರ್ಶನದ ನಿರಂತರ ಸುಧಾರಣೆಗೆ ಸಾಕ್ಷಿಯಾಗಿದೆ.

ಮೇ ತಿಂಗಳಲ್ಲಿ ಶಾಂಘೈನಲ್ಲಿ ನಡೆದ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ತಂಡವು ಐದು ವರ್ಷಗಳ ಕಾಯುವಿಕೆಯನ್ನು ಕೊನೆಗೊಳಿಸಿತು. ಆ ಪಂದ್ಯಾವಳಿಯ ಸೆಮಿಫೈನಲ್‌ನಲ್ಲಿ ಭಾರತ ದಕ್ಷಿಣ ಕೊರಿಯಾವನ್ನು ಸೋಲಿಸಿತು. ಶಾಂಘೈನಲ್ಲಿ ಚಿನ್ನ ಗೆದ್ದ ಭಾರತೀಯ ತಂಡವು ಈ ಬಾರಿ ಬಹುತೇಕ ಅದೇ ಆಟಗಾರ್ತಿಯರನ್ನು ಒಳಗೊಂಡಿತ್ತು. ಮಾಜಿ ವಿಶ್ವದ ನಂಬರ್ ಒನ್ ದೀಪಿಕಾ ಕುಮಾರಿ ಆಯ್ಕೆ ಟ್ರಯಲ್ಸ್ ಮೂಲಕ ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆಯಲು ವಿಫಲರಾದರು ಕೀರ್ತಿ ಶರ್ಮಾ ಯಶಸ್ವಿ ಆದರು. ಈ ಸಾಧನೆಯೂ ವಿಶೇಷ ಏಕೆಂದರೆ ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಭಾರತ ಈ ಕ್ರೀಡಾಕೂಟದಲ್ಲಿ ಕಂಚು ಮೀರಿ ಪದಕವನ್ನು ಗೆದ್ದಿರಲಿಲ್ಲ. ಈಗ ಕುಂಕುಮ್ ಮತ್ತು ಧೀರಜ್ ಬೆಳ್ಳಿ ಪದಕ ಗೆಲ್ಲುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದ್ದಾರೆ.

## ಮಿಕ್ಸ್ ರಿಕರ್ವ್‌ನಲ್ಲಿ ಸೋಲು

ಏತನ್ಮಧ್ಯೆ, ರಿಕರ್ವ್ ಮಿಶ್ರ ತಂಡ ಫೈನಲ್‌ನಲ್ಲಿ ಭಾರತದ ಕುಂಕುಮ್ ಮೊಹೋದ್ ಮತ್ತು ಧೀರಜ್ ಬೊಮ್ಮದೇವರ ಜೋಡಿ ಚೀನಾ ವಿರುದ್ಧ ಸೋಲನ್ನು ಕಂಡು ಬೆಳ್ಳಿಗೆ ತೃಪ್ತಿ ಪಡಬೇಕಾಯ್ತು. ಆರಂಭಿಕ ಸೆಟ್‌ಗಳಲ್ಲಿ 7 ಮತ್ತು 8 ಅಂಕಗಳನ್ನು ಕಳೆದುಕೊಂಡ ಭಾರತೀಯ ಜೋಡಿ ಫೈನಲ್‌ನಲ್ಲಿ ತಮ್ಮ ಲಯ ಕಂಡುಕೊಳ್ಳಲು ವಿಫಲವಾಯಿತು. ಇದರ ಹೊರತಾಗಿಯೂ, ಇಬ್ಬರೂ ಆಟಗಾರರು ದಿಟ್ಟ ಹೋರಾಟ ನಡೆಸಿ ಭಾರತಕ್ಕೆ ಐತಿಹಾಸಿಕ ಪದಕವನ್ನು ತಂದುಕೊಟ್ಟರು.

# 12 ವರ್ಷಗಳ ಬಳಿಕ ಬಾಕ್ಸಿಂಗ್‌ನಲ್ಲಿ ಚಿನ್ನ ಗೆದ್ದ ಭಾರತ

ಭಾರತದ ದಂತಕಥೆ ಬಾಕ್ಸರ್ ಲೊವ್ಲಿನಾ ಬೊರ್ಗೊಹೈನ್ ತಮ್ಮ 29ನೇ ಹುಟ್ಟುಹಬ್ಬದಂದು ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ. ಫೈನಲ್‌ನಲ್ಲಿ ಅವರು ಚೀನಾದ ಬಾವೊ ಜೀಯಿ ಅವರನ್ನು 5–0 ಅಂತರದಿಂದ ಸೋಲಿಸಿದರು. ಈ ಗೆಲುವಿನೊಂದಿಗೆ, ಲೊವ್ಲಿನಾ ತಮ್ಮ ಮೊದಲ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕವನ್ನು ಗೆದ್ದರು. ಒಟ್ಟಾರೆ ಇದು ಏಷ್ಯನ್ ಕ್ರೀಡಾಕೂಟದ ಮಹಿಳಾ ಬಾಕ್ಸಿಂಗ್‌ನಲ್ಲಿ ಭಾರತಕ್ಕೆ ಸಿಕ್ಕ ಎರಡನೇ ಚಿನ್ನದ ಪದಕವಾಗಿದೆ. ಇದಕ್ಕೂ ಮೊದಲು, ಮೇರಿ ಕೋಮ್ 2014ರಲ್ಲಿ ಮಹಿಳಾ ಬಾಕ್ಸಿಂಗ್‌ನಲ್ಲಿ ಭಾರತಕ್ಕೆ ಚಿನ್ನ ಗೆದ್ದಿದ್ದರು. ಇದರರ್ಥ 12 ವರ್ಷಗಳ ನಂತರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಮತ್ತೆ ಚಿನ್ನ ಗೆದ್ದಿದೆ.

**ಮೊದಲ ಸುತ್ತಿನಿಂದಲೇ ಮುನ್ನಡೆ:** ಚಿನ್ನದ ಪದಕಕ್ಕಾಗಿ ನಡೆದ ಪಂದ್ಯದ ಮೊದಲ ಸುತ್ತಿನಲ್ಲಿ, ಚೀನಾದ ಬಾಕ್ಸರ್ ಬಾವೊ ಜಿಯಾಯಿ ಆಕ್ರಮಣಕಾರಿಯಾಗಿ ಪ್ರಾರಂಭಿಸಿದರು, ಪಂಚ್‌ಗಳ ಸುರಿಮಳೆಗೈದರು. ಆದಾಗ್ಯೂ, ಲೊವ್ಲಿನಾ ತನ್ನ ಹಿಡಿತವನ್ನು ಕಾಯ್ದುಕೊಂಡರು ಮತ್ತು ಬಾವೊ ಅವರ ಪ್ರತಿಯೊಂದು ದಾಳಿಯನ್ನು ಪ್ರಬಲವಾದ ಪ್ರತಿ-ಪಂಚ್‌ಗಳೊಂದಿಗೆ ಎದುರಿಸಿದರು. ರಿಂಗ್‌ನಲ್ಲಿ ಲೊವ್ಲಿನಾ ತನ್ನ ಸಮಯವನ್ನು ಅತ್ಯುತ್ತಮವಾಗಿ ಬಳಸಿಕೊಂಡಿದ್ದರಿಂದ




ಜಡ್ಜ್‌ಗಳು ಮೊದಲ ಸುತ್ತನ್ನು ಭಾರತೀಯ ಬಾಕ್ಸರ್ ಪರವಾಗಿ ಅಂಕಗಳನ್ನು ನೀಡಿದರು. ಇದರಿಂದ ಲೊವ್ಲಿನಾ 3–2 ಅಂತರದಿಂದ ಆರಂಭದಲ್ಲಿ ಮುನ್ನಡೆ ಸಾಧಿಸಿದರು.

ಎರಡನೇ ಸುತ್ತಿನಲ್ಲಿ ಪ್ರಾಬಲ್ಯ ಮತ್ತು ಮೂರನೇ ಸುತ್ತಿನಲ್ಲಿ ಏಕಪಕ್ಷೀಯ ಗೆಲುವು. ಎರಡನೇ ಸುತ್ತಿನಲ್ಲಿ ಚೀನಾದ ಬಾಕ್ಸರ್ ಹೆಚ್ಚು ಆಕ್ರಮಣಕಾರಿಯಾಗಿ ಆಡಿದರು, ಆದರೆ ಲೊವ್ಲಿನಾ ಸಹ ಪ್ರತಿದಾಳಿ ಮಾಡಿ ನಿಖರವಾದ ಮತ್ತು ಪರಿಣಾಮಕಾರಿ ಪಂಚ್‌ಗಳನ್ನು ಹೊಡೆದು ಎರಡನೇ ಸುತ್ತನ್ನು 4–1 ಅಂತರದಲ್ಲಿ ಗೆದ್ದರು, ಮೂರು ಸುತ್ತುಗಳಲ್ಲಿ ಗೆಲುವಿನ ನಂತರ ಅವರು 2–0 ಮುನ್ನಡೆ ಸಾಧಿಸಿದರು. ಅಂತಿಮ ಮತ್ತು ಮೂರನೇ ಸುತ್ತುಗಳಲ್ಲಿಯೂ ಲೊವ್ಲಿನಾ ಸಂಪೂರ್ಣ ನಿಯಂತ್ರಣ ಕಾಯ್ದುಕೊಂಡರು. ಬಾವೊ ಮುನ್ನಡೆಯಲು ಪ್ರಯತ್ನಿಸಿದರು. ಆದರೆ ಅವರ ಎಲ್ಲಾ ತಂತ್ರವು ಸಂಪೂರ್ಣವಾಗಿ ವಿಫಲವಾದವು. ಲೊವ್ಲಿನಾ 5–0 ಅಂತರದ ಸರ್ವಾನುಮತದ ನಿರ್ಧಾರದೊಂದಿಗೆ ಐತಿಹಾಸಿಕ ಗೆಲುವು ಸಾಧಿಸಿದರು.

**12 ವರ್ಷಗಳ ಬಳಿಕ ಸಿಕ್ಕ ಚಿನ್ನ:** ಲೊವ್ಲಿನಾ ಅವರ ಗೆಲುವು ಭಾರತೀಯ ತಂಡಕ್ಕೆ ಅತ್ಯಂತ ವಿಶೇಷವಾಗಿದೆ. ಈ ಅದ್ಭುತ ಪ್ರದರ್ಶನದೊಂದಿಗೆ, ಲೊವ್ಲಿನಾ 2026ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತಕ್ಕೆ 12ನೇ ಚಿನ್ನದ ಪದಕವನ್ನು ಖಚಿತಪಡಿಸಿದರು. ಇದಲ್ಲದೆ, ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಮಹಿಳಾ ಬಾಕ್ಸಿಂಗ್‌ನಲ್ಲಿ ಭಾರತಕ್ಕೆ ಇದು ಎರಡನೇ ಚಿನ್ನದ ಪದಕವಾಗಿದೆ. ಇದಕ್ಕೂ ಮೊದಲು, ದಂತಕಥೆ ಬಾಕ್ಸರ್ ಮೇರಿ ಕೋಮ್ 2014ರ ಏಷ್ಯನ್ ಕ್ರೀಡಾಕೂಟದಲ್ಲಿ ದೇಶಕ್ಕಾಗಿ ಚಿನ್ನದ ಪದಕವನ್ನು ಗೆದ್ದಿದ್ದರು. ಹನ್ನೆರಡು ವರ್ಷಗಳ ನಂತರ, ಲೊವ್ಲಿನಾ ಮೇರಿ ಕೋಮ್ ಅವರ ಐತಿಹಾಸಿಕ ಸಾಧನೆ ಅನುಸರಿಸಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news